ಪಂಚ ಕಲಶ ಗೋಪುರ

ಬಿ. ಜಿ. ಎಲ್. ಸ್ವಾಮಿ

ಕರ್ಣಾಟಕ ಸಂಘ
ಸೆಂಟ್ರಲ್ ಕಾಲೇಜ್, ಬೆಂಗಳೂರು

ಪಂಚಕಲಶಗೋಪುರ: ಇದು ಬೆಂಗಳೂರು ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘವನ್ನೂ ಅದರ ಇಬ್ಬರು ಅಧ್ಯಕ್ಷರು ಮೂವರು ಉಪಾಧ್ಯಕ್ಷರುಗಳನ್ನೂ ಕುರಿತ ಚಿತ್ರ ಶಾಲೆ. ಇಲ್ಲಿ ಶಬ್ದ ಚಿತ್ರಗಳಿವೆ, ರೇಖಾಚಿತ್ರಗಳಿವೆ.

ಈ ಚಿತ್ರಗಳನ್ನು ಬರೆದವರು ಶ್ರೀ ಬಿ. ಜಿ. ಎಲ್. ಸ್ವಾಮಿ, ಶ್ರೀಮಾನ್ ಡಿ. ವಿ. ಗುಂಡಪ್ಪನವರ ಮಕ್ಕಳು, ಸೆಂಟ್ರಲ್ ಕಾಲೇಜಿನಲ್ಲಿ ಎಂ.ಎಸ್‌ಸಿ., ಓದಿದವರು, ಸೆಂಟ್ರಲ್ ಕಾಲೆಜ್ ಕರ್ಣಾಟಕ ಸಂಘದ ಕಾರ್ಯದರ್ಶಿಗಳಾಗಿದ್ದವರು, ಈ ಪುಸ್ತಕದಲ್ಲಿ ಚಿತ್ರಿತರಾಗಿರುವ ಮಹನೀಯರ ಪ್ರೀತ್ಯಾದರಗಳಿಗೆ ಪಾತ್ರರಾದವರು. ಸ್ವಾಮಿ ಅಮೆರಿಕಕ್ಕೆ ಹೋಗಿ ಸಸ್ಯವಿಜ್ಞಾನದಲ್ಲಿ ಡಾಕ್ಟರೇಟ್ ಪಡೆದು, ಈಗ ಮದರಾಸಿನ ಪ್ರೆಸಿಡೆನ್ಸಿ ಕಾಲೇಜಿನ ಪ್ರಿನ್ಸಿಪಲ್ ಆಗಿದ್ದಾರೆ.

ಬೆಲೆ: ರೂ. ೨.೫೦

ಪಂಚ ಕಲಶ ಗೋಪುರ

ಹೊಸ ಅಧ್ಯಾಯ

ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘದ ಪ್ರಕಟನೆಗಳಿಗೆ ಸಂಬಂಧಪಟ್ಟ ವಿವರಗಳನ್ನು ಈ ಪುಸ್ತಕದ ೧೦೩–೧೦೪ನೆಯ ಪುಟಗಳಲ್ಲಿ ಕೊಟ್ಟಿದೆ. ಈ ಪ್ರಕಟನೆಗಳ ಎರಡನೆಯ ಆವರ್ತವು ಈ ಪುಸ್ತಕದೊಂದಿಗೆ ಮುಗಿಯುತ್ತದೆ.

ಸೆಂಟ್ರಲ್ ಕಾಲೇಜಿನ ಕನ್ನಡ ಇಲಾಖೆಯಲ್ಲಿ ಈ ವರ್ಷದಿಂದ ಹೊಸ ಅಧ್ಯಾಯ ಆರಂಭವಾಗಿದೆ. ಇದುವರೆಗೆ ನಾವು ಕನ್ನಡವನ್ನು Second Language ಆಗಿ, Minor Subject ಆಗಿ, Major Subject ಆಗಿ ಪಾಠ ಹೇಳುತ್ತಿದ್ದೆವು; ಅದಕ್ಕೆ ಹೊಂದಿಕೊಳ್ಳುವಂತೆ ಸಂಘದ ಪ್ರಕಟನೆಗಳು ರೂಪುಗೊಂಡುವು.

ಆದರೆ ಈಗ ಸೆಂಟ್ರಲ್ ಕಾಲೇಜಿನಲ್ಲಿ Under-graduate ತರಗತಿಗಳು ಕರಗಿ, Post-graduate ತರಗತಿಗಳು ಮಾತ್ರ ಆಗಿರುವುದರಿಂದ ಕನ್ನಡದಲ್ಲಿಯೂ ಈ ವರ್ಷದಿಂದ M.A., ತರಗತಿಗಳು ಆರಂಭವಾಗಿವೆ. ಇನ್ನು ಮುಂದೆ M.A., ತರಗತಿಯ ಅಧ್ಯಯನ ಅಧ್ಯಾಪನಗಳಿಗೆ ಹೊಂದಿಕೊಳ್ಳುವ ಪ್ರಕಟನೆಗಳನ್ನು ಪ್ರಕಟಿಸಬೇಕೆಂದು ಉದ್ದೇಶಿಸಿದ್ದೇವೆ.

ಶ್ರೀ ದೇವರು ನಮ್ಮ ಸಂಕಲ್ಪವನ್ನು ಕಾರ್ಯರೂಪಕ್ಕೆ ನಡಸಿಕೊಡಲಿ.

೫–೧೨–೧೯೬೪
ಸೆಂಟ್ರಲ್ ಕಾಲೆಜ್

ಜಿ. ಪಿ. ರಾಜರತ್ನಂ
ಸಂಘದ ಪರವಾಗಿ

ಪಂಚ ಕಲಶ ಗೋಪುರ

ಬಿ. ಜಿ. ಎಲ್. ಸ್ವಾಮಿ

ಕರ್ಣಾಟಕ ಸಂಘ
ಸೆಂಟ್ರಲ್ ಕಾಲೇಜ್, ಬೆಂಗಳೂರು

ಮೊದಲನೆಯ ಮುದ್ರಣ:
೫, ಡಿಸೆಂಬರ್, ೧೯೬೪

ಬೆಲೆ: ಸಾದಾ ಪ್ರತಿ ರೂ. ೨.೫೦; ಕ್ಯಾಲಿಕೊ ಪ್ರತಿ ೪.೨೫

ಬೆಂಗಳೂರು ಬಿ. ಬಿ. ಡಿ. ಪವರ್ ಪ್ರೆಸ್ಸಿನಲ್ಲಿ
ಯು. ನರಸಿಂಹ ಮಲ್ಯರಿಂದ ಮುದ್ರಿತವಾಯಿತು

ಒಳಪಿಡಿ

ಚಿತ್ರಗಳು

ಪಟಗಳು

ಈ ಪುಸ್ತಕದ ಪೂರ್ವಕಥೆ

§

ಪಂಚಕಲಶಗೋಪುರ: ಇದು ಬೆಂಗಳೂರು ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘವನ್ನೂ ಅದರ ಇಬ್ಬರು ಅಧ್ಯಕ್ಷರು ಮೂವರು ಉಪಾಧ್ಯಕ್ಷರುಗಳನ್ನೂ ಕುರಿತ ಚಿತ್ರಶಾಲೆ. ಇಲ್ಲಿ ಶಬ್ದಚಿತ್ರಗಳಿವೆ, ರೇಖಾಚಿತ್ರಗಳಿವೆ.

ಈ ಚಿತ್ರಗಳನ್ನು ಬರೆದವರು ಶ್ರೀ ಬಿ. ಜಿ. ಎಲ್. ಸ್ವಾಮಿ, ಶ್ರೀಮಾನ್ ಡಿ. ವಿ. ಗುಂಡಪ್ಪನವರ ಮಕ್ಕಳು, ಸೆಂಟ್ರಲ್ ಕಾಲೇಜಿನಲ್ಲಿ ಎಂ.ಎಸ್‌ಸಿ., ಓದಿದವರು, ಸೆಂಟ್ರಲ್ ಕಾಲೆಜ್ ಕರ್ಣಾಟಕ ಸಂಘದ ಕಾರ್ಯದರ್ಶಿಗಳಾಗಿದ್ದವರು, ಈ ಪುಸ್ತಕದಲ್ಲಿ ಚಿತ್ರಿತರಾಗಿರುವ ಮಹನೀಯರ ಪ್ರೀತ್ಯಾದರಗಳಿಗೆ ಪಾತ್ರರಾದವರು. ಸ್ವಾಮಿ ಅಮೆರಿಕಕ್ಕೆ ಹೋಗಿ ಸಸ್ಯವಿಜ್ಞಾನದಲ್ಲಿ ಡಾಕ್ಟರೇಟ್ ಪಡೆದು, ಈಗ ಮದರಾಸಿನ ಪ್ರೆಸಿಡೆನ್ಸಿ ಕಾಲೇಜಿನ ಪ್ರಿನ್ಸಿಪಲ್ ಆಗಿದ್ದಾರೆ.

ಪಂಚಕಲಶಗೋಪುರದ ಹಸ್ತಪ್ರತಿ ನಮ್ಮ ಕೈಗೆ ಬಂದಾಗ, ಅದನ್ನು ಓದಿದ ಮೇಲೆ—ಇ**ದು** ನಾವು ಪ್ರಕಟಿಸಬೇಕಾದ ಪುಸ್ತಕ, ಇದು **ನಾವು** ಪ್ರಕಟಿಸಬೇಕಾದ ಪುಸ್ತಕ, ಇದು ನಾವು **ಪ್ರಕಟಿಸಲೇಬೇಕಾದ** ಪುಸ್ತಕ ಎಂದು ನಮಗೆನ್ನಿಸಿತು.

ಸ್ವಾಮಿಯವರ ಹಸ್ತಪ್ರತಿಯನ್ನು ಓದಿಯಾದ ಮೇಲೆ, ಅವರ ಕಾರ್ಯದರ್ಶಿತ್ವಕ್ಕೆ ಸಂಬಂಧಪಟ್ಟ ವರ್ಷದ ವರದಿಯನ್ನು ತೆಗೆದು ನೋಡಿದೆ. ವರದಿ (೧೯೩೬–೩೭) ಶ್ರೀ ಎ. ಆರ್. ಕೃಷ್ಣಶಾಸ್ತ್ರೀ ಅವರ ಹಸ್ತಾಕ್ಷರದಲ್ಲಿದೆ. ೨೩–೭–೩೬ ರಂದು ನಡೆದ ಸಭೆಯಲ್ಲಿ ಶ್ರೀ ಬಿ. ಜಿ. ಲಕ್ಷ್ಮೀನಾರಾಯಣ ಸ್ವಾಮಿ ಕಾರ್ಯದರ್ಶಿಯಾಗಿ ನೇಮಕವಾದದ್ದು ಅಲ್ಲಿದೆ. ೩–೯–೩೬ ರಂದು ಶ್ರೀ ವಿ.ಸೀ. ಅವರು ಹೊಸಗನ್ನಡ ಕವಿತೆಗಳ ಪಠನಮಾಡಿದ್ದೂ, ೨೫–೧೧–೩೬ ರಂದು ಶ್ರೀ ಬಿ. ಎಂ. ಶ್ರೀಕಂಠಯ್ಯನವರು ಎಲ್ಲೋರ ಅಜಂತಗಳನ್ನು ಕುರಿತು ಭಾಷಣಮಾಡಿದ್ದೂ, ೨೧–೧–೩೭ ರಂದು ಶ್ರೀ ಸಿ. ಕೆ. ವೆಂಕಟರಾಮಯ್ಯನವರು ಕುಮಾರವ್ಯಾಸಭಾರತದ ದ್ರೌಪದಿಯನ್ನು ಕುರಿತು ಉಪನ್ಯಾಸಮಾಡಿದ್ದೂ ಅಲ್ಲಿದೆ. (ಪಂಚಕಲಶಗೋಪುರದಲ್ಲಿ ಇವುಗಳ ಪ್ರಸ್ತಾಪ ಬರುತ್ತದೆ.)

೨೫-೨-೩೭ರಂದು ಸಂಘದ 'ವಾರ್ಷಿಕೋತ್ಸವ ಮತ್ತು ಸಂತೋಷ ಕೂಟ' ನಡೆಯಿತು. ಶ್ರೀ ಪಂಜೆ ಮಂಗೇಶರಾಯರು ಮುಖ್ಯ ಅತಿಥಿಗಳೂ ಅಧ್ಯಕ್ಷರೂ ಆಗಿದ್ದರು. ೨೭-೨-೩೭ನೇ ದಿನಾಂಕದ "ನವಜೀವನ" ಪತ್ರಿಕೆ ಸಂಘದ ವಾರ್ಷಿಕೋತ್ಸವವನ್ನು ಕುರಿತು ಐದು ಕಾಲಂಗಳಷ್ಟು ವರದಿಯನ್ನು ಪ್ರಕಟಿಸಿತು. ಆ ವರದಿಯ ಮೊದಲನೆಯ ವಾಕ್ಯ ಹೀಗಿದೆ: "ಭರ್ಜರಿ ಉಪಾಹಾರವಾದ ಮೇಲೆ ಕಾರ್ಯಕ್ರಮವು 'ವನಸುಮ'ವೆಂಬ ಶ್ರೀ ಡಿ. ವಿ. ಜಿ. ಅವರ ಕೃತಿಯ ಗಾಯನದಿಂದ ಆರಂಭವಾಯಿತು." (ಶ್ರೀ ಕೃಷ್ಣಶಾಸ್ತ್ರಿಗಳ ಕಾಲದ ಕರ್ಣಾಟಕ ಸಂಘದಲ್ಲಿ 'ಭರ್ಜರಿ ಉಪಾಹಾರ'ಗಳೂ 'ವನಸುಮ'ದ ಪ್ರಾರ್ಥನೆಯೂ ಸಂಪ್ರದಾಯವಾಗಿತ್ತು ಎಂಬುದನ್ನು ಅಂದಿನವರು ಇಂದಿಗೂ ಜ್ಞಾಪಿಸಿಕೊಳ್ಳುತ್ತಾರೆ.) ಅದೇ ವರದಿಯಲ್ಲಿ "ವಿಜಯನಗರದ ಷಟ್ ಶತಮಾನೋತ್ಸವಕ್ಕೆ ಸಂಘವು ಶ್ರೀ ಬಿ. ಜಿ. ಎಲ್. ಸ್ವಾಮಿ ಅವರನ್ನು ತನ್ನ ಪ್ರತಿನಿಧಿಯಾಗಿ ಕಳಿಸಿಕೊಟ್ಟಿತು" ಎಂಬ ಸಂಗತಿಯೂ ಇದೆ.

ಪಂಚಕಲಶಗೋಪುರ ಕೇವಲ ಊಹನೆಯ ಕಲ್ಪನೆಯ ಫಲವಲ್ಲ. ವಾಸ್ತವವಾಗಿ ನಡೆದ ಘಟನೆಗಳನ್ನು ಸ್ವಾರಸ್ಯವಾಗಿ ನಿರೂಪಿಸಿರುವ ಯಥಾರ್ಥಕೃತಿ.

§

ಸ್ವಾಮಿ ಅವರಿಗೆ ತಮ್ಮ ವಿಶೇಷವ್ಯಾಸಂಗದ ಸಸ್ಯವಿಜ್ಞಾನದ ಜೊತೆಗೆ ಸಾಹಿತ್ಯ, ಸಂಗೀತ, ಚಿತ್ರಕಲೆ ಇವುಗಳಲ್ಲಿಯೂ ತಕ್ಕಮಟ್ಟಿನ ಪರಿಶ್ರಮವುಂಟು. ಒಳ್ಳೆಯ ಸಾಹಿತ್ಯವನ್ನು ಓದುವುದರ ಜೊತೆಗೆ, ತಮಗೆ ತಿಳಿದದ್ದನ್ನು ಕನ್ನಡದಲ್ಲಿ ಬರೆಯುವ ಹವ್ಯಾಸ ಇವರಿಗೆ ವಿದ್ಯಾರ್ಥಿದೆಸೆಯಿಂದಲೂ ಬೆಳೆದುಕೊಂಡು ಬಂದಿರುವಹಾಗಿದೆ.

ನನಗೆ ತಿಳಿದ ಮಟ್ಟಿಗೆ 'ಪ್ರಬುದ್ಧಕರ್ಣಾಟಕ'ದಲ್ಲಿ ಪ್ರಕಟವಾದ ಮೂರು ಶಾಸ್ತ್ರಲೇಖಗಳು ಇವರ ಚೊಚ್ಚಲು ಬರವಣಿಗೆಗಳು:

೧. ಆರ್ಜಿತಗುಣಗಳೂ ಅನುವಂಶೀಯತೆಯೂ
(ಪ್ರ.ಕ. ೧೯೩೯. ಸಂಪುಟ ೨೧, ಸಂಚಿಕೆ ೨, ಪುಟ ೪೩–೬೦.)

೨. ಲಿಂಗಜಾತಿಯ ಪರಸ್ಪರ ಪರಿಣಾಮ
(ಪ್ರ.ಕ. ೧೯೪೦. ಸಂಪುಟ ೨೨, ಸಂಚಿಕೆ ೧, ಪುಟ ೬೭–೭೨.)

೩. ಕದಂಬ

(ಪ್ರ.ಕ. ೧೯೪೧. ಸಂಪುಟ ೨೩, ಸಂಚಿಕೆ ೨, ಪುಟ ೧೩೧-೧೩೮.)

ಇವುಗಳಾದಮೇಲೆ, ೧೯೪೧ರಲ್ಲಿ, ಕನ್ನಡ ಸಾಹಿತ್ಯ ಪರಿಷತ್ತಿನ ವಾರ ಪತ್ರಿಕೆಯಾದ 'ಕನ್ನಡ ನುಡಿ'ಯಲ್ಲಿ '**ವಿಜ್ಞಾನವಿಹಾರ**'ವೆಂಬ ಶೀರ್ಷಿಕೆ ಯಲ್ಲಿ ನಾಲ್ಕು ಲಘುಪ್ರಬಂಧಗಳು ಪ್ರಕಟವಾದುವು:

೧. ಪ್ರಣಯ ಪ್ರಸಂಗ (ಸೆಪ್ಟೆಂಬರ್, ೫.)

೨. ಪ್ಲಾಟಿಪಸ್ (ಅಕ್ಟೋಬರ್, ೩.)

೩. ಜೇಡನ ಚರಕ (ಅಕ್ಟೋಬರ್, ೩೧.)

೪. ಹಸಿವಿನ ಬಳ್ಳಿ (ನವೆಂಬರ್, ೨೮.)

ಇದಾದ ಐದಾರು ವರ್ಷಗಳ ಮೇಲೆ, '**ವಧೂವರರಿಗೆ**' ಎಂದು ಹೆಸರಿಟ್ಟು, 'ಸತ್ಸಂತಾನಶಾಸ್ತ್ರದ ಕೈಪಿಡಿ' ಎಂಬ ಆರೋಗ್ಯವಿಜ್ಞಾನದ ಪುಸ್ತಕ ವನ್ನು ರಚಿಸಿದರು.

ಅದೇ ಸುಮಾರಿಗೆ, ತಾಯ ಗರ್ಭದಲ್ಲಿರುವ ಭ್ರೂಣದ ಬೆಳವಣಿಗೆಯ ಕಥೆಯನ್ನು (Biography of the unborn) ಇಂಗ್ಲಿಷಿನಿಂದ ಕನ್ನಡಕ್ಕೆ ಅನುವಾದ ಮಾಡಿದ್ದರು.

ಸ್ವಾಮಿ ೧೯೪೭ರಲ್ಲಿ ಅಮೆರಿಕಕ್ಕೆ ಪ್ರಯಾಣಮಾಡುವ ಮೊದಲು, ಸೆಂಟ್ರಲ್ ಕಾಲೆಜ್ ಸಸ್ಯಶಾಸ್ತ್ರ ಸಂಘದ ವಾರ್ಷಿಕೋತ್ಸವಕ್ಕಾಗಿ ಒಂದು ಸಣ್ಣ ಗೀತರೂಪಕ ಬರೆದರು. ನೀತಿಬೋಧನಾ ಪ್ರಧಾನವಾದರೂ ಹಾಸ್ಯರಸ ಪೂರ್ಣವಾದ "**ಮೀನಾಕ್ಷಿಯ ಸೌಗಂಧ**" ಎಂಬ ಈ ರೂಪಕ "ಕೊರವಂಜಿ ಮಾಸಪತ್ರಿಕೆ"ಯಲ್ಲಿ (ಆಗಸ್ಟ್ ೧೯೪೭, ಪುಟ ೫೭-೭೧) ಸಚಿತ್ರವಾಗಿ ಪ್ರಕಟವಾಯಿತು. ಬೇರೆ ಬೇರೆ ರಾಗಗಳಲ್ಲಿ ಮಟ್ಟುಗಳಲ್ಲಿ ಬರೆದವರೇ ಹಾಡಿದ ಈ ರೂಪಕ ನೋಡುವುದಕ್ಕೂ ಕೇಳುವುದಕ್ಕೂ ಹಿತವಾಗಿತ್ತು.

ಐದುವರ್ಷಗಳನಂತರ ಸ್ವಾಮಿ, ಅಮೆರಿಕದಿಂದ ಹಿಂದಿರುಗಿದಮೇಲೆ, "**ಅಮೆರಿಕದಲ್ಲಿ ನಾನು**" ಎಂಬ ಲೇಖನಮಾಲೆಯನ್ನು ಬರೆದರು. ಅದನ್ನು ಉಚಿತವಾದ ರೇಖಾಚಿತ್ರಗಳಿಂದ ತಾವೇ ಅಲಂಕರಿಸಿದರು. (ಈ ಬಣ್ಣದ ಪುಸ್ತಕ ಕನ್ನಡದಲ್ಲಿ ಇನ್ನೊಂದು ಇಲ್ಲ ಎಂದರೂ ತಪ್ಪಾಗಲಾರದು. ಇದನ್ನು ೧೯೬೨ರಲ್ಲಿ ಮೈಸೂರಿನ ಕಾವ್ಯಾಲಯ ಪ್ರಕಾಶಕರು ಪ್ರಕಟಿಸಿದ್ದಾರೆ.)

ಮದರಾಸಿಗೆ ಹೋದಮೇಲೆ ಸ್ವಾಮಿ ತಮಿಳನ್ನು ಕಲಿತಿದ್ದಾರೆ. ಅವರ ಕಲ್ಪಿಯ ಒಂದು ಸಣ್ಣ ಫಲವಾಗಿ ದಿವಂಗತ ಸುಬ್ರಹ್ಮಣ್ಯ ಭಾರತಿ ಅವರ **"ನವತಂತ್ರದ ಕತೆಗಳು"** ತಮಿಳಿನಿಂದ ಕನ್ನಡಕ್ಕೆ ಅನುವಾದವಾಗಿವೆ. (೨೬-೧-೧೯೫೯.)

ಹೀಗೆ, ನನಗೆ ಗೊತ್ತಿರುವ ಮಟ್ಟಿಗೆ, ೧೯೩೯ ರಿಂದ ೧೯೫೯ರ ವರೆಗೂ ಇವರು ನಡಸುತ್ತಿರುವ 'ಸತತಾಭ್ಯಾಸಪ್ರಯತ್ನ'ದ ಇತ್ತೀಚಿನ ಕನ್ನಡ ಕೃತಿ **"ಪಂಚಕಲಶಗೋಪುರ."** (೧೦-೨-೧೯೬೦.)

"ಅಮೆರಿಕದಲ್ಲಿ ನಾನು" ಪುಸ್ತಕಕ್ಕೆ ಗುಣದಲ್ಲಿ ಓರಗೆಯಾಗಿ ನಿಲ್ಲುವ "ಪಂಚಕಲಶಗೋಪುರ"ವನ್ನು ಸಂಘವು ಸಂತೋಷದಿಂದ ಸಂತೃಪ್ತಿಯಿಂದ ಪ್ರಕಟಿಸುತ್ತಿದೆ.

§

ನಮ್ಮ ಸಂಘದ ಪ್ರಕಟನೆಗಳ ಎರಡನೆಯ ಆವರ್ತವು ೧೯೫೨ ರಿಂದ ಆರಂಭವಾಯಿತು. ಇದಕ್ಕೆ ಎರಡು ವರ್ಷಗಳ ಹಿಂದೆ ನಾವು ಯೋಜನೆ ಹಾಕಿದಾಗ, ೨೨-೧೧-೫೦ ರ ಸಭೆಯಲ್ಲಿ, ಈ ಪುಸ್ತಕಗಳನ್ನು ಪ್ರಕಟಿಸ ಬೇಕೆಂದು ಕಾರ್ಯಸಮಿತಿ ನಿರ್ಧರಿಸಿತು:

1. ಶ್ರೀ ಕೆ. ವಿ. ಅಯ್ಯರ್—ಕೈಲಾಸಂ ಅವರ ಸ್ಮರಣೆ
2. ಶ್ರೀ ಮೋ.ಶಂ. ಸುಬ್ರಹ್ಮಣ್ಯಶಾಸ್ತ್ರೀ—ಮಾಲವಿಕಾಗ್ನಿಮಿತ್ರನಾಟಕ
3. ಶ್ರೀ ಬಿ. ಜಿ. ಎಲ್. ಸ್ವಾಮಿ—ವಧೂವರರಿಗೆ
4. ಡಾಕ್ಟರ್ ಎಂ. ಶಿವರಾಂ—**Psycho-somatic Stories**
5. ಗೆಳೆಯರೊಬ್ಬರು—**Aristotle's Poetics.**

ಇವುಗಳಲ್ಲಿ **ಸ್ಮರಣೆ** ಮತ್ತು **ಮಾಲವಿಕಾಗ್ನಿಮಿತ್ರ** ೧೯೫೨ ರಲ್ಲಿ ಪ್ರಕಟವಾದುವು.

ಡಾಕ್ಟರ್ ಶಿವರಾಂ ಅವರ ಪುಸ್ತಕಕ್ಕೆ ನಾವು ತಗಾದೆ ಮಾಡಲಿಲ್ಲ; ಏಕೆಂದರೆ ಶಾಸ್ತ್ರೀಯವಾದ ಗ್ರಂಥಗಳ ಅಡಿಗೆ ಅವಸರದಲ್ಲಿ ಆಗುವುದಿಲ್ಲ. (ಆರು ತಿಂಗಳ ಹಿಂದೆ ಈ ಪುಸ್ತಕದ ಹಸ್ತಪ್ರತಿ **'ಮನೋನಂದನ'** ಎಂಬ ಹೆಸರಿನಿಂದ ನಮ್ಮ ಕೈಗೆ ಬಂದಿದೆ.)

Poetics ಮಾತ್ರ ಉದ್ದೇಶಿಸಿದ ಅನುವಾದ ಸಿದ್ಧವಾಗಲೇ ಇಲ್ಲ.

(ಇದನ್ನು ಬೇರೊಬ್ಬರು ಗೆಳೆಯರು ಅನುವಾದಮಾಡಿ, ಮೈಸೂರಿನ ಕಾವ್ಯಾಲಯದವರು ಪ್ರಕಟಿಸಿದ್ದಾರೆ.)

ಸ್ವಾಮಿಯವರ **'ವಧೂವರರಿಗೆ'** ಎಂಬ 'ಸತ್ಸಂತಾನ ಶಾಸ್ತ್ರದ ಕೈಪಿಡಿ' ಸಿದ್ಧವಾಗಿದ್ದರೂ, ಅದಕ್ಕೆ ಇನ್ನು ಕೆಲವು ಸಂಸ್ಕಾರಗಳು ಆಗಬೇಕೆಂದು ತಜ್ಞರೊಬ್ಬರು ಹೇಳಿದರು; ಸ್ವಾಮಿ ಆಗ ಹತ್ತಿರ ಇರಲಿಲ್ಲ; ಆದ್ದರಿಂದ ಆ ಹಸ್ತಪ್ರತಿ ಹಾಗೇ ಉಳಿಯಿತು.

ಆಮೇಲೆ ಬೇರೆಬೇರೆ ಪ್ರಕಟನೆಗಳಲ್ಲಿ ತೊಡಗಿದೆವು.

§

೧೯೫೨ ರಲ್ಲಿ, ಸ್ವಾಮಿ ಅಮೆರಿಕದಿಂದ ಹಿಂದಿರುಗಿದ ಮೇಲೆ, ಅವರ **'ಅಮೆರಿಕದಲ್ಲಿ ನಾನು'** ಎಂಬ ಸಚಿತ್ರವಾದ ಹಸ್ತಪ್ರತಿಯನ್ನು ನೋಡುವ ಅವಕಾಶ ಒದಗಿತ್ತು. ಅದನ್ನು ಸಂಘದ ಕಡೆಯಿಂದ ಪ್ರಕಟಿಸಬಹುದೆಂದು ಚಪಲವಾದರೂ, ಸಂಘದ ಹಣ ಇತರ ಪುಸ್ತಕಗಳಿಗೆ ಮೀಸಲಾಗಿದ್ದದ್ದರಿಂದ, ಮನಸ್ಸಿಲ್ಲದ ಮನಸ್ಸಿನಿಂದ ಅದನ್ನು ಹಿಂದಕ್ಕೆ ಕೊಡಬೇಕಾಯಿತು.

ನಮ್ಮ ಸಂಘಕ್ಕೆ ಸಂಬಂಧಪಟ್ಟವರಾಗಿದ್ದ ಸ್ವಾಮಿಯವರ ಬರಹಗಳನ್ನು ಪ್ರಕಟಿಸಬೇಕೆಂದು ೧೯೫೫ ರಲ್ಲಿ ಮತ್ತೆ ಮನಸ್ಸಾಯಿತು. ಅದೇ ವರ್ಷ ಸಂಘದ ವಿದ್ಯಾರ್ಥಿ ಸದಸ್ಯರು **'ಜನಪ್ರಿಯ ವಿಜ್ಞಾನ'**ವನ್ನು ಸಿದ್ಧಪಡಿಸಿ, ಸಂಘವು ಅದನ್ನು ಪ್ರಕಟಿಸಿದಾಗ ಸ್ವಾಮಿಯವರ ಜ್ಞಾಪಕವಾಯಿತು. ಇವರು ತಾವು ವಿದ್ಯಾರ್ಥಿಯಾಗಿದ್ದಾಗ, ೧೯೪೧ ರಲ್ಲಿ **'ವಿಜ್ಞಾನವಿಹಾರ'**ವೆಂಬ ಮಾಲೆಯಲ್ಲಿ ಕೆಲವು ಲಘುಲೇಖನಗಳನ್ನು ಬರೆದಿದ್ದರು. ಅವುಗಳನ್ನು ಕೂಡಿಸಿ, ನಮ್ಮ ವಿದ್ಯಾರ್ಥಿಗಳಿಗಾಗಿ ಪ್ರಕಟಿಸೋಣವೆಂದು ನೋಡಿದಾಗ, ಲೇಖನಗಳ ಗಾತ್ರ ಸಾಕಷ್ಟು ಆಗಲಿಲ್ಲ. ಆ ಕಾರಣದಿಂದ ಅವುಗಳನ್ನು ಆಗ ಕೈಬಿಟ್ಟರೂ ಈಗ ಅವುಗಳ ರುಚಿಯನ್ನು ಸ್ವಲ್ಪ ತೋರಿಸಬೇಕೆಂಬ ಚಪಲದಿಂದ ಪ್ರಚೋದಿತನಾಗಿ, ಕೆಲವು ಭಾಗಗಳನ್ನು ಇಲ್ಲಿ ಎತ್ತಿಕೊಡುತ್ತೇನೆ.

* * * *

ಮೊದಲನೆಯ ಲೇಖನ **'ಪ್ರಣಯಪ್ರಸಂಗ.'** ಅದರ ಆರಂಭ ಹೀಗಿದೆ :

ಆಗ ಸನ್ನಿವೇಶ ಬಹು ಅನುಕೂಲವಾಗಿತ್ತು. ವಸಂತಋತು, ಹೂದೋಟ, ಇಳಿಸಂಜೆ, ಕುಸುಮಿತ ಸಮಯ. ಮರದ ಕೊಂಬೆಯಮೇಲೆ ಎರಡು ಹಕ್ಕಿಗಳು ಪ್ರೇಮ

ವಿನಿಮಯದಲ್ಲಿ ತೊಡಗಿದ್ದುವು. ಗಂಡುಹಕ್ಕಿ ತನ್ನ ಗರಿಗಳನ್ನು ಬಿಚ್ಚಿ ಹರಡಿ ಸೊಬಗು ಬಿನ್ನಾಣಗಳನ್ನು ಮೆರಸಿ ಪ್ರೇಯಸಿಯ ಒಲವನ್ನು ನಿರೀಕ್ಷಿಸುತ್ತಿತ್ತು. ಕೊಂಬೆಯಲ್ಲಿದ್ದ ಹೂಗಳು ಅರಳಿ ಸೌರಭವನ್ನು ತಿಳಿಗಾಳಿಯೊಡನೆ ಬೆರಸಿ, ಮಧುಕೋಶವನ್ನು ತೆರೆದಿಟ್ಟು, ತಮ್ಮ ವಂಶಾಭಿವೃದ್ಧಿಯನ್ನು ಸಾಧಿಸಿಕೊಳ್ಳುವುದಕ್ಕಾಗಿ ಹುಳುಗಳಿಗೆ ಆಮಂತ್ರಣ ಕೊಟ್ಟಿದ್ದುವು. ಈ ಕಾರ್ಯವನ್ನು ಆಗಮಾಡಿಸಲು ಬಂದ ಕೆಲವು ಪತಂಗಗಳು ತಮ್ಮ ಪ್ರಿಯರನ್ನು ಸೇರಿಕೊಂಡು ಪ್ರಣಯಲೀಲೆಯಲ್ಲಿ ನಿರತವಾಗಿದ್ದುವು. ಸನ್ನಿವೇಶ ಪ್ರೇಮಮಯವಾಗಿತ್ತು.

ಆ ಮರದ ಕಾಂಡ ಕವಲೊಡೆದಿರುವ ಎಡೆಯಲ್ಲಿ ಹೆಣ್ಣುಜೇಡ ಬಲೆ ನೆಯ್ದಿದೆ. ಅದು ಉಭಯಪಂಡಿತೆ. ಬಲೆ ಬೀಸುವುದರಲ್ಲಿ ಬೇಡರಿಗಿಂತಲೂ ಹೆಚ್ಚು ನೈಪುಣ್ಯ ಅದಕ್ಕಿತ್ತು. ನಿವಾಸವನ್ನು ಕಟ್ಟಿಕೊಳ್ಳುವುದರಲ್ಲಿ ಮಾನವ ವಾಸ್ತುಶಿಲ್ಪಿಗಳಿಗಿಂತಲೂ ಹೆಚ್ಚು ಕೌಶಲ್ಯವಿತ್ತು. ಅದು ನಿರ್ಮಿಸಿಕೊಂಡಿರುವ ಕಟ್ಟಡ ತನಗೆ ಮಾತ್ರ ವಾಸಸ್ಥಾನ, ಮಿಕ್ಕವರಿಗೆ ಮೃತ್ಯುಪಂಜರ. ಸುಮಾರು ೨ ಅಡಿಗಳಷ್ಟು ಅಗಲವಿರುವ ಆ ಬಲೆಮನೆಯ ಮಧ್ಯದಲ್ಲಿ ಅದು ಆಹಾರಕ್ಕಾಗಿ ಹೊಂಚುಹಾಕುತ್ತ ಕುಳಿತಿದೆ.

ಗಂಡುಜೇಡ ಪ್ರೇಮಮಯವಾದ ಸನ್ನಿವೇಶದಲ್ಲಿ ಬಲೆಯ ಎಡೆಗೆ ಹರಿದು ಬಂದಿತು. ಬಲೆಯ ಒಂದು ತಂತುವನ್ನು ಅಲುಗಿಸಿ ತಾನು ಬಂದಿರುವ ಸಂದೇಶವನ್ನು ಬಲೆಯ ಮಧ್ಯದಲ್ಲಿ ಕುಳಿತಿದ್ದ ರಾಣಿಗೆ ತಿಳಿಸಿತು. ಗಂಡುಜೇಡ ತಂತುವನ್ನು ಇನ್ನಾರಿಂದಲೂ ಸಾಧ್ಯವಿಲ್ಲದ, ಒಂದು ಪ್ರತ್ಯೇಕವಾದ ರೀತಿಯಲ್ಲಿ ಮಾತ್ರ ಅಲುಗಿಸಿತು. ಇದರಿಂದ ಅದರ ಪ್ರೇಯಸಿಗೆ ತನ್ನ ಪ್ರಾಣನಾಥನ ಆಗಮನ ತಿಳಿಯಿತು. ಹೆಣ್ಣುಜೇಡ ಒಂದೆರಡು ಹೆಜ್ಜೆ ಗಂಡಿನ ಕಡೆಗೆ ಸರಿಯಿತು; ಗಂಡುಜೇಡ ಮುಂದೆ ಬಂದು ಆ ಹೆಣ್ಣನ್ನು ಸೇರಿತು; ಸಮಾಗಮವಾಯಿತು. ವಿಶ್ವಸಂಕಲ್ಪ ನೆರವೇರಿತು. ಕೆಲವು ನಿಮಿಷಗಳಾದ ತರುವಾಯ ಒಂದನ್ನೊಂದು ಅಗಲಿದುವು. ಗಂಡುಜೇಡ ಕೃತಾರ್ಥತೆಯಿಂದ ಬಲೆ ಬಿಟ್ಟು ಹೊರಡುವುದಕ್ಕೆ ಒಂದೆರಡು ಹೆಜ್ಜೆ ಮುಂದಿಟ್ಟಿತು. ಹೆಣ್ಣು ಅದರ ಮೇಲೆ ಹಾರಿತು, ಕಚ್ಚಿತು, ಕೊಂದಿತು, ತಿಂದಿತು! ಪ್ರಣಯ ಪ್ರಸಂಗವಿಲ್ಲಿಗೆ ಮುಗಿಯಿತು . . .

* * * *

ಎರಡನೆಯದು 'ಪ್ಲಾಟಿಪಸ್' ಎಂಬ ಪ್ರಾಣಿಯನ್ನು ಕುರಿತು. ಈ ಲೇಖನ ಒಂದು ಒಗಟೆಯಿಂದ ಆರಂಭವಾಗುತ್ತದೆ.

ಕೈ, ಕಾಲು, ಮೈ, ನವಿರು, ಮೂತಿ, ಬಾಲಗಳುಂಟು,
ಬರಿಗೊಂಬೆಯಲ್ಲ;
ಹಾಲ್ಗರೆವ ಮೊಲೆಯುಂಟು, ಮರಿಗದರ ಹಾಲುಂಟು,
ಆಕಳೇನಲ್ಲ;

ಕೊಕ್ಕೊಳಗೆ ಬಾಯುಂಟು, ಬಾಯೊಳಗೆ ಹಲ್ಲಿಲ್ಲ,
ಖಗವು ತಾನಲ್ಲ;
ನೀರಿನಲ್ಲೀಜುವುದು, ನೆಲದ ಮೇಲೋಡುವುದು,
ಇದು ಕಪ್ಪೆಯಲ್ಲ;
ಹಂಸೆಗಿರುವಂತಿದಕೆ ಜಾಲ-ಪಾದಗಳುಂಟು,
ಬಾತೇನು ಅಲ್ಲ;
ನಿಶೆಯೊಳಗೆ ಹೊರಬಂದು ಆಹಾರ ತಡಕುವುದು,
ದೆವ್ವವೂ ಅಲ್ಲ;
ತಾನಿಡುವ ಮೊಟ್ಟೆಗಳ ಕಾವಿತ್ತು ಒಡೆಸುವುದು,
ಕೋಳಿಯೂ ಅಲ್ಲ;
ಒಗಟು ಬಯಲಾಗಿಪನು ಕನ್ನಡಿಗ ಜಾಣ;
ಕೈಲಾಗದಿದ್ದವನು ಕನ್ನಡದ ಕೋಣ.

ಈ ಒಗಟಿಗೆ ಉತ್ತರ ಅದರಡಿಯ ಲೇಖನದಲ್ಲಿದೆ. ಪ್ಲಾಟಿಪಸ್ ಪ್ರಾಣಿ ಆಸ್ಟ್ರೇಲಿಯಾ ಖಂಡದ "ಬಹು ವಿಚಿತ್ರ ಪ್ರಾಣಿ; ಅದು ಹಕ್ಕಿಯೆ, ಉರಗವೆ, ಸಸ್ತನಿಯೆ ಎಂದು ಕೇಳಿದರೆ ಎಲ್ಲದಕ್ಕೂ ಹೆಚ್ಚು ಕಡಿಮೆ 'ಊಂ' ಎಂದು ಹೇಳಬೇಕಾಗಬಹುದು . . . ಈ ಪ್ರಾಣಿ ಸೃಷ್ಟಿಚರಿತ್ರೆಯ ಒಂದಾನೊಂದು ಮುಖ್ಯ ಘಟ್ಟಕ್ಕೆ ಸಾಕ್ಷೀಭೂತವಾಗಿದೆ."

* * * *

ಮೂರನೆಯದಕ್ಕೆ 'ಜೇಡನ ಚರಕ' ಎಂದು ಹೆಸರು. ಈ ಲೇಖನ ಉಚಿತವಾದ ಒಂದು ಉಪನಿಷದ್ವಾಕ್ಯದಿಂದ ಆರಂಭವಾಗುತ್ತದೆ.

"ಅಜ್ಞಾನದ ಅಂಧಕಾರದಲ್ಲಿರುವವನು ಜೇಡಹುಳುವೇ ಬೇರೆ, ಅದರ ಬಲೆಯೇ ಬೇರೆ, ಒಂದಕ್ಕೊಂದಕ್ಕೆ ಸಂಬಂಧವಿಲ್ಲ ಎಂದು ತಿಳಿಯುತ್ತಾನೆ. ಜ್ಞಾನಿಯಾದವನು ಜೇಡಹುಳುವಿನ ದೇಹದಿಂದ ಉತ್ಪನ್ನವಾದ ವಸ್ತುವಿನಿಂದಲೇ ಅದರ ಬಲೆ ತಯಾರಾಗಿದೆ, ಎರಡೂ ಬೇರೆ ಬೇರೆಯಲ್ಲವೆಂದು ಅರಿತಿರುತ್ತಾನೆ. ಪರಮಾತ್ಮನಿಗೂ ಜಗತ್ತಿಗೂ ಪರಸ್ಪರ ಸಂಬಂಧ ಜೇಡ ಮತ್ತು ಜೇಡನ ಬಲೆಯಂತೆ" ಎಂದು ಅರ್ಥ ಬರುವ ಉಪಮೆಯೊಂದು ಉಪನಿಷತ್ತುಗಳಲ್ಲಿ ಉಲ್ಲೇಖವಾಗಿದೆ.

(ಯಥೋರ್ಣನಾಭಿಃ ಸೃಜತೇ ಗೃಹ್ಣತೇ ಚ—ಮುಂಡಕ)

ಉಪನಿಷದಾಚಾರ್ಯರ ಒಳನೋಟ ಆತ್ಮತತ್ತ್ವವಿಚಾರದಲ್ಲಿ ಎಷ್ಟು ಆಳವಾಗಿದ್ದಿತೋ ಪ್ರಕೃತಿಸಮೀಕ್ಷೆಯಲ್ಲೂ ಅವರ ಕುತೂಹಲ ಅಷ್ಟು ಆಳವಾಗಿದ್ದಿತೆಂಬುದಕ್ಕೆ ಮೇಲಿನ ಉಪಮೆ ಒಂದು ಉತ್ತಮವಾದ ನಿದರ್ಶನ. ಜೇಡಹುಳುವಿನ ದೇಹ

ದಿಂದ ಅವರ ಬಲೆ ಉತ್ಪತ್ತಿಯಾಗುವುದೆಂದು ಅವರು ಅನುಭವವನ್ನು ಹೇಳಿರುವ ರಾಪರೂ ಅದು ಹೇಗೆ ಉತ್ಪತ್ತಿಯಾಗುವುದೆಂಬ ಅಂಶವನ್ನು ಅವರು ಹೇಳತೊಡಗಿಲ್ಲ. ಅದನ್ನು ಅಪ್ರಕೃತವೆಂದು ಹೇಳದೆ ಬಿಟ್ಟರೋ ಅಥವಾ ತಿಳಿಯದೆಯೋ ಬಿಟ್ಟರೋ ನಮಗೆ ಬೇಕಿಲ್ಲ. ಈಗಿನ ವಿಜ್ಞಾನ ಋಷಿಗಳ ಪರೀಕ್ಷೆಗಳಿಂದ ಆ ಗುಟ್ಟು ಬಯಲಾಗಿದೆ.

ಈ ಗುಟ್ಟನ್ನು ಕುರಿತದ್ದು ಲೇಖನದ ಮುಂದಿನ ಭಾಗ.

* * * *

ನಾಲ್ಕನೆಯದು 'ಹಸಿವಿನ ಬಳ್ಳಿ.' ಜೀವಕೋಟಿಯ ಜೀವನದಲ್ಲಿ ಹಸಿವಿಗೆ ಇರುವ ಪ್ರಾಮುಖ್ಯತೆಯನ್ನು ಈ ಲೇಖನ ವಿವರಿಸುತ್ತದೆ. ಇದಾದರೂ ಒಂದು ಚಾಟುಪದ್ಯದಿಂದ ಆರಂಭವಾಗುತ್ತದೆ.

"ಹಸಿವಿಗುಣಬಯಸಿತ್ತು ಗಣಪನಿಲಿಯನು ಹಾವು, ಅದ ಕುಮಾರನ ನವಿಲು, ಪಾರ್ವತಿಯ ಸಿಂಹವೋ ಗಜಮುಖನನೆ; ಗೌರಿ ಗಂಗೆಯು, ಚಂದ್ರನುರಿಗಣ್ಣ ಸಹಿಸರು . . ." ಎಂದು ಮುಂತಾಗಿ ಒಂದು 'ಪುಟಾಣಿ' ಇದೆ. "ಇದೊಂದು ಕತೆಯಂತೆ ಇದೆ; ಎಲ್ಲಾದರೂ ಹೀಗುಂಟೆ? ನಮ್ಮ ಪೌರಾಣಿಕ ವ್ಯಕ್ತಿಗಳನ್ನು ಲೇವಡಿಮಾಡಿ ಗುಲ್ಲೆಬ್ಬಿಸುವುದಕ್ಕಾಗಿ ಈ ಕತೆಯನ್ನು ನೆಯ್ದಿದಾರೆ" ಎಂದು ಕೆಲವರು ನನ್ನೊಂದಿಗೆ ಆಕ್ಷೇಪಿಸಿದರು. ನಾನು ಹೇಳಿದೆ: "ನಿಮ್ಮ ಪೌರಾಣಿಕ ವ್ಯಕ್ತಿಗಳ ಮತ್ತು ಆ ಪ್ರಾಣಿಗಳ ಹೆಸರುಗಳನ್ನು ತೆಗೆದುಹಾಕಿ, ಆಯಾ ಸ್ಥಳಗಳಲ್ಲಿ ಈ ದಿನ ನಮ್ಮೊಂದಿಗೆ ಬದುಕುತ್ತಿರುವ ಕೆಲವು ಜೀವಿಗಳ ಹೆಸರನ್ನು ಹಾಕಿದರೂ 'ಪುಟಾಣಿ'ಯ ಉದ್ದೇಶ ಸಾರ್ಥಕವಾಗುತ್ತದೆ; ಹಸಿವಿನ ವೈಶಾಲ್ಯವನ್ನು ತೋರಿಸುತ್ತದೆ. ಹಸಿವು ಯಾವ ಜೀವಿಯನ್ನೂ ಬಿಟ್ಟದ್ದಲ್ಲ. ನೀವು 'ನೂರು ಪುಟಾಣಿ' ಪುಸ್ತಕದ ೯ನೆಯ ಪುಟದಲ್ಲಿ ಅಚ್ಚಾಗಿರುವ 'ಒಲುಮೆಯ ಮುನ್ನುಡಿಯಿಂದ' ಎಂಬ ಸಣ್ಣ ಭಾಗವನ್ನು ಓದಿ ಅನಂತರ ಮೇಲಿನ ಪುಟಾಣಿಯನ್ನು ಓದಿ. ಆಗ ನಿಮಗೆ ಆ ಪುಟಾಣಿಯ ಧ್ವನಿ ಅರ್ಥವಾಗುತ್ತದೆ."

ನಾನು ಆ ಪುಟಾಣಿಯನ್ನು ಓದಿದೊಡನೆಯೆ "ನಿಜವಾಗಿಯೂ ಈ ಪುಟಾಣಿ ಒಂದು ಪೂರ್ಣಕಾವ್ಯ. ಇಷ್ಟು ಕಿರಿದಾದ ಅವಧಿಯಲ್ಲಿ ಒಂದು ಸಮಗ್ರ ಭಾವವನ್ನು ಚಿತ್ರಿಸಿದೆ!" ಎಂದುಕೊಂಡೆ. ಆ 'ಸಮಗ್ರ ಭಾವ' ಯಾವುದೆಂಬುದನ್ನು ಈ ಲೇಖನದಲ್ಲಿ ವಿಸ್ತರಿಸುತ್ತೇನೆ. ಹಸುರು ಗಿಡಗಳು ಜೀವವಿಲ್ಲದ ವಸ್ತುಗಳಿಂದ ಆಹಾರ ಸಂಪಾದಿಸಿಕೊಳ್ಳುತ್ತವೆ; ಪ್ರಾಣಿಗಳು ತಮ್ಮ ಆಹಾರಕ್ಕಾಗಿ ಇತರ ಜೀವಿಗಳನ್ನು ಅವಲಂಬಿಸಿವೆ. ಪ್ರಾಣಿಜೀವನದ ಯಾವ ಮೊಡಕನ್ನು ಇಣಿಕಿ ನೋಡಿದರೂ ಈ ಪರಾವಲಂಬನೆ ಎದ್ದು ಕಾಣುತ್ತದೆ. . .

ಆಗುಂಬೆಯಂಥ ಮಲೆನಾಡಿನ ಕಾಡಿನೊಳಗಡೆ ಬನ್ನಿ. ಮರದ ಎಲೆಗಳ ಮೇಲೆ ಒಂದು ಬಗೆಯ ಕೂರೆಹುಳು ಎಲೆಯ ರಸವನ್ನು ಹೀರುತ್ತಿರುತ್ತದೆ. ಕೂರೆಗೆ

ಎಲೆಯ ರಸವೇ ಜೀವನಾಧಾರ. ಈ ಕೂರೆಹುಳುಗಳನ್ನು ತಿನ್ನುವುದಕ್ಕಾಗಿ ಜೇಡಗಳು ಬಲೆ ನೆಯ್ದುಕೊಂಡು ಕಾದಿರುತ್ತವೆ. ಈ ಜೇಡಗಳನ್ನು ನುಂಗುವುದಕ್ಕೆ ವಾರ್‌ಬ್ಲರ್ ಜಾತಿಗೆ ಸೇರಿದ ಒಂದು ಬಗೆಯ ಕಾಡುಹಕ್ಕಿಗಳು ಬಾಯಿ ತೆರೆದುಕೊಂಡು ಮರಗಳ ಮೇಲೆಯೇ ಮನೆಮಾಡಿಕೊಂಡಿರುತ್ತವೆ. ಈ ಹಕ್ಕಿಗಳನ್ನು ತಿಂದುಹಾಕುವುದಕ್ಕೆ ಒಂದು ಬಗೆಯ ಹದ್ದುಗಳು ಹಾರಾಡುತ್ತಲೇ ಇರುತ್ತವೆ. ಇದೇ ಮರ ಹಸಿವಿನ ಇನ್ನೊಂದು ಬಳ್ಳಿಗೂ ಬೀಜವಾಗಬಹುದು. ಹೇಗೆಂದರೆ: ಮರದ ಹಣ್ಣೆಲೆಗಳು ಜೌಗು ನೆಲದ ಮೇಲೆ ಉದುರುತ್ತವೆ; ಇವನ್ನು ಮಣ್ಣುಹುಳುಗಳು ತಿನ್ನುತ್ತವೆ; ಮಣ್ಣುಹುಳುಗಳನ್ನು ಪೊದೆಗಳಲ್ಲಿ ವಾಸಿಸುವ ಹಕ್ಕಿಗಳೂ ಇವನ್ನು ಹದ್ದುಗಳೂ ತಿನ್ನುತ್ತವೆ. ಮೂರನೆಯ ಇನ್ನೊಂದು ಬಳ್ಳಿಯೂ ಅದೇ ಬೀಜದಿಂದ ಹುಟ್ಟಬಹುದು: ಮರದ ಹಣ್ಣುಗಳೂ ಬೀಜಗಳೂ ನೆಲಕ್ಕೆ ಉದುರುವುವು; ಇವನ್ನು ಇಲಿ ಹೆಗ್ಗಣಗಳು ತಿನ್ನುವುವು; ಇವನ್ನು ಕಾಡುಹಂದಿಗಳು; ಇವನ್ನು ಇವಕ್ಕಿಂತಲೂ ದೊಡ್ಡದಾದ ಹುಲಿ ಚಿರತೆ ಮೊದಲಾದವು ತಿಂದು ಬದುಕುವುವು...

ಒಂದನ್ನೊಂದು ತಿಂದು ಬದುಕುವುದು ವಿಶ್ವನಿಯಮ.

* * * *

ವೈಜ್ಞಾನಿಕ ವಿಷಯಗಳನ್ನು ಆಕರ್ಷಕವಾಗುವಂತೆ ಬರೆಯಬೇಕೆಂದು ಆಸೆಪಡುವ ವಿದ್ಯಾರ್ಥಿಗಳಿಗೆ ಆಸಕ್ತಿ ಉಂಟಾಗಬಹುದೆಂದು ಕೆಲವು ಭಾಗಗಳನ್ನು ಉದ್ಧರಿಸಿಕೊಟ್ಟಿದ್ದೇನೆ. ಪೂರ್ತಿ ಲೇಖನವನ್ನು ಓದಬಯಸುವವರು ಕನ್ನಡ ಸಾಹಿತ್ಯ ಪರಿಷತ್ತಿಗೆ ಹೋಗಿ 'ಕನ್ನಡ ನುಡಿ'ಯನ್ನೇ ನೋಡಬಹುದು.

§

ಹೀಗೆ, ೧೯೫೦ ರಿಂದ ಹಿಡಿದು, ಸ್ವಾಮಿಯವರ ಯಾವುದಾದರೂ ಒಂದು ಒಳ್ಳೆಯ ಪುಸ್ತಕವನ್ನು ಪ್ರಕಟಿಸಬೇಕೆಂಬ ನಮ್ಮ ಅಭಿಲಾಷೆ ಈಡೇರುವಂತೆ ೧೯೬೦ ರಲ್ಲಿ ಅವರ **'ಪಂಚಕಲಶಗೋಪುರ'**ದ ಹಸ್ತಪ್ರತಿ ನಮ್ಮ ಕೈಗೆ ಬಂತು. ಅವರು ಕಳಿಸಿದ್ದ ಚಿತ್ರಗಳು ೧೯೬೨ ರಲ್ಲಿ 'ಬ್ಲಾಕ್' ಆದವು. ೧೯೬೩ ರ ಕೊನೆಯಲ್ಲಿ ಅಚ್ಚಿನ ಮನೆಯನ್ನು ಹೊಕ್ಕ ಈ ಪುಸ್ತಕದ ಮುದ್ರಣ ೧೯೬೪ ರ ಆದಿಯಲ್ಲೇ ಮುಗಿಯಿತಾದರೂ, ಪ್ರಕೃತದ ಈ ಪೂರ್ವಕಥೆಯನ್ನು ಬರೆಯುವುದು ವಿಳಂಬವಾಗಿ, ಪುಸ್ತಕ ಈಗ ಪ್ರಕಟವಾಗಿದೆ.

ವಿಳಂಬಕ್ಕೆ ಕಾರಣ ಹೀಗಿರಬಹುದು ಎಂದುಕೊಂಡಿದ್ದೇನೆ: **ಪಂಚಕಲಶಗೋಪುರ** ನಮ್ಮ ಸಂಘದ ಚರಿತ್ರೆಯ ಒಂದು ಖಂಡ. ಇದನ್ನು ಅಚ್ಚಿಗೆ ಎತ್ತಿಕೊಂಡ ಕಾಲಕ್ಕೆ, ನಮ್ಮ ಸಂಘ ಎಲ್ಲಿ ಜನ್ಮ ತಾಳಿತೋ,—

ಅಷ್ಟೇಕೆ, ನೂರ ಆರು ವರ್ಷ ವಯಸ್ಸಾದ ನಮ್ಮ ಸೆಂಟ್ರಲ್ ಕಾಲೇಜ್ ಎಲ್ಲಿ ಹುಟ್ಟಿತೋ—ಅಲ್ಲಿ ಇದ್ದ 'ಟಿಫನ್ ರೂಂಸ್' ಮಣ್ಣೊಡನೆ ಮಣ್ಣಾಗಿ ಹೋಗಿ, ಅದೇ ಸ್ಥಳದಲ್ಲಿ

CENTRAL COLLEGE CENTENARY LIBRARY BUILDING
[Plinth Area—22,671 Sq. Ft.
Cost—5.25 Lakhs]

ಎಂಬ ಭವ್ಯವಾದ ಸರಸ್ವತೀಭವನದ ನಿರ್ಮಾಣಕಾರ್ಯ ಆರಂಭವಾಗಿ ಈಗ ಮುಗಿದಿದೆ. ಉತ್ತರ ದಿಕ್ಕಿನ ದ್ವಾರದ ಬಳಿಯೆ ನಮ್ಮ ಕರ್ಣಾಟಕ ಸಂಘ ಹಿಂದೆ ಇದ್ದದ್ದು. ಇಂದಿನವರಿಗಾಗಲಿ, ಮುಂದಿನವರಿಗಾಗಲಿ, "೧೯೧೮ ರಿಂದ ೧೯೫೨ ರ ವರೆಗೆ ನಮ್ಮ ಸಂಘ ಇಲ್ಲಿ ಇತ್ತು, ಹೀಗೆ ಇತ್ತು" ಎಂಬುದನ್ನು ಕಣ್ಣಿಗೆ ಕಟ್ಟುವಂತೆ ತೋರಿಸಬೇಕಾದರೆ, ಸ್ವಾಮಿಯವರ **'ಪಂಚಕಲಶ ಗೋಪುರ'** ಅನುವಾಗಿ ಒದಗಿಬರುತ್ತದೆ. ಈ ಯಾವುದೋ ಅವ್ಯಕ್ತಕಾರಣದಿಂದಾಗಿ ಪುಸ್ತಕದ ಪ್ರಕಟನೆ ತಡವಾಗಿರಬಹುದೆಂದುಕೊಂಡಿದ್ದೇನೆ.

ಹೇಗೂ ಆಗಲಿ. ಪುಸ್ತಕ ಮುಗಿದು ಇಲ್ಲಿದೆ. ಸಹೃದಯರಿಗೆ ಇದರಿಂದ ಸಂತೋಷವಾಗಲಿ.


೫–೧೨–೧೯೬೪
ಸೆಂಟ್ರಲ್ ಕಾಲೇಜ್

ಜಿ. ಪಿ. ರಾಜರತ್ನಂ
ಸಂಘದ ಪರವಾಗಿ

ಗುಡಿ

(ಸಂಘ)

ನಮ್ಮ ಕರ್ಣಾಟಕ ಸಂಘ



ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ೧೯೧೫ರಲ್ಲಿ ಕರ್ಣಾಟಕ ಸಂಘ ಜನ್ಮತಾಳಿತು. ಅದೇ ವರ್ಷ ನಮ್ಮ ಮನೆಯಲ್ಲಿ ನನ್ನ ಅವತಾರವಾಯಿತು.

ಕರ್ಣಾಟಕ ಸಂಘದ ಹೆಸರನ್ನು ನಾನು ಮೊದಲು ಓದಿದ್ದು ೧೯೨೩ರಲ್ಲಿ,— ಬೆಳ್ಳಾವೆ ವೆಂಕಟನಾರಾಯಣಪ್ಪನವರೂ ರಾ. ನರಸಿಂಹಾಚಾರ್ಯರೂ "ವಸಂತ ಕುಸುಮಾಂಜಲಿ"ಯ ಪ್ರಪ್ರಥಮ ಪ್ರತಿಯನ್ನು ಕೈಯಲ್ಲಿ ಹಿಡಿದುಕೊಂಡು ಬಂದು ನಮ್ಮ ಮನೆಗೆ ತಲಪಿಸಿದಾಗ. ಕರ್ಣಾಟಕ ಸಂಘದ ಕಾರ್ಯಕ್ರಮ ಮೊದಲು ನನಗೆ ಪರಿಚಯವಾದದ್ದು ೧೯೨೩ರಲ್ಲಿ, ಮತ್ತೆ ೧೯೨೪ರಲ್ಲಿ,— ಕಲಾಸಿಪಾಳ್ಯದಲ್ಲಿದ್ದ ವರದಾಚಾರ್ಯರ ರತ್ನಾವಳೀ ಥಿಯೇಟರಿನಲ್ಲಿ ವಾರ್ಷಿಕೋತ್ಸವಗಳನ್ನು ಮೆರೆಯಿಸಿ, ಆ ಸಮಯದಲ್ಲಿ ಮೊದಲನೆಯ ಬಾರಿಗೆ ಗದಾಯುದ್ಧ, ಅಶ್ವತ್ಥಾಮನ್ ನಾಟಕಗಳನ್ನು ಪ್ರದರ್ಶಿಸಿದಾಗ. ಈ ಎರಡು

ಉತ್ಸವಗಳಲ್ಲೊಂದಕ್ಕೆ ಪಂಜೆ ಮಂಗೇಶರಾಯರು ಅಧ್ಯಕ್ಷತೆ ವಹಿಸಿದ್ದದ್ದೂ ಕನ್ನಡವನ್ನು ಅಚ್ಚಗನ್ನಡ, ಹುಚ್ಚುಕನ್ನಡ, ತುಚ್ಛಗನ್ನಡವೆಂದು ವಿಂಗಡೀಕರಿಸಿದ್ದೂ, ಅದಾರೋ ಒಬ್ಬಾತ ಬೈರಾಗಿಯ ಪಾತ್ರತೊಟ್ಟು ಏಕತಾರನ್ನು ಹಿಡಿದು ರಂಗದ ಮೇಲೆ ಬಂದು "ಮುಕ್ಕಣ್ಣನೆಲ್ಲಾರೂ ಕೊಂಡಾಡಿರೋ" ಎಂಬ ಹಾಡನ್ನು ಅಭಿನಯದೊಡನೆ ಹಾಡಿ ನಾಲ್ಕು ಸಲ 'ಒನ್ಸ್‌ಮೋರ್' ಗಳನ್ನು ಗಳಿಸಿದ್ದೂ, ಹುಡುಗರ ಗಲಾಟೆಯನ್ನು ಕಂಡು ಬೆಳ್ಳಾವೆ ವೆಂಕಟನಾರಾಯಣಪ್ಪನವರು ಸ್ವಾಗತ ಭಾಷಣ ಮಾಡುತ್ತಿದ್ದಂತೆಯೇ ರೌದ್ರಾವತಾರಗೊಂಡದ್ದೂ, ನನಗೆ ಈಗಲೂ ನಿನ್ನೆ ನೋಡಿದಂತಿದೆ. ದಿವಂಗತ ಎನ್. ಎಸ್. ನಾರಾಯಣ ಶಾಸ್ತ್ರಿಗಳ ಅಶ್ವತ್ಥಾಮನ್ ಪಾತ್ರಾಭಿನಯವೂ, ಗದಾಯುದ್ಧದಲ್ಲಿ ದುರ್ಯೋಧನ ಪಾತ್ರಾಭಿನಯವೂ, ವೆಂಬಾರ್ ವೆಂಕಟಾಚಾರ್ಯರ ಭಾರ್ಗವಿ ಪಾತ್ರನಿರ್ವಹಣೆಯೂ, ಮೇಳನಾಯಕನಾಗಿದ್ದ ರಾಮಣ್ಣನವರ ಸಂಗೀತ ಸುಧೆಯೂ, ಇನ್ನೂ ನನ್ನ ಕಣ್ಣುಕಿವಿಗಳಿಗೆ ಕಟ್ಟಿದಂತಿವೆ. ಕಳೆದ ಇಪ್ಪತ್ತು ವರುಷಗಳಲ್ಲಿ ವಿದ್ಯಾರ್ಥಿಗಳು ಈ ಬಗೆಯ ನಾಟಕಗಳ ಪ್ರದರ್ಶನಕ್ಕೆ ತೊಡಗಿ ಯಶಸ್ವಿಗಳಾದದ್ದನ್ನು ನಾನು ಕಂಡಿಲ್ಲವೆಂದೇ ಹೇಳಬೇಕು. ಈಚೀಚೆಗೆ ಈ ಬಗೆಯ ನಾಟಕಗಳೇ ರಚಿತವಾಗಿಲ್ಲವೋ, ಅಂಥವನ್ನು ಅಭಿನಯಿಸುವ ಯೋಗ್ಯತೆಯುಳ್ಳ ವಿದ್ಯಾರ್ಥಿನಟರೇ ಇಲ್ಲವೋ, ಅಥವಾ ನಿಜವಾದ ನಾಟಕ ಕಲಾಭಿರುಚಿಯಿರುವ ನಿರ್ದೇಶಕರೇ ಇಲ್ಲವೋ ನನಗೆ ತಿಳಿಯದ ವಿಷಯವಾಗಿದೆ. ಸಹೃದಯರಾದ ರಸಿಕಪ್ರೇಕ್ಷಕರು, ಆ ದಿನಗಳಲ್ಲಿ ಇಂಥ ನಾಟಕಗಳಿಗೆ ನೆರೆಯುತ್ತಿದ್ದ ಸಮೂಹಬಾಹುಳ್ಯದಲ್ಲಿ, ಇಂದೂ ಅದೇ ತೆರನಾದ ನಾಟಕಗಳನ್ನು ನೋಡಲು ಕಲೆಯುವರೇ ಎಂಬ ಸಂದೇಹವೂ ಒಡನೆಯೇ ಬರುತ್ತದೆ.

ಸಂಘ ನನಗೆ ಹೆಚ್ಚು ಪರಿಚಯವಾಗುವುದಕ್ಕೆ ಆರಂಭವಾದದ್ದು ೧೯೩೫ರಲ್ಲಿ,—ನಾನು ಇಂಟರ್‌ಮೀಡಿಯೆಟ್ ಕಾಲೇಜನ್ನು ಸೇರಿದಾಗ. ಸಂಘದ ಕಾರ್ಯಕ್ರಮಗಳಿಗೆ ತಪ್ಪದೆ ಹೋಗಿಬರುವುದು ಆಗ ಆರಂಭವಾಯಿತು. ಇಲ್ಲಿಂದ ೧೯೪೦ರವರೆಗೂ ಸಂಘಕ್ಕೂ ನನಗೂ ನಿಕಟವೆಂದೇ ಹೇಳಬಹುದಾದ ಪರಿಚಯ ಬೆಳೆದಿತ್ತು.

ಎ. ಆರ್. ಕೃಷ್ಣಶಾಸ್ತ್ರಿಗಳು "ಪ್ರಬುದ್ಧ ಕರ್ಣಾಟಕದ ಹುಟ್ಟು ಮತ್ತು ಬೆಳವಣಿಗೆ" ಎಂಬ ಲೇಖನದಲ್ಲಿ ಸಂಘದ ಕಾರ್ಯ ವಿಸ್ತಾರಗೊಂಡ ಬಗೆಯನ್ನು,

ಎಂದರೆ ಸಂಘದ ಆತ್ಮ ಅಭಿವೃದ್ಧಿಗೊಂಡ ರೀತಿಯ ಒಂದು ಮುಖ್ಯವಾದ ಮುಖವನ್ನು ಸಿಂಹಾವಲೋಕನ ಕ್ರಮದಲ್ಲಿ ಚಿತ್ರಿಸಿದ್ದಾರೆ. ಸಂಘದ ದೇಹ ಸ್ವರೂಪವನ್ನೂ ಅದರ ಅಂಗರಚನೆಯನ್ನೂ ಇಲ್ಲಿ ಪರಿಚಯ ಮಾಡಿಕೊಡುತ್ತೇನೆ,—೧೯೩೭ರಿಂದ ೧೯೪೦ರ ವರೆಗೂ ನಾನು ಕಂಡಂತೆ.

ಸಂಘದ ಸುತ್ತುಮುತ್ತು

ದಕ್ಷಿಣ ದ್ವಾರದಿಂದ ಸೆಂಟ್ರಲ್ ಕಾಲೇಜಿನೊಳಕ್ಕೆ ಬಂದೊಡನೆಯೆ ಎಡಗಡೆಗೆ ಸಣ್ಣ ಕಟ್ಟಡವೊಂದಿದೆ. ಈ ಕಟ್ಟಡದ ಮುಂದಿನ ಸಾಲಿನಲ್ಲಿ ಸಂಸ್ಕೃತ, ತೆಲುಗು, ತಮಿಳು, ಉರ್ದು ಇಲಾಖೆಗಳ ನಿವಾಸ, ನಾರಾಯಣನ ಹೋಟೆಲು ಇತ್ತು; ಇವನ್ನಂಟಿಕೊಂಡಂತೆ ಹಿಂಬದಿಯ ಸಾಲಿನಲ್ಲಿ ಸಸ್ಯಶಾಸ್ತ್ರ ಪ್ರಾಣಿಶಾಸ್ತ್ರ ಭೂಶಾಸ್ತ್ರ ಇಲಾಖೆಗಳ ಉಗ್ರಾಣಗಳು ಮತ್ತು ಕನ್ನಡ ಇಲಾಖೆ ಇದ್ದುವು. ಇವುಗಳ ಪಶ್ಚಿಮಕ್ಕೆ, ಒಂದು ಐದಾರು ಅಡಿಗಳಷ್ಟು ಓಣಿಬಿಟ್ಟು, ಶೌಚಗೃಹ. ಇದರ ಉತ್ತರಾರ್ಧ ಉಪಾಧ್ಯಾಯರುಗಳದು; ಬೀಗಹಾಕಿಟ್ಟುಕೊಳ್ಳುತ್ತಿದ್ದುದರಿಂದ ಅನ್ಯರ ಉಪಯೋಗಕ್ಕೆ ಎಡೆಯಿರಲಿಲ್ಲ. ದಕ್ಷಿಣಾರ್ಧ ವಿದ್ಯಾರ್ಥಿಗಳದು; ಇದಕ್ಕೆ ಬಾಗಿಲಿನ ಚೌಕಟ್ಟು ಇತ್ತು, ಆದರೆ ಕದ ಇರಲಿಲ್ಲ. ಯಾರೋ ಕಬ್ಬನ್ ಪೇಟೆಯ ಸಾರ್ವಜನಿಕರು ಅದನ್ನು ರಾತ್ರಿಯೋರಾತ್ರಿ ಸಾಗಿಸಿಕೊಂಡು ಹೋಗಿ ತಮ್ಮ ಮನೆಗೆ ಮುಡುಕಿಕೊಂಡುಬಿಟ್ಟಿದ್ದರಂತೆ. ಇದಾಗಿ ಹನ್ನೆರಡು ವರ್ಷಗಳು ಕಳೆದಿದ್ದರೂ ಹೊಸ ಕದವನ್ನು ಮುಡುಕಿಸುವುದಕ್ಕೆ ಸರ್ಕಾರದಲ್ಲಿ, ಪಾಪ, ಹಣವಿರಲಿಲ್ಲವಂತೆ. ಸ್ವೋಪಕಾರವನ್ನು ಮಾಡಿಕೊಂಡ ಆ ಮಹಾಪುರುಷ ಅಂದಿನಿಂದ ಈ ಭಾಗದ ಶೌಚಗೃಹವನ್ನು ಸರ್ವಗಣದ ಸಾರ್ವಜನಿಕರೂ ಉಪಯೋಗಿಸುವುದಕ್ಕೆ ಅವಕಾಶ ಮಾಡಿಕೊಟ್ಟ. ವಿದ್ಯಾರ್ಥಿಗಳೂ ಇದನ್ನು ಬಳಸುತ್ತಿದ್ದರು —ಬೇರೆಯಿಲ್ಲದ್ದರಿಂದ. ಇವರಿಗಿಂತಲೂ ಹೆಚ್ಚಾಗಿ ಕಾಲೇಜಿನ ಕೆಳದರ್ಜೆಯ ನೌಕರರು (ಅಟೆಂಡರುಗಳು, ಪ್ಯೂನುಗಳು, ಇತ್ಯಾದಿ) ತಮ್ಮ ಇಷ್ಟಬಂದ ರೀತಿಯಲ್ಲಿ ಇದನ್ನು ಉಪಯೋಗಿಸುತ್ತಿದ್ದದ್ದೂ ಅಲ್ಲದೆ, ಇದರ ಒಳಗನ್ನೂ ಹೊರಗನ್ನೂ ಹೊಗೆಸೊಪ್ಪು, ಬೀಡಿ, ಸಿಗರೇಟು ವಗೈರೆಗಳನ್ನು ಸೇದುವ ಕಟ್ಟೆಯನ್ನಾಗಿ ಮಾಡಿಕೊಂಡಿದ್ದರು. ಕಬ್ಬನ್ ಪೇಟೆಯ ಮಹಾಜನರಿಗಂತೂ ಈ ಶೌಚಗೃಹವೇ ಅವರವರ ಮನೆಯ ಶೌಚಗೃಹವೂ ಆಗಿತ್ತು. ಈ ನರಕಲೋಕಕ್ಕೂ ಪೂರ್ವದಿಕ್ಕಿನ ಕಟ್ಟಡಕ್ಕೂ ನಡುವಿನ ಓಣಿಯಲ್ಲಿ ನಾರಾಯಣನ ಎಂಜಲು ಮುಸುರೆ ಪಾತ್ರೆಗಳನ್ನು ತಿಕ್ಕಿ ತೊಳೆಯುವ ಬಚ್ಚಲು. ಕಟ್ಟಡದ ದಕ್ಷಿಣಮೂಲೆಯಲ್ಲಿ ಪಶ್ಚಿಮಾಭಿಮುಖವಾಗಿದ್ದ ರೂಮು ಭೂಶಾಸ್ತ್ರದ

ಉಗ್ರಾಣ; ಇದರ ಹೊರ ಮೆಟ್ಟಲುಗಳ ಮೇಲೆ ಕಲ್ಲುಗಳನ್ನು ಉಜ್ಜಿ ಉಜ್ಜಿ ಸವೆಸಿ ನೀರಿನಲ್ಲಿ ತೇದು ತೇದು 'ಸೆಕ್‌ಷನ್' ತೆಗೆಯುವ ಕಾರ್ಖಾನೆಯೂ ನಡೆಯುತ್ತಿತ್ತು. ಈ ಕಲ್ಲುಕಾರ್ಖಾನೆಯಿಂದ ಚಿಮ್ಮುತ್ತಿದ್ದ ಪ್ರವಾಹವೂ, ನಾರಾಯಣನ ಬಚ್ಚಲು ಪ್ರವಾಹವೂ, ಶೌಚಗೃಹದ ಹೊರಗಂಡಿಯಿಂದ ಬರುತ್ತಿದ್ದ ಪ್ರವಾಹವೂ ಸಂಗಮವಾಗುವ ಪವಿತ್ರಸ್ಥಳ ಕನ್ನಡ ಇಲಾಖೆಯ ಎದುರು. ಇಲ್ಲಿಂದ ಹೀಗೆ ಸಂಗಮಗೊಂಡ ಈ ವಾಹಿನಿ ಪಶ್ಚಿಮದಿಕ್ಕಿಗಿದ್ದ ದೊಡ್ಡ ಇಳಿಜಾರು ಪ್ರದೇಶವನ್ನು ಸೇರುತ್ತಿತ್ತು. ಬಿಸಿಲುಗಾಲದಲ್ಲಿ ಒಣಗಿದ ಕೊಚ್ಚೆಯ ಸುವಾಸನೆ, ಮಳೆಗಾಲದಲ್ಲಿ ಹಸಿಕೊಚ್ಚೆಯ ಪರಿಮಳ; ನಾರಾಯಣನ ಅಡುಗೆಮನೆಯಿಂದ ಹೊಮ್ಮುತ್ತಿದ್ದ ಬಗೆಬಗೆಯ ಗಂಧಗಳೂ ನೌಕರರ ಧೂಮಪಾನಾದಿಗಳ ಕಂಪುಗಳೂ ಚಿತ್ರವಿಚಿತ್ರ ಪ್ರಮಾಣಗಳಲ್ಲಿ ಮಿಳನಗೊಂಡು ಕನ್ನಡ ಇಲಾಖೆಯ ಹೊರಾವರಣದಲ್ಲಿಯೂ ಒಳಗೂ ಸದಾ ಗಾಢವಾಗಿ ವ್ಯಾಪಿಸಿಕೊಂಡಿರುತ್ತಿತ್ತು; ಅಲ್ಲಿ ಸುಳಿಯುತ್ತಿದ್ದ ಘ್ರಾಣೇಂದ್ರಿಯಗಳು ಮಾತ್ರವಲ್ಲ, ಇತರ ರಂಧ್ರೇಂದ್ರಿಯಗಳ ಮೂಲಕವೂ ದೇಹದ ಒಳಗನ್ನು ಹೊಗುತ್ತಿತ್ತು. ಮಳೆಗಾಲದಲ್ಲಂತೂ ಪಕ್ಕದ ಜೌಗಿನಿಂದ ಲಕ್ಷಗಟ್ಟಲೆ ಉತ್ಪನ್ನವಾಗುತ್ತಿದ್ದ ಸೊಳ್ಳೆಗಳ ಸಮುದಾಯಸಂಗೀತದ ಸವಿ ಯಾರ ಅನುಭವಕ್ಕಾದರೂ ಅನಿವಾರ್ಯವಾಗಿ ಉಂಟಾಗುತ್ತಿತ್ತು. ಒಂದು ಸೆಕೆಂಡು ಕೈಕಾಲುಗಳನ್ನು ಬೀಸದೆ ಅಲ್ಲಿ ನಿಂತದ್ದೇ ಆದರೆ ಕನಿಷ್ಠಪಕ್ಷ ಒಂದು ನೂರು ಸೊಳ್ಳೆಗಳಿಗಾದರೂ ರಕ್ತಾಹಾರ ಒದಗಿಸಬೇಕಾಗಿ ಬರುತ್ತಿತ್ತು.

ಸಂಘದ ದೇಹಸ್ವರೂಪ



ಕ – ಕರ್ಣಾಟಕ ಸಂಘ. ಉ – ಉರ್ದು. ತ – ತಮಿಳು. ಸ – ಸಸ್ಯಶಾಸ್ತ್ರ ಇಲಾಖೆಯ ಉಗ್ರಾಣ. ನಾ – ನಾರಾಯಣನ ಹೋಟೆಲು. ಬಾ – ಬಾಲಚಮೂ. ತೆ – ತೆಲುಗು. ಸಂ – ಸಂಸ್ಕೃತ. ಭೂ – ಭೂಶಾಸ್ತ್ರ ಇಲಾಖೆಯ ಉಗ್ರಾಣ. ಪ್ರಾ – ಪ್ರಾಣಿಶಾಸ್ತ್ರ ಇಲಾಖೆಯ ಉಗ್ರಾಣ. ತ್ರಿ – ತ್ರಿವೇಣೀ ಸಂಗಮ.

ಸೆಂಟ್ರಲ್ ಕಾಲೇಜಿನ ಇತರ ಇಲಾಖೆಗಳ ಕಟ್ಟಡಗಳಿಗಿರುವಂತೆ ಕನ್ನಡ ಇಲಾಖೆಗೆ ಯಾವೊಂದು ವಾಸ್ತುವೈಶಿಷ್ಟ್ಯವೂ ಇರಲಿಲ್ಲ. ಅದು ವಾಸದ ಮನೆಯಂತೆಯೂ ಅಲ್ಲ, ಲಾಯದಂತೆಯೂ ಅಲ್ಲ, ವಠಾರದಂತೆಯೂ ಅಲ್ಲ, ಜೋಪಡಿಯಂತೆಯೂ ಅಲ್ಲ, ಗುಡಿಸಿಲಿನಂತೆಯೂ ಅಲ್ಲ. ಯಾವುದೂ ಅಲ್ಲದ, ಇಲ್ಲದ ವಾಸ್ತುಪ್ರಸ್ತಾರ ಕನ್ನಡ ಇಲಾಖೆಯದು. ಕಟ್ಟಡದ ಉತ್ತರದಿಕ್ಕಿನ ಮೂಲೆಯ ಎರಡು ರೂಮುಗಳೂ, ಅವುಗಳಲ್ಲಿ ಪಶ್ಚಿಮಾಭಿಮುಖವಾಗಿದ್ದ ರೂಮಿನ ಪಕ್ಕದ ಕೊಠಡಿಯೂ ಕನ್ನಡ ಇಲಾಖೆಗೆ ಸೇರಿದ್ದು.

ಮೂಲೆಯ ಜೋಡಿರೂಮಿನ ಪೂರ್ವಪಾರ್ಶ್ವದ ಗೋಡೆಯಲ್ಲೊಂದು ಬಾಗಿಲು, ಪಶ್ಚಿಮಪಾರ್ಶ್ವದ ಗೋಡೆಯಲ್ಲೊಂದು ಬಾಗಿಲು ಇದ್ದವು. ಇತರ


ಭಾಷಾಶಾಖೆಗಳವರು ಪೂರ್ವದಿಕ್ಕಿನ ಬಾಗಿಲನ್ನೇ ಮುಖದ್ವಾರವಾಗಿ ಬಳಸುತ್ತಿದ್ದರು. ಆಯಾ ಇಲಾಖೆಗಳ ಹಿಂಬದಿಗಿದ್ದ ರೂಮುಗಳು ಬೇರೆಯವರಿಗೆ ಸೇರಿದ್ದುವಾದ್ದರಿಂದ ಇದು ಅನಿವಾರ್ಯವಾಗಿತ್ತು. ಕನ್ನಡ ಇಲಾಖೆ ಮಾತ್ರ ಪೂರ್ವದಿಕ್ಕಿನ ಬಾಗಿಲನ್ನು ಶಾಶ್ವತವಾಗಿ ಮುಚ್ಚಿಬಿಟ್ಟು, ಪಶ್ಚಿಮ ಪಾರ್ಶ್ವಕ್ಕಿದ್ದ ಬಾಗಿಲನ್ನೇ ಮುಖದ್ವಾರವಾಗಿ ಉಪಯೋಗಿಸುತ್ತಿತ್ತು. ಪೂರ್ವದಿಕ್ಕಿನ ಬಾಗಿಲಿಗೆದುರಾಗಿಯೇ ಜನ ಓಡಾಡುವ ರಸ್ತೆ; ಕಾಲೇಜಿಗೆ ಬರುವ ಹೋಗುವ ಬಹುಭಾಗ ಜನಸಂಖ್ಯೆ ಈ ರಸ್ತೆಯ ಮೂಲಕವೇ ಹಾದುಹೋಗಬೇಕು. ಸಾಲದ್ದಕ್ಕೆ ನಾರಾಯಣನ ಹೋಟೆಲಿನ ಜನಜಂಗುಳಿ ಬೇರೆ. ಈ ಗದ್ದಲದಿಂದ ಸ್ವಲ್ಪವಾದರೂ ದೂರವಾಗಿರೋಣವೆಂದೋ, "ನಮಗೇಕೆ ಆಡಂಬರ? ವನಸುಮದಂತಿದ್ದು ಬಿಡೋಣ" ಎಂಬ ವಿನಯದಿಂದಲೋ, ಕೆಣಕುವ ಸುತ್ತುಮುತ್ತನ್ನೂ ನುಂಗಿಕೊಂಡು ಕನ್ನಡದವರು ಪಶ್ಚಿಮಾಭಿಮುಖವಾಗಿದ್ದ ಬಾಗಿಲನ್ನೇ ಬಳಸಿಕೊಂಡರೆಂದು ನನ್ನ ಊಹೆ.

ಇದುವರೆಗೂ 'ಕನ್ನಡ ಇಲಾಖೆ' ಎಂದೇ ನಿರ್ದೇಶಿಸುತ್ತಿರುವೆನಲ್ಲವೆ? ಇನ್ನು ಮೇಲೆ ಇದನ್ನೇ 'ಕರ್ಣಾಟಕ ಸಂಘ'ವೆಂದು ಕರೆಯುತ್ತೇನೆ. ವ್ಯವಹಾರ ದೃಷ್ಟಿಯಿಂದ ಈ ಎರಡು ಸಂಸ್ಥೆಗಳೂ ಬೇರೆಬೇರೆಯೇ. ಆದರೆ ಕಾರ್ಯರಂಗ ದೃಷ್ಟಿಯಿಂದ ಇವೆರಡರ ಒಡಲೂ ಒಂದೇ, ಅಸುವೂ ಒಂದೇ. ಕಾಲೇಜಿನ ಇತರ ಕಟ್ಟಡಗಳಿಗಿರುವಂತೆಯೇ ಸಂಘದ ಹೊರಗೋಡೆಗೂ ಕೆಂಪು ಬಣ್ಣ. ಗೋಡೆ ಅಂಥ ಎತ್ತರವಾಗಿಯೇನೂ ಇರಲಿಲ್ಲ. ಮೇಲ್ಛಾವಣಿ ಮಂಗಳೂರು ಹೆಂಚಿನದು. ಟಿ. ಎಸ್. ವೆಂಕಣ್ಣಯ್ಯನವರಂಥವರು ಸಂಘದೊಳಗೆ ನಿಂತು ಕೈ ಮೇಲಕ್ಕೆತ್ತಿದರೆ ಸೂರಿನ ಕೆಲವು ಭಾಗಗಳು ಕೈಗೆಟುಕುತ್ತಿದ್ದವು. ಒಂದು ಸಲ ಅವರು ಕುಳಿತಿದ್ದ ಕುರ್ಚಿಯಿಂದ ಎದ್ದುನಿಂತು ಸೂರಿನಲ್ಲಿ ಸಿಕ್ಕಿಸಿದ್ದ ಯಾವುದೋ ಕಾಗದದ ಸುರುಳಿಯನ್ನು ನಿರಾಯಾಸವಾಗಿ ತೆಗೆದುಕೊಂಡಿದ್ದರು; ನಾನೇ ಕಣ್ಣಾರ ಕಂಡ ದೃಶ್ಯ ಅದು. ಸಂಘದ ಛಾವಣಿಯ ಆಶ್ರಯ ಪಡೆದವರಿಗೆ ಈ ಸೂರಿನಿಂದ ದೇವತೆಗಳಿಗೂ ದೊರಕದಂಥ ಎರಡು ಅಪೂರ್ವ ವಿಶ್ವತತ್ವ ರಹಸ್ಯಗಳು ಬೋಧೆಯಾಗುತ್ತಿದ್ದವು. ಒಂದರ ದೃಗ್ಗೋಚರ ಅನುಭವಗಳು ಬೇಸಗೆಯಲ್ಲಿ,—ಸೂರ್ಯನೇ ಅಗ್ನಿ, ಅಗ್ನಿಯೇ ಕಾವು, ಕಾವೇ ಕರ್ಣಾಟಕ ಸಂಘ, ಎಂಬ ಸಮನ್ವಯ. ಇನ್ನೊಂದರವು ಮಳೆಗಾಲದಲ್ಲಿ,—ವರುಣನು

ಒಂದು ಅರ್ಥದಲ್ಲಿ ಎಂದೋ 'ಮಡಿದುರುಳಿ' ಹೋಗಿದ್ದರೂ ಇಂದಿಗೂ ಅವನ ಪ್ರಭಾವಪ್ರತೀಕಾರಗಳು ಶಾಶ್ವತವಾಗಿ ಉಳಿದುಕೊಂಡಿವೆಯೆಂಬುದರ ಅರಿವು. ಸಂಘದ ನೆಲದ ಮೇಲೆ ಹಾಸಿದ್ದ ಒರಟು ಕಲ್ಲುಚಪ್ಪಡಿಗಳ ಮೇಲೆ, ಒಳಗೋಡೆಗಳ ಮೇಲೆ, ಛಾವಣಿಯ ಒಳಮೈ ಮೇಲೆ ಅವಿಚ್ಛಿನ್ನವಾದ ಜೌಗು; ಕುರ್ಜಿ ಮೇಜು ಅಲಮಾರುಗಳ ಮೇಲುಹೊರಗುಗಳೆಲ್ಲೆಲ್ಲಿಯೂ ಸದಾ ತೇವದಹೊದಿಕೆ. "ಸರ್ವಂ 'ಬೂಸು'ಮಯಂ ಜಗತ್". ಕುರ್ಜಿಯಲ್ಲಿ ಕೂತು ಎದ್ದವರಿಗೆ ಅದರ ಮುದ್ರೆ ತಮ್ಮ ತಳದಲ್ಲಿ ಶಾಶ್ವತವಾಗಿ ಅಚ್ಚಾಗುತ್ತಿತ್ತು.

ಸಂಘದ ಅಂಗರಚನೆ

ಉತ್ತರದಿಕ್ಕಿನ ಮೂಲೆಯ ರೂಮುಜೋಡಿಯೂ, ಪಶ್ಚಿಮಕ್ಕೆದುರಾಗಿ ಇದನ್ನಂಟಿಕೊಂಡಿದ್ದ ರೂಮೂ ಕರ್ಣಾಟಕ ಸಂಘಕ್ಕೆ ಸೇರಿದ್ದು. ಪಶ್ಚಿಮಾಭಿಮುಖವಾಗಿದ್ದ ರೂಮಿನಲ್ಲಿ ಕನ್ನಡ ಅಧ್ಯಾಪಕರು ಕುಳಿತುಕೊಳ್ಳುತ್ತಿದ್ದರು; ಹತ್ತು ಜನಕ್ಕೆ ಮೇಲಿಲ್ಲದ ತರಗತಿಗಳಾಗಿದ್ದರೆ ಅವಕ್ಕೆ ಪಾಠವನ್ನೂ ಇಲ್ಲಿಯೇ ಹೇಳಿಕೊಡುತ್ತಿದ್ದರು. ಮೂಲೆಯ ರೂಮುಜೋಡಿ ಸಂಕುಚಿತಾರ್ಥದಲ್ಲಿ ಕರ್ಣಾಟಕ ಸಂಘ; ಅಧ್ಯಾಪಕರ ಕೊಠಡಿಯೂ ಸೇರಿದರೆ ಮೂರೂ ಒಟ್ಟಾಗಿ ವಿಸ್ತಾರಾರ್ಥದಲ್ಲಿ ಕರ್ಣಾಟಕ ಸಂಘ.



ಮೂಲೆಯ ರೂಮುಜೋಡಿಯನ್ನು ಪಶ್ಚಿಮ ಮುಖದ್ವಾರದಿಂದ ಹೊಕ್ಕೆವೆನ್ನಿ. ಬಲಬದಿಯ ಗೋಡೆಗೆ ಅಂಟಿಕೊಂಡಂತೆ ಉತ್ತರಕ್ಕೆ ತಿರುಗಿದ


ಎರಡು ಕುರ್ಜಿಗಳು, ಎಡ್ಗಬದಿಗೆ ಉತ್ತರಾಭಿಮುಖವಾಗಿ ತಿರುಗಿಕೊಂಡಿದ್ದ ಇನ್ನೊಂದು ಕುರ್ಜಿ; ಇದರೆದುರು ಉತ್ತರಪಶ್ಚಿಮಗೋಡೆಗಳನ್ನಂಟಿಕೊಂಡಂತೆ ಒಂದು ಮೇಜು. ಈ ಮೇಜು ಕುರ್ಜಿಗಳು ನನಗೆ ಪ್ರತ್ಯಕ್ಷದೈವ, ಪ್ರತ್ಯಕ್ಷ ಗುರು; ಅತ್ಯಂತ ನಿರ್ಮಲವಾದ ಪವಿತ್ರವಾದ ನಿಷ್ಕಾಮಕರ್ಮವಾದ ಜ್ಞಾನ ವೇದಿಕೆಯ ಕುರುಹು. ವೆಂಕಣ್ಣಯ್ಯನವರು, ಕೃಷ್ಣಶಾಸ್ತ್ರಿಯವರು, ಪುಟ್ಟಪ್ಪ ನವರು, ಸೀತಾರಾಮಯ್ಯನವರು, ಡಿ. ಎಲ್. ನರಸಿಂಹಾಚಾರ್ಯರು, ರಾಜರತ್ನಂ ಅವರು, ಅಧ್ವರ್ಯುಗಳಾಗಿ ಮಂಡಿಸಿದ್ದದ್ದು ಈ ಕುರ್ಜಿಯ ಮೇಲೆ; ಪಾಠಪುಸ್ತಕಗಳನ್ನು ಹರಡಿಕೊಂಡಿದ್ದದ್ದು ಈ ಮೇಜಿನ ಮೇಲೆ. ಪ್ರಬುದ್ಧ ಕರ್ಣಾಟಕವೂ, ಸಂಘದ ಇತರ ಪ್ರಕಟನೆಗಳೂ ಒಂದಲ್ಲ ಒಂದು ರೀತಿಯಲ್ಲಿ ರೂಪಗೊಂಡದ್ದು ಈ ಮೇಜು ಕುರ್ಜಿಗಳಿಂದ. ಪ್ರಬುದ್ಧ ಕರ್ಣಾಟಕದ ಸಂಪಾದಕೀಯ, ವಸ್ತುಕೋಶಗಳು ಸಿದ್ಧವಾಗುತ್ತಿದ್ದದ್ದೂ ಇಲ್ಲೆ. ಸಂಘದ ಆಶ್ರಯದಲ್ಲಿ ನಡೆಯುತ್ತಿದ್ದ ಕಾರ್ಯಕ್ರಮಗಳು, ಅವುಗಳ ರೀತಿನೀತಿಗಳು, ಉದಯವಾಗುತ್ತಿದ್ದದ್ದೂ ಇಲ್ಲಿಯೆ.

ಮೇಜಿನ ಪಕ್ಕದಲ್ಲಿ, ದಕ್ಷಿಣಾಭಿಮುಖವಾಗಿ ಒಂಟಿಕುರ್ಜಿಯೊಂದಿರು ತ್ತಿತ್ತು. ಒಂಟಿಯಾಗಿ ಸಂಘದೊಳಕ್ಕೆ ಬಂದ ಭೇಟಿಗಾರ ಸಾಮಾನ್ಯವಾಗಿ ಕುಳಿತುಕೊಳ್ಳುತ್ತಿದ್ದ ಜಾಗ ಇದು. ಈ ಕುರ್ಜಿಯ ಪಕ್ಕದಲ್ಲಿ ರೂಮುಜೋಡಿಯ ನಡುಗೋಡೆಗಂಟಿಕೊಂಡಂತೆ ಪಶ್ಚಿಮಕ್ಕೆ ತಿರುಗಿದ ಎರಡು ಬೀರುಗಳು, ಒಂದರ ಪಕ್ಕದಲ್ಲೊಂದು. ಮೂಲೆಯಲ್ಲಿದ್ದ ಬೀರುವಿನಲ್ಲಿ ಬೈಂಡಾದ ಪ್ರಬುದ್ಧಕರ್ಣಾಟಕ ಸಂಪುಟಗಳು, ಸಂಘದ ಇತರ ಪ್ರಕಟನೆಗಳು, ಇವಕ್ಕೂ ಸಂಘಕ್ಕೂ ಸಂಬಂಧಿಸಿದ ಕಾಗದ ಪತ್ರಗಳು. ಇದರ ಪಕ್ಕದ ಬೀರುವಿನಲ್ಲಿ ಅವೇನಿದ್ದುವೋ ನನಗೆ ಗೊತ್ತಿಲ್ಲ; ಗಾಜಿನ ಹಿಂಬದಿಪೂರ ಕಾಕಿಕರಡುಕಾಗದ ಅಂಟಿಸಿದ್ದರು.

ಈ ಚೌಬೀನೆ ಸಾಮಾನುಗಳ ನಡುವೆ ಒಂದು ಸ್ಟೂಲು. ಇದಕ್ಕೆ ನಿರ್ದಿಷ್ಟಸ್ಥಾನವಾವುದೂ ಇರಲಿಲ್ಲವೆಂದು ನನ್ನ ಜ್ಞಾಪಕ. ಸಾಧಾರಣವಾಗಿ ನಡುಗೋಡೆಯ ಬಾಗಿಲಿನ ಹೊಸಿಲಮೇಲೆ ಕೂತಿರುತ್ತಿತ್ತು. ಮೂವರಿಗೆ ಮೇಲ್ಪಟ್ಟ ಸಂಖ್ಯೆಯಲ್ಲಿ ಅತಿಥಿಗಳು ಬಂದರೆ ಇದೂ ಆಸನಯೋಗ್ಯತೆ ಪಡೆಯು ತ್ತಿತ್ತು; ಸಂಘದ ಆಶ್ರಯದಲ್ಲಿ ನಡೆಯುತ್ತಿದ್ದ ಉತ್ಸವಾದಿಗಳಲ್ಲಿ ಮುಖ್ಯ ಅತಿಥಿ ಗಳಾಗಿ ಆಹ್ವಾನಿತರಾದವರಿಗೆ ಅರ್ಪಿಸುತ್ತಿದ್ದ ಹೂವಾಲೆ ತುರಾಯಿಗಳಿಗೆ

ಹಂಗಾಮಿ ಪೀಠವಾಗುತ್ತಿತ್ತು; ಇಂಥದೇ ಸಂದರ್ಭಗಳಲ್ಲೂ ಇತರವೇಳೆಗಳಲ್ಲೂ ನಾರಾಯಣನ ಹೋಟೆಲಿಂದ ಸರಪರಾಜಾಗುತ್ತಿದ್ದ ಪಾನಕ ಪಣ್ಯಾರಗಳನ್ನು ಇಡುವುದಕ್ಕೆ ಇದು ಮಣೆಯಾಗುತ್ತಿತ್ತು; ಸಂಘದ ಆಳು, ಮುದ್ದಯ್ಯ, ಚಾವಣಿಯ ಧೂಳು ಹೊಡೆಯುವಾಗ ಅದನ್ನು ಎಟುಕಿಸಿಕೊಳ್ಳುವ ಸಾಧನ ವಾಗಿತ್ತು, ಅವನು ಕುಳಿತು ಗೊರಕೆಹೊಡೆಯುವ ಸುಪ್ಪತ್ತಿಗೆಯೂ ಆಗಿತ್ತು, ನಾನು ಕಾರ್ಯದರ್ಶಿಯಾಗಿದ್ದಾಗ ನನ್ನ ದರ್ಬಾರು ಸಿಂಹಾಸನವಾಗಿತ್ತು.

ನಡುಗೋಡೆಯ ಬಾಗಿಲಿನ ಮೂಲಕ ಪೂರ್ವದಿಕ್ಕಿನ ರೂಮಿನೊಳಕ್ಕೆ ಪ್ರವೇಶ. ಇದನ್ನೊಂದು ಗುಹಾಲಯವೆಂದು ಹೇಳಬಹುದು. ಈ ರೂಮಿಗೆ ಪ್ರತ್ಯೇಕವಾಗಿ ಒಂದು ಬಾಗಿಲೂ ಎರಡು ಕಿಟಕಿಗಳೂ ಇದ್ದುವಾದರೂ ಅವುಗಳ ಮೂಲಕ ಗಾಳಿ ಬೆಳಕುಗಳು ಒಳಹೊಕ್ಕದ್ದನ್ನು ನಾನು ಕಂಡಿಲ್ಲ. ಈ ರೂಮಿ ನಲ್ಲಿ ನಾಲ್ಕೈದು ಮುರುಕಲು ಬೆಂಚುಗಳು, ಅವುಗಳ ಮೇಲೆ ಸಂಘದ ಪ್ರಕಟನೆಗಳ ಕಟ್ಟುಗಳು. ಸರಸ್ವತಿಯನ್ನು ಇಲ್ಲಿಯೇ ಗಟ್ಟಿಯಾಗಿ ಸೆರೆಹಿಡಿ ದಿಟ್ಟಿರುವಂತೆ ಭಾಸವಾಗುತ್ತಿತ್ತು. ಸಂಘದ ಇತರ ಆಸ್ತಿಪಾಸ್ತಿಗಳು ಅಡಕ ವಾಗಿದ್ದದ್ದೂ ಈ ರೂಮಿನಲ್ಲಿಯೇ. ಇವುಗಳ ಪೈಕಿ ಮುಖ್ಯವಾದದ್ದು ಸಂಘದ ಆಶ್ರಯದಲ್ಲಿ ಅನಾವರಣಗೊಂಡಿದ್ದ ಕೆಲವು ಕನ್ನಡ ಆಚಾರ್ಯಪುರುಷರ ಭಾವಚಿತ್ರಗಳು. ಗೋಡೆಯ ಮೇಲೆ ಪ್ರದರ್ಶಿಸಲು ಎಡೆ ಇಲ್ಲದ್ದರಿಂದ ಪಟಗಳು ಒಂದರಮೇಲೊಂದರಂತೆ ಜೋಡಣೆಯಾಗಿ, ಗೋಡೆಗೆ ಒರಗಿ, ಯಾವುದೋ ಹರಿದು ಜೂಲುಜೂಲಾದ ಜಮಖಾನದ ತುಂಡಿನಿಂದ ಆವರಣಗೊಂಡಿದ್ದವು. ಮೊದಲನೆ ಸಲ ನಾನು ಈ ಗುಹೆಯೊಳಕ್ಕೆ ಹೊಕ್ಕಾಗ ಜಮಖಾನದ ಮುಸುಗಿನ



ಒಂದು ತೂತಿನಿಂದ ಎರಡು ಕಣ್ಣು ಗಳು ನನ್ನನ್ನು ದುರುದುರು ನೋಡ ತೊಡಗಿದವು; ಸುತ್ತಲೂ ಕತ್ತಲೆ; ಮುಚ್ಚಿದ್ದ ಕಿಟಕಿಯ ಸಂದಿನಿಂದ ಬೆಳಕಿನ ಕಿರಣವೊಂದು ಬಂದು ಆ ಕಣ್ಣುಗಳ ಮೇಲೆ ಸರಿಯಾಗಿ ಬಿದ್ದಿತ್ತು. ಆ ದೃಶ್ಯವನ್ನು ಕಂಡು ನನ್ನೆದೆ ಹಿಡಿಯಿತು. ಹುಲಿಯೋ ಚಿರತೆಯೋ ಇನ್ನಾವ ವನ್ಯಮೃಗವೋ ಎಂದು ಒಡನೆಯೆ ಭ್ರಾಂತಿಯಾಯಿತು. ಅಂಥ ಪ್ರಾಣಿಗಳಾವುವೂ ಈ ಸ್ಥಳಕ್ಕೆ

ಬಾರವೆಂಬ ನೆನಪುಂಟಾಗಿ ಮನಸ್ಸನ್ನು ತಹಬಂದಿಗೆ ತಂದುಕೊಂಡೆ; ಮುಸುಗು ತೆಗೆದು ನೋಡಿದ ಮೇಲೆ ತಾನೆ ಪೂರ್ತಿ ನೆಮ್ಮದಿಯಾಯಿತು. ಹಿಂದೆ ಅನಾವರಣಗೊಂಡಿದ್ದ ಮಹನೀಯರೊಬ್ಬರ ಭಾವಚಿತ್ರ ಅದು!

ಸಂಘದ ಆಸ್ತಿಯ ಇನ್ನೊಂದು ಭಾಗ ಪೊಟರೆಹೊಡೆಯುವ ಪೊರಕೆ, ಗುಡಿಸುವ ಪೊರಕೆ ಮತ್ತು ಮೊರ; ಮೊದಲನೆಯದು ತಾಳೆಯ ಮರದಂತೆ ಒಂದು ಮೂಲೆಯಲ್ಲಿ ನಿಂತುಕೊಂಡಿತ್ತು, ಎರಡನೆಯದು ಪುಸ್ತಕದ ಕಟ್ಟುಗಳ ಮೇಲೆ ಕಿರೀಟದಂತೆ ಮಂಡಿಸಿತ್ತು, ಮೂರನೆಯದು ಗೋಡೆಯಲ್ಲಿನ ಗೂಟವೊಂದರಮೇಲೆ ಆನೆಯ ಕಿವಿಯಂತೆ ತೂಗಾಡುತ್ತಿತ್ತು. ಮುದ್ದಯ್ಯನ ತಲೆಯ ಮೇಲೆ ವರ್ಷಾನುಗಟ್ಟಲೆ ನೀರಿನ ಮುಖವನ್ನೇ ಕಾಣದೆ ಅಲ್ಲಿಯೇ ರಟ್ಟುಗಟ್ಟಿ



ಶಿಥಿಲವಾದ ಮುಂಡಾಸಿನ ತುಂಡು ಪೇಲಿಕೆಯೊಂದು ಮೊರಕ್ಕೆ ತಿಲಕವಿಟ್ಟಂತೆ ಅದರಮೇಲೆ ನೇತಾಡುತ್ತಿತ್ತು. ಇದು ಬೀರುವಿನ ಗಾಜನ್ನೊರಸುವ ಬಟ್ಟೆ, ಕುರ್ಜಿಮೇಜುಗಳನ್ನೊರಸುವ ಬಟ್ಟೆ. ಪೇಲಿಕೆಯ ಸೋಂಕಿನಿಂದ ಶುಚಿಗೊಂಡ ಕುರ್ಜಿಗಳ ಶುಭ್ರತೆ ಅವುಗಳಮೇಲೆ ಕುಳಿತು ಎದ್ದವರಿಗೆ ಮಾತ್ರ ಗೊತ್ತು!

ಒಂದು ಪ್ರಸಂಗ

ಕರ್ಣಾಟಕ ಸಂಘಕ್ಕೆ ಸೆಂಟ್ರಲ್ ಕಾಲೇಜಿನ ಹೊರಗೆ ಸ್ಪರ್ಧಿಗಳಾರೂ ಇರಲಿಲ್ಲ, ಇದ್ದವರೆಲ್ಲ ಒಳಗಿನವರೇ. ಮೊದಲನೆಯದು ಯೂನಿವರ್ಸಿಟಿ ಯೂನಿಯನ್. ಕ್ರಮವಾಗಿ ಸಯನ್ಸ್ ಅಸೋಸಿಯೇಷನ್‌ಗಳು, ಸಂಸ್ಕೃತ, ತೆಲುಗು, ತಮಿಳು ಸಂಘಗಳು. ಕಾಲೇಜಿನಲ್ಲಿ ಪಾಠಪ್ರವಚನಗಳು ನಡೆಯುತ್ತಿದ್ದದ್ದು ವಾರದಲ್ಲಿ ಐದು ದಿನ. ಈ ಎಲ್ಲ ಸಂಘಗಳ (ಸುಮಾರು ೧೨) ಕಾರ್ಯಕ್ರಮಗಳೂ ಈ ಐದು ದಿನಗಳಲ್ಲಿ ಅಡಕವಾಗಬೇಕು! ಬೇರೆಬೇರೆ ಸಂಘಗಳ ಕಾರ್ಯಕ್ರಮಗಳು ಎದುರುಬದರಾಗುತ್ತಿದ್ದದ್ದು ಅನಿವಾರ್ಯವೂ ಸಾಮಾನ್ಯವೂ ಆಗಿತ್ತು. ನಿವಾರಣೋಪಾಯಗಳನ್ನು ಹುಡುಕುವ ಉದ್ದೇಶದಿಂದ ಸಕಲ ಸಂಘಗಳ ಕಾರ್ಯದರ್ಶಿಗಳ ಸಭೆ ಒಂದೆರಡು ಸಲ ನಡೆಯಿತು,—ಪ್ರಿನ್ಸ್‌ಪಾಲ್ ಮೆಕ್ ಆಲ್ಪೈನ್ ಅವರ ಅಧ್ಯಕ್ಷತೆಯಲ್ಲಿ. ವಾರದ ಒಂದೊಂದು ದಿನವನ್ನೂ ಒಂದೋ ಎರಡೋ ಸಂಘಗಳು ಮೀಸಲಾಗಿಟ್ಟುಕೊಳ್ಳುವಂತೆ ಮೊದಲನೆಯ ಸಭೆಯಲ್ಲಿ ಸೂಚನೆಕೊಟ್ಟರು. ಅವರೇ ಅಧ್ಯಕ್ಷರಾಗಿದ್ದ ಯೂನಿವರ್ಸಿಟಿ ಯೂನಿಯನ್ನೇ ಸೂಚನೆಗೆ ವ್ಯತಿರಿಕ್ತವಾಗಿ ದರ್ಬಾರು ನಡಸಲಾರಂಭಿಸಿತು. ಎರಡನೆಯ ಸಭೆ ಸೇರಿತು. ಮೆಕ್ ಆಲ್ಪೈನ್ ಅವರು ಬೆಕ್ಕಿಗೆ ಜ್ವರಬಂದ ಕಾರಣಗಳನ್ನು ಕೊಟ್ಟು, "ಆದದ್ದಾಯಿತು, ಇನ್ನು ಮುಂದೆ ಕ್ರಮದಲ್ಲಿ ನಡೆಯೋಣ" ಎಂದು ಹೇಳಿ ಒಂದು ಪಟ್ಟಿ ತಯಾರಿಸುವುದಕ್ಕೆ ಅನುವಾದರು. "ವರ್ಷದಲ್ಲಿ ಸುಮಾರು ನೂರು ದಿನ ಕಾಲೇಜಿನ ಪಾಠಪ್ರವಚನಗಳು ನಡೆಯುತ್ತವೆ; ಎಲ್ಲ ಸಂಘಗಳ ಕಾರ್ಯಕ್ರಮಗಳೂ ಇಷ್ಟರಲ್ಲಿ ಅಡಕವಾಗಬೇಕು. ಯೂನಿಯನ್ನು ಸಮಸ್ತ ವಿದ್ಯಾರ್ಥಿ ಸಂಸ್ಥೆಯಾದದ್ದರಿಂದ ಅದರ ಕಾರ್ಯಕ್ರಮಗಳಿಗೆ ಅರವತ್ತು ದಿನ, ಸಯನ್ಸ್‌ಸಂಘಗಳಿಗೂ 'ಸೆಮಿನಾರ್'ಗೂ ಮೊತ್ತವಾಗಿ ಮೂವತ್ತು ದಿನ, ಭಾಷಾಸಂಘಗಳೆಲ್ಲಕ್ಕೂ ಮೊತ್ತವಾಗಿ ಹತ್ತು ದಿನ" ಎಂದು ಪಟ್ಟಿ ಬರೆದು "ಎಲ್ಲರಿಗೂ ಸಮ್ಮತ ತಾನೆ?" ಎಂದರು.

"ಇದಾವ ರೀತಿಯ ನ್ಯಾಯ? ಯೂನಿಯನ್ನಿನ ಸದಸ್ಯರ ಸಂಖ್ಯೆಯೇನೋ ಅಧಿಕವೇ. ಇದರ ಕಾರ್ಯಕ್ರಮಗಳಿಗೆ ಅರವತ್ತು ದಿನಗಳನ್ನು

ಕೊಟ್ಟದ್ದೀರಿ. ಈ ಸಂಸ್ಥೆಯನ್ನು ಬಿಟ್ಟರೆ ಕ್ರಮದಲ್ಲಿ ಬರುವುದು ಕರ್ಣಾಟಕ ಸಂಘ. ಇದಕ್ಕೆ ಇತರ ಭಾಷಾಸಂಘಗಳನ್ನೂ ಸೇರಿಸಿಕೊಂಡು ಹತ್ತು ದಿನ ಕೊಟ್ಟದ್ದೀರಿ! ಕರ್ಣಾಟಕ ಸಂಘದ ಪರವಾಗಿ ನನ್ನ ಅಹವಾಲನ್ನು ನಿಮ್ಮ ಮುಂದಿಡಬಹುದೆ?" ಎಂದೆ. ಇನ್ನಾವುದೋ ಸಂಘಗಳ ಕಾರ್ಯದರ್ಶಿಗಳೂ ಅಸಮ್ಮತಿ ಸೂಚಿಸಿದರು. ಸ್ವಲ್ಪ ತಿಕ್ಕಾಟವಾದ ಮೇಲೆ ಮೆಕ್ ಆಲ್ಪೈನ್,—"ಕರ್ಣಾಟಕ ಸಂಘಕ್ಕೆ ಮಾತ್ರ ಇನ್ನೆರಡು ದಿನ ಹೆಚ್ಚುಮಾಡುತ್ತೇನೆ" ಎಂದು ತಮ್ಮ ಔದಾರ್ಯವನ್ನು ತೋರಿಸಿಕೊಂಡರು. ಇದನ್ನು ಯಾರೂ ಮೆಚ್ಚಿ ಕೊಂಡಂತೆ ಕಾಣಲಿಲ್ಲ. ಪ್ರಾಣಿಶಾಸ್ತ್ರ ಸಂಘದ ಕಾರ್ಯದರ್ಶಿ ಕರ್ಣಾಟಕ ಸಂಘದ ಅವ್ಯಕ್ತ ಕಾರ್ಯದರ್ಶಿಗಳಲ್ಲೊಬ್ಬನಾಗಿದ್ದ; ಚೆನ್ನಾಗಿ ಮಾತನಾಡ ಬಲ್ಲವನು. ನಾನೇ ಮತ್ತೆ ಎದ್ದು ನಿಲ್ಲುವುದಕ್ಕೆ ಇಷ್ಟವಿಲ್ಲದೆ ಅವನಿಗೆ ಅಂಕುಶ ವಿಟ್ಟೆ. ಅವನೆದ್ದು "ಈ ಔದಾರ್ಯಕ್ಕೆ ನಿಮಗೆ ಕೃತಜ್ಞರಾಗಿರಬೇಕಾದದ್ದು ನಮ್ಮ ಧರ್ಮವೇ ಸರಿ. ಆದರೆ ಒಂದು ವಿಷಯವನ್ನು ಗಮನಿಸಬೇಕು. ಯೂನಿಯನ್ನು ಯಾವ ವರ್ಷದಲ್ಲಾದರೂ ಅರವತ್ತು ಕಾರ್ಯಕ್ರಮಗಳನ್ನು ನಡಸಿದ್ದುಂಟೆ? ನಾನೂ ಕಳೆದ ಮೂರು ವರ್ಷಗಳಿಂದ ನೋಡುತ್ತಿದ್ದೇನೆ,—ಇಪ್ಪತ್ತು ಕಾರ್ಯಕ್ರಮಗಳಿಗೆ ಮೇಲ್ಪಟ್ಟು ಯಾವ ವರ್ಷವೂ ನಡೆದಿಲ್ಲ. ಇದಕ್ಕಿಂತಲೂ ಹೆಚ್ಚಾಗಿ ನಡಸುವುದೂ ಸಾಧ್ಯವಿಲ್ಲ. ಕರ್ಣಾಟಕ ಸಂಘದಲ್ಲಿ ತಿಂಗಳಿಗೆ ಸರಾಸರಿ ಎರಡು ಕಾರ್ಯಕ್ರಮಗಳಿರುತ್ತವೆ. ನೀವು ಈಗ ಕೊಟ್ಟಿರುವ ಹತ್ತು ಹನ್ನೆರಡು ದಿನಗಳಲ್ಲಿ ಕೇವಲ ಎರಡೋ ಮೂರೋ ಕಾರ್ಯಕ್ರಮಗಳಿಗಿಂತ ಹೆಚ್ಚಾಗಿಡಲು ಸಾಧ್ಯವಾಗುವುದಿಲ್ಲ. ಆದ್ದರಿಂದ . . ." ಎಂದು ಹೇಳುವಷ್ಟರಲ್ಲಿಯೇ ಮೆಕ್ ಆಲ್ಪೈನ್ ಸಾಹೇಬರು ನಡುವೆ ಬಾಯಿ ಹಾಕಿ, "ನೀವು ನನಗೆ ಪಾಠ ಹೇಳಿಕೊಡಬೇಕಾಗಿಲ್ಲ, ಅದು ನನ್ನ ವೃತ್ತಿ. ನಾನು ಪಟ್ಟಿಯಲ್ಲಿ ನಮೂದಿಸಿರುವುದೇ ಕಡೆಯ ನಿರ್ಧಾರ" ಎಂದುಬಿಟ್ಟರು. ಸಭೆ ಮುಗಿಯಿತು.

ಕೆಲವು ದಿನಗಳಾದ ಮೇಲೆ ಕರ್ಣಾಟಕ ಸಂಘದಲ್ಲಿ ಸಿ. ಕೆ. ವೆಂಕಟ ರಾಮಯ್ಯನವರ ಉಪನ್ಯಾಸ ಏರ್ಪಾಡಾಯಿತು. ಸಂಘದ ಸಾರ್ವಜನಿಕ ಕಾರ್ಯಕಲಾಪಗಳು ಸೆಂಟ್ರಲ್ ಕಾಲೇಜಿನ ಎರಡು ಕಟ್ಟಡಗಳಲ್ಲಿ ನಡೆಯುತ್ತಿ ದ್ದವು,—ಗಣಿತಶಾಸ್ತ್ರ ಭವನದಲ್ಲಿ 'ಭಾರಿ' ಸಭೆಗಳು, ಭೌತಶಾಸ್ತ್ರ ಭವನದಲ್ಲಿ

ಕಿರಿಯ ಸಭೆಗಳು. ಸಿ. ಕೆ. ವಿ. ಯವರಂಥ ಭಾಷಣಗಳಿಗೆ ಗಣಿತಶಾಸ್ತ್ರ ಭವನ ಕೂಡ ಸಾಕಾಗುತ್ತಿರಲಿಲ್ಲ. ಪ್ರೇಕ್ಷಕರಿಂದ ತುಂಬಿ ಬಿರಿದುಹೋಗುತ್ತಿತ್ತು. ಇಂಥ ಉತ್ಸವಗಳಲ್ಲಿ ನೆರೆಯುತ್ತಿದ್ದ ಜನ ಸೆಂಟ್ರಲ್ ಕಾಲೇಜು ವಿದ್ಯಾರ್ಥಿಗಳು ಮಾತ್ರವಲ್ಲ, ಇಂಟರ್‌ಮೀಡಿಯೆಟ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳ ವಿದ್ಯಾರ್ಥಿಗಳು, ಸರ್ಕಾರಿ ಸೆಕ್ರೆಟೇರಿಯೆಟ್ ನೌಕರರು, ಬೆಂಗಳೂರಿನ ಸಾಹಿತಿಗಳು ಇತ್ಯಾದಿಯಾಗಿ ನಾನೂರು ಐನೂರು ಜನ ಸೇರುತ್ತಿದ್ದರು.

ಗಣಿತಶಾಸ್ತ್ರಭವನವನ್ನು ಇಂಥ ಸಾರ್ವಜನಿಕ ಕಾರ್ಯಗಳಿಗೆ ಉಪಯೋಗಿಸುವುದಕ್ಕೆ ಮುಂಚಿತವಾಗಿ ಪ್ರಿನ್ಸಿಪಾಲರ ಅನುಮತಿ ತೆಗೆದುಕೊಳ್ಳಬೇಕಾಗಿತ್ತು. ಈ ಸಂದರ್ಭದಲ್ಲಿ ಮೆಕ್ ಆಲ್ಪೈನ್ ಅವರನ್ನು ನೋಡಲು ಹೋದೆ. "ಕಳೆದವಾರತಾನೆ ನಿಮ್ಮ ಸಂಘದ ಕಾರ್ಯಕ್ರಮವೊಂದು ಅಲ್ಲಿಯೇ ನಡೆಯಿತಲ್ಲವೆ?" ಎಂದರು. "ಹೌದು, ಇದು ಇನ್ನೊಂದು" ಎಂದೆ. ಅವರಿಗೇಕೋ ಹಿಡಿಸಲಿಲ್ಲ. "You are not co-operating with the Union" ಎಂದು ಗೊಣಗಿಕೊಂಡರು. ಕರ್ಣಾಟಕ ಸಂಘದಲ್ಲಿ ಕಾರ್ಯಕ್ರಮ ಏರ್ಪಡಿಸಿದರೆ ಯೂನಿಯನ್ನಿನೊಡನೆ ಅಸಹಕರಿಸಿದಂತಾಯಿತೆಂಬ ಇವರ ಅಭಿಪ್ರಾಯ ನನಗೆ ವಿಚಿತ್ರವಾಗಿ ಕಂಡಿತು. "ಯೂನಿಯನ್ನು ದೊಡ್ಡಸಂಸ್ಥೆ. ನಮ್ಮಂಥ ಕಿರಿಯ ಚಿಲ್ಲರೆ ಸಂಸ್ಥೆಗಳು ಅದರೊಂದಿಗೆ ಅಸಹಕಾರ ಹೂಡುವುದೆಂದರೇನು? ಯೂನಿಯನ್ನಿಗಿರುವ ಅನುಕೂಲಗಳು ನಮಗೂ ಇದ್ದಿದ್ದರೆ ಆಗ ನಾವೂ ಅಸಹಕರಿಸಬಹುದಾಗಿತ್ತೋ ಏನೋ!" ಎಂದೆ. "Don't try to teach me! It is my profession!" ಎಂದುಬಿಟ್ಟರು. ಸಿ. ಕೆ. ವಿ. ಅವರ ಉಪನ್ಯಾಸ ಗಣಿತಶಾಸ್ತ್ರಭವನದಲ್ಲಿ ನಡೆಯಬಹುದೆಂದು ಅನುಮತಿಯನ್ನು ಕೊಟ್ಟರು. ಈ ಕಾರ್ಯಕ್ರಮವನ್ನು ನಾವು ಬಹಿರಂಗಪಡಿಸಿ ನಾಲ್ಕೈದು ದಿನಗಳಾದ ತರುವಾಯ ಯೂನಿಯನ್ನಿನವರು ಅದೇದಿನಕ್ಕೆ ಜೋಡಿ ಬೀಳುವಂತೆ ಇನ್ನೊಂದು ಕಾರ್ಯಕ್ರಮವನ್ನೇರ್ಪಡಿಸಿ ಜಾಹೀರಾತು ಮಾಡಿದರು. ಯೂನಿಯನ್ನಿನ ಕಾರ್ಯದರ್ಶಿಯನ್ನು ಕಂಡು ಕೇಳಿದೆ. ಆತ "ಸಮಯ ಕೂಡಿಬಂದಾಗ ನಾವು ಕಾರ್ಯ ನಡಸಿಬಿಡಬೇಕು. ಈ ಕಾರ್ಯಕ್ರಮವನ್ನು ನಾವು ಮುಂದೆ ಹಾಕುವುದಕ್ಕಾಗುವುದಿಲ್ಲ. ನಮಗೂ ಗಣಿತಶಾಸ್ತ್ರಭವನವೇ ಬೇಕು"

ಎಂದು ಮೊಂಡುತನದಿಂದ ಅಟ್ಟದ ಮೇಲೇರಿ ಕೂತ.

"ಗಣಿತಶಾಸ್ತ್ರಭವನವನ್ನು ಆ ದಿನ ನಮಗೆ ಕೊಟ್ಟಿದ್ದಾರೆ" ಎಂದೆ.

"ಹಾಗಾದರೆ ಪ್ರಿನ್ಸಿಪಾಲರನ್ನು ಕಂಡಿದ್ದೆಯಾ?" ಎಂದ.

"ನಾನು ಕಂಡದ್ದಾಯಿತು. ನೀನು ಬೇಕಾದರೆ ಹೋಗಿ ಕಂಡುಕೊ!"

ಕಾರ್ಯದರ್ಶಿ ಅಟ್ಟದಿಂದ ಎರಡು ಮೆಟ್ಟಲು ಕೆಳಗಿಳಿದು "ನಿಮ್ಮ ಕಾರ್ಯಕ್ರಮವನ್ನು ಮುಂದಿನ ವಾರಕ್ಕೆ ಹಾಕಿಕೊ" ಎಂದ. "ನಮ್ಮ ಕಾರ್ಯಕ್ರಮವನ್ನು ಬಹಿರಂಗಪಡಿಸಿ ಐದು ದಿನವಾಯಿತು. ಇದು ನಿನಗೂ ತಿಳಿದಿದೆ. ತಿಳಿದೂ ತಿಳಿದೂ ಪೈಪೋಟಿ ಮಾಡುತ್ತಿದ್ದೀಯ. ನಮ್ಮ ಕಾರ್ಯಕ್ರಮವನ್ನು ಮುಂದೆ ಹಾಕುವುದು ಸಾಧ್ಯವೇ ಇಲ್ಲ." ಎಂದುಬಿಟ್ಟೆ.

ಇಬ್ಬರಲ್ಲಿ ಯಾರೂ ಜಗ್ಗಲಿಲ್ಲ. ಹುಡುಗರು ಬಾರದೆ ಹೋದರೆ ಹೊರಗಿನವರು ಬರುತ್ತಾರೆಂಬ ಧೈರ್ಯ ನನಗಿತ್ತು.

ಆ ದಿನ ಸಂಜೆ ಗಣಿತಶಾಸ್ತ್ರಭವನದಲ್ಲಿ ಸಿ. ಕೆ. ವಿ. ಅವರ ಭಾಷಣ,—ನಮ್ಮ ಸಂಘದ ಕಾರ್ಯಕ್ರಮ; ಭೌತಶಾಸ್ತ್ರಭವನದಲ್ಲಿ 'ಡಿಬೇಟ್'—ಯೂನಿಯನ್ನಿನ ಕಾರ್ಯಕ್ರಮ. ಡಿಬೇಟಿನಲ್ಲಿ ಬೆಂಗಳೂರು ಲಾಯರುಗಳು ನಾಲ್ವರು ಒಂದು ಪಕ್ಷವನ್ನೂ, ಕಾಲೇಜಿನ ಉಪಾಧ್ಯಾಯರು ನಾಲ್ವರು ಎದುರು ಪಕ್ಷವನ್ನೂ ವಹಿಸಿ ಮಾತನಾಡುವರೆಂದು ಪ್ರಕಟವಾಗಿತ್ತು; ಯೂನಿಯನ್ನಿನ ವಿದ್ಯಾರ್ಥಿ-ಅಧ್ಯಕ್ಷನೇ 'ಸ್ಪೀಕರ್', ಭೌತಶಾಸ್ತ್ರಭವನದಲ್ಲಿ ಈ ಹತ್ತು (ಯೂನಿಯನ್ನಿನ ಕಾರ್ಯದರ್ಶಿಯೂ ಸೇರಿ) ಜನರನ್ನು ಬಿಟ್ಟು ಯಾರೂ ಸೇರಲಿಲ್ಲ. ಬಂದವರೆಲ್ಲ ಗಣಿತಶಾಸ್ತ್ರಭವನದಲ್ಲಿ ನೆರೆದರು, ಸಿ. ಕೆ. ವಿ. ಅವರ ಭಾಷಣ ಎಂದಿನಂತೆಯೇ ಭರ್ಜರಿಯಾಗಿ ನಡೆಯಿತು. ಯೂನಿಯನ್ನಿನ ಕಾರ್ಯದರ್ಶಿಯೂ ಭಾಷಣಕ್ಕೆ ಬಂದು ಜೋಲುಮುಖ ಹಾಕಿಕೊಂಡು ಮೂಲೆಯೊಂದರಲ್ಲಿ ಕೂತಿದ್ದ.

ಈ ಪ್ರಸಂಗ ನಡೆದ ತರುವಾಯ ನನಗೂ ಯೂನಿಯನ್ನಿನ ಕಾರ್ಯನಿರ್ವಾಹಮಂಡಲಿಯ ಕೆಲವು ಸದಸ್ಯರಿಗೂ ಸ್ವಲ್ಪಕಾಲ ಮಾತು ನಿಂತುಹೋಯಿತು. ಇದರಿಂದ ಅವರಿಗಾಗಲಿ ನನಗಾಗಲಿ ನಷ್ಟವೇನೂ ಆಗಲಿಲ್ಲ. ಆದರೆ "ಸಂಘದ ಅಟ್ಟಹಾಸಕ್ಕೆ ಮಿತಿಯೇ ಇಲ್ಲ! ನಿರ್ವಾಹವಿಲ್ಲದ ಆಡಂಬರ!" ಎಂಬ ಕೊಂಕುಮಾತು ಒಂದೆರಡು ಕಡೆ ಹುಟ್ಟಿಕೊಂಡಿತು.

ಸಹಪಾಠಿಗಳ ಬಾಯಲ್ಲಿ ಈ ಮಾತು ಬಂದಿದ್ದಿದ್ದರೆ ನನಗೆ ಖೇದವಾಗುತ್ತಿರಲಿಲ್ಲ. ಇದನ್ನಾಡಿದವರು ಅಧ್ಯಾಪಕವರ್ಗಕ್ಕೆ ಸೇರಿದ್ದ ಕೆಲವರು, ಜವಾಬ್ದಾರಿಯುಳ್ಳ ಸ್ಥಾನದಲ್ಲಿದ್ದವರು, ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾಗಿರಬೇಕಾದವರು! ಇವರಿಗೂ ಕರ್ಣಾಟಕ ಸಂಘಕ್ಕೂ ಅದೇಕೋ ಋಣಾನುಬಂಧ ಸರಿಯಾಗಿರಲಿಲ್ಲ. ಸಂಘದ ಕೆಲಸಕಾರ್ಯಗಳನ್ನು ಆಕ್ಷೇಪಣೆಮಾಡುವುದು, 'ಅದೇನಂತೆ ಮಹಾ!' ಎನ್ನುವುದು, ಇಲ್ಲವೆ ಅಲ್ಲಗಳೆಯುವುದು, ಇಲ್ಲವೆ ಗೇಲಿ ಮಾಡುವುದು ಇವರ ವಾಡಿಕೆಯಾಗಿತ್ತು. ಒಂದೆರಡು ಸಂದರ್ಭಗಳಲ್ಲಿ ಸಂಘದ ಕಾರ್ಯಗಳನ್ನು ಎದುರಿಸುವಂತೆ ಕೆಲವು ಹುಡುಗರನ್ನು ಎತ್ತಿಕಟ್ಟುವುದಕ್ಕೆ ಪ್ರಯತ್ನಿಸಿ ವಿಫಲರಾಗಿದ್ದರು. ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದರಲ್ಲಿ ನಯವನ್ನಾಗಲಿ ಹಿಡಿತವನ್ನಾಗಲಿ ತೋರಿಸುತ್ತಿದ್ದವರಲ್ಲ. ಇವರ ಪಾಠ ಸಮಯಗಳಲ್ಲಿ ನಾನು ವಿದ್ಯಾರ್ಥಿಯಾಗಿ ಕುಳಿತಿದ್ದಾಗ ಕೂಡ ಇವರ ಗೇಲಿಗೂ ತಾತ್ಸಾರಕ್ಕೂ ಪಶುವಾಗುತ್ತಿದ್ದೆ. ಇದಕ್ಕೆ ಕಾರಣವನ್ನು ಬಹುದೂರ ಹುಡುಕಿಕೊಂಡು ಹೋಗಬೇಕಾಗಿರಲಿಲ್ಲ. ತಮಗೆ ಸಕಲ ಸೌಕರ್ಯವಿದ್ದೂ ಮಾಡಲಾಗದಿದ್ದ ಕೆಲಸಗಳನ್ನು ಏನೂ ಇಲ್ಲದ ಕರ್ಣಾಟಕ ಸಂಘ ಸರಾಗವಾಗಿ ನಡಸಿಕೊಂಡು ಹೋಗುತ್ತಿದೆಯಲ್ಲ ಎಂಬ ಹೊಟ್ಟೆಕಿಚ್ಚು ಇವರನ್ನು ದಹಿಸುತ್ತಿತ್ತು.

ಭರತವಾಕ್ಯ

ಯೂನಿವರ್ಸಿಟಿ ಯೂನಿಯನ್ನಿಗಿದ್ದ ದ್ರವ್ಯಾನುಕೂಲವಾಗಲಿ ಸಿಬ್ಬಂದಿಯಾಗಲಿ ಅಧಿಕೃತ ಆಧಾರವಾಗಲಿ ಸೆಂಟ್ರಲ್ ಕಾಲೇಜಿನ ಮತ್ತಾವ ಸಂಘಕ್ಕೂ ಇರಲಿಲ್ಲವೆಂಬುದು ನಿರ್ವಿವಾದವಾದದ್ದು. ಸಯನ್ಸ್ ಸಂಘಗಳಿಗೆ ಆಯಾ ಇಲಾಖೆಗಳ ನಿವಾಸಗಳೂ, ನೆಲೆಯೂ, ಡವಾಲಿ ತೊಟ್ಟ ಕೆಳ ಸಿಬ್ಬಂದಿಯೂ ಸಹಾಯವಾಗಿದ್ದವು. ನಾನು ಕಂಡ ಕರ್ಣಾಟಕ ಸಂಘಕ್ಕೆ ಇಂಥದಾವುದೂ ಇಲ್ಲ. ಸಯನ್ಸ್ ಸಂಘಗಳವರು ತಮ್ಮ ಕಾರ್ಯಕಲಾಪಗಳನ್ನು ತಮ್ಮ ತಮ್ಮ ಕಟ್ಟಡಗಳಲ್ಲಿಯೇ ನಡಸಿಕೊಳ್ಳಲು ಸೌಕರ್ಯವಿತ್ತು; ಕರ್ಣಾಟಕ ಸಂಘವಾದರೋ ಗಣಿತಶಾಸ್ತ್ರಭವನವನ್ನೋ ಭೌತಶಾಸ್ತ್ರಭವನವನ್ನೋ ಮೊರೆಹೊಗಬೇಕಾಗಿತ್ತು. ಸಂಘದ ಹೊರಗು ಒಳಗುಗಳನ್ನು ಆಗಲೇ ಪರಿಚಯ ಮಾಡಿಸಿದ್ದೇನೆ. ಇನ್ನು ವರಮಾನದ ಬಾಬ್ತು—ಯೂನಿಯನ್ನಿಗೂ ಸಯನ್ಸ್ ಸಂಘಗಳಿಗೂ ಸದಸ್ಯರಿಂದ ಪ್ರತಿವರ್ಷವೂ ತಪ್ಪದೆ ಚಂದಾ ವಸೂಲಾಗುತ್ತಿತ್ತು. ಕರ್ಣಾಟಕ ಸಂಘಕ್ಕೆ ವಿದ್ಯಾರ್ಥಿಗಳೆಲ್ಲರೂ ಪುಕ್ಕಟೆ ಸದಸ್ಯರುಗಳೇ. ಯಾರಿಂದಲೂ ಸಂಘ ಒಂದು ಕಾಸನ್ನೂ ಚಂದಾವಾಗಿ 'ವಸೂಲು' ಮಾಡಿದ್ದಿಲ್ಲ. ಎ.ಆರ್.ಕೃ.ಗಳ 'ರಕ್ಷೆಯ ಬಲ'ದಿಂದ, ಅವರ ಮತ್ತು ಇತರ ಅಧ್ಯಕ್ಷ-ಉಪಾಧ್ಯಕ್ಷರ ನಿಷ್ಕಾಮಕರ್ಮದ ಫಲವಾಗಿ ಕೂಡಿಬಂದಿದ್ದ ದತ್ತಿಯ ಸಹಾಯದಿಂದ ಸಂಘದ ಕಾರ್ಯಕ್ರಮಗಳು ಸುಗಮವಾಗಿ ನಡೆದುಕೊಂಡು ಬರುತ್ತಿದ್ದವು. ಇಷ್ಟೇ ಅಲ್ಲ, ಪ್ರತಿವರ್ಷವೂ ಐವತ್ತು ರೂಪಾಯಿಗಳಷ್ಟು ಸಹಾಯವೇತನವನ್ನು ವಿದ್ಯಾರ್ಥಿಗಳಿಗೆ ಕೊಟ್ಟುಕೊಂಡು ಬರುತ್ತಿತ್ತು. 'ವನಸುಮ' ಭಾವಗೀತವನ್ನು ಸಂಘ ತನ್ನ ಜೀವದುಸಿರನ್ನಾಗಿಟ್ಟುಕೊಂಡು 'ತಾನೆಲೆಯ ಪಿಂತಿರ್ದು ದೀನತೆಯ ತೋರಿ ಅಭಿಮಾನವನು ತೊರೆದು' ಬಾಳಿಕೊಂಡು ಬಂದಿದೆ. ಇಂಥ ಸಂಘಕ್ಕೆ ಅಟ್ಟಹಾಸ ಆಡಂಬರಗಳೇಕೆ? ಸಂಘದ ಕಾರ್ಯಕರ್ತ ಮಂಡಲಿಗೆ—ಮುಖ್ಯವಾಗಿ ವಿದ್ಯಾರ್ಥಿದೆಸೆಯಲ್ಲಿದ್ದವರಿಗೆ—ಅದರ ವಿಷಯದಲ್ಲಿ ಹೆಮ್ಮೆಯೂ ಸಂತೋಷವೂ ಸ್ವಾಭಾವಿಕವಾಗಿ ಉಂಟಾ

ಗುತ್ತಿದ್ದದ್ದೇನೋ ನಿಜವೆ; ನನ್ನಂಥ ಬಿರುಕುಬಾಯಿಗಳು ಹುಮ್ಮಸ್ಸಿನಿಂದ ಸ್ವಲ್ಪ ಬಡಾಯಿಕೊಚ್ಚಿರಬಹುದು. ಆದರೆ ಸಂತೆಯಲ್ಲಿ ಕೊಂಬು ಕಹಳೆಗಳನ್ನು ಊದುತ್ತಿರಲಿಲ್ಲ, ಜಗಳಕ್ಕೆ ಕಾಲುಕೆರೆಯುತ್ತಿರಲಿಲ್ಲ.

ಕೆಲವು ವರ್ಷಗಳಿಂದ ಈಚೆಗೆ ಸಂಘಕ್ಕೆ ಒಂದು ವಿಧದಲ್ಲಿ ಸ್ವಲ್ಪ ಉತ್ತಮ ದೆಸೆ ಬಂದಿರುವಂತೆ ಭಾಸವಾಗುತ್ತದೆ. ಸಂಘದ ಆತ್ಮ ಪರಕಾಯಪ್ರವೇಶ ಮಾಡಿದೆ. ಭದ್ರವಾದ ಗೋಡೆ, ತಾರಸಿ ಛಾವಣಿ, ಚದುರದ ಇಟ್ಟಿಗೆ ಹಾಸಿ ಸಿಮೆಂಟು ಸವರಿದ ನೆಲ, ಗಾಜಿನ ಕದವುಳ್ಳ ಕಿಟಕಿಗಳು, ಭದ್ರವಾದ ಕಟ್ಟಡ. ಹಿಂದಿನ ದೇಹಕ್ಕಿದ್ದಂತೆಯೇ ಈ ಕಟ್ಟಡದ ಹೆಬ್ಬಾಗಿಲು ಕಿಟಕಿಗಳೂ ಪಶ್ಚಿಮ ಮುಖವಾಗಿಯೇ ಇರುವುವಾದರೂ, ಈ ದಿಕ್ಕಿಗೆ (ಒಂದಾನೊಂದು ಕಾಲದಲ್ಲಿ ಸುಂದರವಾಗಿದ್ದ) ಒಂದು ತೋಟ ಇನ್ನೂ ಕುಟುಕು ಜೀವವಿಟ್ಟುಕೊಂಡಿದೆ. ನನಗೆ ಜ್ಞಾಪಕವಿರುವಂತೆ ಇದರಲ್ಲಿ ದೋಹದಶಾಸ್ತ್ರದಲ್ಲಿ ಉಕ್ತವಾಗಿರುವ ಮರಗಳಲ್ಲೆರಡು (ಬಕುಳ, ಕರ್ಣಿಕಾರ), ಗಂಧದ ಗುಡಿ ಮೈಸೂರಿನ ಚಿನ್ಹೆಯಾದ ಶ್ರೀಗಂಧಮರವೂ, ಪುಷ್ಪಸೃಷ್ಟಿಯ ರತ್ನಗಳಲ್ಲೊಂದಾದ ಸೀತಾಳಿಗಳೂ, ಸಸ್ಯ ಶಾಸ್ತ್ರ ದೃಷ್ಟಿಯಿಂದ ಅಪರೂಪವೂ ಅತಿಶಯವೂ ಆದ ಅನೇಕ ಬಗೆಯ ಗಿಡ ಬಳ್ಳಿಗಳೂ ಅಲ್ಲಿ ಬೆಳೆಯುತ್ತಿದ್ದವು. ಈ ತೋಟವನ್ನು ಪುನರುದ್ಧಾರಮಾಡಿದರೆ ಚೆನ್ನಾಗಿರುತ್ತದೆಯೆಂದು ನನಗೆ ತೋರುತ್ತದೆ. ಹೂ, ಚಿಗುರು, ಗಿಡ, ಮರ, ಬಳ್ಳಿಗಳ ವರ್ಣನೆಯಿಲ್ಲದ ಕನ್ನಡ ಕಾವ್ಯವಿಲ್ಲ, ಹೂಗಳನ್ನು ಪ್ರೀತಿಸದ ಕನ್ನಡ ಕವಿಯಿಲ್ಲ. ಸಸ್ಯಶಾಸ್ತ್ರಶಾಖೆಯ ಅಧ್ಯಾಪಕವರ್ಗದ ಶಾಸ್ತ್ರಜ್ಞಾನಸಹಾಯ ದಿಂದಲೂ, ವಿಶ್ವವಿದ್ಯಾಲಯದ ಧನಸಹಾಯದಿಂದಲೂ, ವಿದ್ಯಾರ್ಥಿಗಳ ಒಲವು ಉತ್ಸಾಹಗಳ ಸಹಾಯದಿಂದಲೂ, ಕನ್ನಡ ಕವಿಗಳು ಹಾಡಿ ನಲಿದು ಚಿರವಾಗಿ ನಿಲ್ಲಿಸಿರುವ ಗಿಡಮರಬಳ್ಳಿಗಳನ್ನು ತಂದು ಈ ತೋಟದಲ್ಲಿ ಬೆಳೆಯಿಸುವುದು ಮನಸ್ಸು ಮಾಡಿದರೆ ಸಾಧ್ಯವಾಗದ ಕೆಲಸವೇನೂ ಅಲ್ಲ. ಸಂಘದ ಕಟ್ಟಡದೊಳಗೆ ಸಾಹಿತ್ಯಪುಷ್ಪಗಳು ಅರಳುತ್ತಿರುವಂತೆಯೇ ಈ ತೋಟದಲ್ಲಿ "ಕಾವೇರಿಯಿಂದ ಮಾಗೋದಾವರಿವರಮ್" ಇರುವ ಕನ್ನಡ ನಾಡಿನ ಅಪರೂಪ ಪುಷ್ಪಸಾಹಿತ್ಯ ಬೆಳೆದು ತನ್ನ ಸೌರಭವನ್ನು ದಿಕ್ಕುದಿಕ್ಕಿಗೂ ಕೊಂಡೊಯ್ಯಲಿ!

ಈಚೀಚೆಗೆ "ಕಾಲಗುಣಕ್ಕೆ ತಕ್ಕಂತೆ ಕಾರ್ಯಾವಳಿಯಲ್ಲಿ ಮಾರ್ಪಾಟು ಗಳಾಗಿ . . . ಸಂಘ ಪುಸ್ತಕಪ್ರಕಟನೆಗೆ ತನ್ನೆಲ್ಲ ಶಕ್ತಿಗಳನ್ನೂ ತಿರುವಿಕೊಂಡು"

ಇರುವುದಾದರೂ ಅದರ ಜೀವದುಸಿರು ಯಾವ ವಿಧದಲ್ಲಿಯೂ ಮಾರ್ಪಾಟು ಹೊಂದಿಲ್ಲ. ಹೀಗೆಯೇ ನೂರುವರ್ಷ, ಇನ್ನೂ ನೂರುವರ್ಷ, ಮತ್ತೂ ನೂರು ವರ್ಷ 'ವಿಪುಲಾಶ್ರಯವನೀವ ಸುಫಲಸುಮಭರಿತ ಪಾದಪದಂತೆ' ಬೃಹದಶ್ವತ್ಥ ವಾಗಿ ಬೆಳೆಯಲಿ.

ಗೋಪುರ

(ಅಧ್ಯಕ್ಷರು–ಉಪಾಧ್ಯಕ್ಷರು)

ಬೆ. ವೆಂ.
ಟಿ. ಎಸ್. ವಿ.
ಬಿ. ಎಂ. ಶ್ರೀ.
ಎ. ಆರ್. ಕೃ.
ವಿ. ಸೀ.



ಬೆ. ವೆಂ.

ಬೆ. ವೆಂ.

೧

ಕರ್ಣಾಟಕ ಸಾಹಿತ್ಯ ಪರಿಷತ್ತಿನ ಕಚೇರಿ ಆಗ ಶಂಕರಪುರದ ನಾಲ್ಕನೇ ಬೀದಿಯಲ್ಲಿತ್ತು. ಅದು ನಮ್ಮ ಮನೆಯಿದ್ದ ಐದನೇ ಬೀದಿಯ ಹಿಂಬದಿ. ಬೆಳ್ಳಾವೆ ವೆಂಕಟನಾರಾಯಣಪ್ಪನವರು ದಿನಂಪ್ರತಿ ಬೆಳಗ್ಗೆ ಏಳೂವರೆ ಗಂಟೆಗೆ ಸರಿಯಾಗಿ ನಮ್ಮ ಮನೆಯ ಮೂಲೆಯನ್ನು ಹಾದು ಪರಿಷತ್ತಿನ ಕಚೇರಿಗೆ ಹೋಗುವುದು ವಾಡಿಕೆ. ಏಳೂವರೆ ಎಂದರೆ ಏಳೂವರೆಯೇ; ಆಕಡೆ ಈಕಡೆ ವ್ಯತ್ಯಾಸ ಎರಡು ನಿಮಿಷಗಳಿಗೆ ಹೆಚ್ಚಾಗಿರದು. ಅವರು ಕಚೇರಿ ಮುಗಿಸಿ ಕೊಂಡು ಮನೆಗೆ ಹಿಂತಿರುಗುವ ಕಾಲವೂ, ಸಂಜೆ ರಾತ್ರಿಗಳಲ್ಲಿ ಮನೆಯಿಂದ ಕಚೇರಿಗೂ ಕಚೇರಿಯಿಂದ ಮನೆಗೂ ಹೋಗುತ್ತಿದ್ದ ಸಮಯಗಳೂ ಹಾಗೆಯೇ ಖಚಿತವಾಗಿಬಿಟ್ಟಿದ್ದವು. ಈ ಕ್ಲುಪ್ತತೆಯನ್ನು ಕಂಡು ಬಹುಜನ ಬೆರಗಾ ಗಿದ್ದರು, ವೆಂಕಟನಾರಾಯಣಪ್ಪನವರ ಹೋಗುಬರುಗಳನ್ನೇ ವೇಳಾಮಾಪಕ ವಾಗಿ ಒದಗಿಸಿಕೊಳ್ಳುತ್ತಿದ್ದರು. ನಮ್ಮ ಮನೆಗೆ ಮೊಸರು ತಂದುಕೊಡುತ್ತಿದ್ದವ ನೊಬ್ಬ ಒಂದು ದಿನ ಹೊತ್ತಾಗಿ ಬಂದನೆಂಬ ಕಾರಣದಿಂದ ನನ್ನ ಸೋದರತ್ತೆ "ಏನಯ್ಯ, ಇಷ್ಟು ಹೊತ್ತೆ?" ಎಂದು ದಂಡಿಸಿದ್ದಕ್ಕೆ ಅವನು "ದಿನಕ್ಕಿಂತ ಬ್ಯಾಗನೇ ಬಂದಿವ್ನಿ; ಆ ಉದ್ದನೆ ಅಯ್ಯ ಇನ್ನೂ ಈಗಂಟೇ ಆದುಓಗೇ ಇಲ್ಲ. ಇನ್ನೂ ಬಸವಂಗುಡಿ ಚೌಕದಗಂಟೇ ಇದ್ರು" ಎಂದು ಸಮಾಧಾನ ನೀಡಿದ. ಇದು ನಿಜವೇ ಆಗಿತ್ತು. ನನ್ನ ತಾತನವರಂತೂ ಗಡಿಯಾರವನ್ನೇ ನೋಡು ತ್ತಿರಲಿಲ್ಲ. ಹೊತ್ತು ಬೇಕಾದಾಗ "ವೆಂಕಟನಾರಾಯಣಪ್ಪನವರು ಹೋದ ರೇನೋ? . . . ಬಂದರೇನೋ?" ಎಂದೇ ಕೇಳುತ್ತಿದ್ದರು.

ನನ್ನ ತಾತನವರಿಗೂ ವೆಂಕಟನಾರಾಯಣಪ್ಪನವರಿಗೂ ಒಂದು ಬಗೆಯ ಸ್ನೇಹ ಬೆಳೆದುಬಂದಿತ್ತು. ಇದು ಬೆಂಗಳೂರಿನಲ್ಲಿಯೇ ಬೆಳೆದದ್ದೋ ಅಥವಾ ಇನ್ನೂ ಹಿಂದಿನದೋ ನನಗೆ ತಿಳಿಯದು. ನನ್ನ ತಾತಂದಿರ ದಿನಚರಿಯಲ್ಲಿ

ಮೊದಲನೆಯ ಕೆಲಸವೆಂದರೆ--ದೇವರ ಪೂಜೆಗಾಗಿ ಹೂ ತುಲಸಿ ಸಂಗ್ರಹಣ; ನಮ್ಮ ಮನೆಯ ತೋಟದಿಂದಲೂ ಅಕ್ಕಪಕ್ಕದ ಮನೆಗಳಲ್ಲಿದ್ದ ಗಿಡ ಮರಗಳಿಂದಲೂ ಹೂ ಆರಿಸಿ, ವೆಂಕಟನಾರಾಯಣಪ್ಪನವರು ಪರಿಷತ್ತಿಗೆ ಹೋಗುವ ದಾರಿಯನ್ನೇ ನಿರೀಕ್ಷಿಸಿಕೊಂಡು ಮನೆಯ ಹೊರಬಾಗಿಲಿನಲ್ಲಿಯೇ ನಿಂತಿರುವುದು; ಅವರು ಬರುತ್ತಲೇ ಅವರಿಗೆ ನಮಸ್ಕಾರಮಾಡಿ, ಕೈಲಿದ್ದ ಬುಟ್ಟಿಯಿಂದ ಒಂದೆರಡು ಗುಲಾಬಿಯನ್ನೋ ಮಲ್ಲಿಗೆಯನ್ನೋ, ಅಂದಿನ ಸಂಗ್ರಹದಲ್ಲಿದ್ದ ಬೇರಾವುದಾದರೂ ಚೆಲುವಾದ ಸುವಾಸನೆಯಾದ ಅಲರನ್ನೋ ತೆಗೆದು, ಎರಡು ಕೈಗಳಿಂದಲೂ ಅರ್ಪಿಸುವುದು; ಒಂದು ಐದು-ಹತ್ತು ನಿಮಿಷ ಮಾತನಾಡಿ ಬೀಳ್ಕೊಡುವುದು.



ವೆಂಕಟನಾರಾಯಣಪ್ಪನವರನ್ನು ನೋಡುವುದರಲ್ಲಿ ನನಗೆ ಪ್ರತ್ಯೇಕವಾದ ಆಸೆ. ಅವರ ಉದ್ದವಾದ ನಿಲುವು, ಆಜಾನುದೀರ್ಘವಾದ ಬಾಹುಗಳು, ಸ್ವಚ್ಛವಾದ ಕಚ್ಚೆಪಂಚೆ, ನುರುನುರುಪಾದ ಕೋಟು, ಜಾಗರೂಕತೆಯಿಂದ ಪದರಪದರವಾಗಿ ನಿರಿಗೆ ಮಡಿಸಿ ಇಸ್ತ್ರಿಮಾಡಿದ್ದ ಉತ್ತರೀಯ, ಶುಭ್ರವಾದ ಬಿಳಿಯ ರುಮಾಲು, ಬಿಳಿಯ ಕವಚ ಹೊದಸಿದ ಛತ್ರಿ, ಹಣೆಯಲ್ಲಿ ಲಘುವಾದ ವಿಭೂತಿರೇಖೆಗಳು, ಗಳಿಗೆಗಳಿಗೆಗೂ ಕೋಟುಜೇಬಿನಲ್ಲಿದ್ದ ಗಡಿಯಾರವನ್ನು ಹೊರತೆಗೆದು ಗಂಟೆ ನೋಡಿಕೊಳ್ಳುವ ರೀತಿ, ಇವು ನನಗೆ ಬಹು ಮೆಚ್ಚಿಕೆಯಾಗಿದ್ದವು; ಒಂದು ಬಗೆಯ ಭಯವನ್ನೂ ಗೌರವವನ್ನೂ ಹುಟ್ಟಿಸಿದ್ದವು. ಇದಕ್ಕಿಂತಲೂ ಮಿಗಿಲಾಗಿ ನನ್ನನ್ನು ಆಕರ್ಷಿಸುತ್ತಿದ್ದದ್ದು—ನನ್ನ ತಾತನವರಿಗೂ ಅವರಿಗೂ ನಡೆಯುತ್ತಿದ್ದ ಸಂಭಾಷಣೆ.

"ಏನು, ಯಜಮಾನರು? ದೇಹಸ್ಥಿತಿ ಹೇಗಿದೆ?" ಎಂದು ವೆಂಕಟ

ನಾರಾಯಣಪ್ಪನವರು ಸಾಮಾನ್ಯವಾಗಿ ಕೇಳುತ್ತಿದ್ದರು. ಇದಕ್ಕೆ ಉತ್ತರವಾಗಿ ನನ್ನ ತಾತನವರು ಹೇಳುತ್ತಿದ್ದ ಮಾದರಿಗಳಲ್ಲಿ ಕೆಲವು:—

೧. "ನೋಡಿ ಸ್ವಾಮಿ, ನಾನು ಇನ್ನೂ ಬದುಕಿದ್ದೇನೆ ಎನ್ನುವ ಪರಿಜ್ಞಾನ ನನ್ನ ಮಕ್ಕಳಿಗಿಲ್ಲ. ನಿನ್ನೆ ಮೂವರು ಮಕ್ಕಳೂ ಒಟ್ಟಿಗೆ ಮುಖ ಕ್ಷೌರ ಮಾಡಿಸಿಕೊಂಡಿದ್ದಾರೆ!"

೨. "ಈ ಮನೆಯಲ್ಲಿ ನಾನು ಘುಪ್ಪಿ.* ಕಸಪೊರಕೆಗಿಂತಲೂ ಕಡೆಯಾಗಿದ್ದೇನೆ. ನಿನ್ನೆ ಮೂವರೂ ಕಾಮಣ್ಣನಂತೆ ದಿರಿಸು ಹಾಕಿಕೊಂಡು, ನನ್ನೆದುರಿಗೇ, ಒಂದು ಮಾತನ್ನೂ ಹೇಳದೆ, ತಮ್ಮಿಷ್ಟಕ್ಕೆ ತಾವು, ಒಬ್ಬೊಬ್ಬರು ಒಂದೊಂದು ಕಡೆ ಹೊರಟುಹೋದರು. ಅದೆಲ್ಲಿ ಹೋಗಿದ್ದರೋ, ರಾತ್ರಿ ಅದೆಷ್ಟು ಹೊತ್ತಿಗೆ ಮನೆಗೆ ಬಂದರೋ ಆ ಬ್ರಹ್ಮನಿಗೇ ಗೊತ್ತು!"

೩. "ನನಗಿವೆಯಲ್ಲ, ಮೂರು ಪುತ್ರರತ್ನಗಳು—ರತ್ನಗಳು ಸ್ವಾಮೀ, ರತ್ನಗಳು!—ನನ್ನನ್ನು ಕೋಪಿಷ್ಠ ಎನ್ನುತ್ತಾರೆ! ಹೇಗಿದೆ ನೋಡಿ?"

೪. "ಅಲ್ಲ ಸ್ವಾಮೀ, ಕೈಹಿಡಿದವಳೂ ಮಕ್ಕಳ ಕಡೆ ಸೇರಿಕೊಂಡು ಬಿಡುವುದೆ? ಇದಾವ ಧರ್ಮಶಾಸ್ತ್ರ ಸೂತ್ರ!"

೫. "ನನ್ನ ಮೊಮ್ಮಗ—ಇದುವರೆಗೂ ನೆಟ್ಟಗಿದ್ದವನು—ಕ್ರಾಪಂತೆ ಕ್ರಾಪು, ಮಾಡಿಸಿಕೊಂಡು ಬಂದಿದ್ದಾನೆ! ಇಲಿ ತಲೆಗೂದಲನ್ನು ಕಚ್ಚಿಹಾಕಿದ ಹಾಗಿದೆ, ಅವನ ಕ್ರಾಪು! ಅದೇನು ಹುಡುಗರೋ, ಅದೇನು ಕಾಲ ಬಂತೋ! ಇದನ್ನೆಲ್ಲ ನನ್ನ ಕಣ್ಣಿನಿಂದ ಕಾಣಬೇಕಾಗಿದೆ!"

೬. "ನನ್ನ ಮೊದಲನೇ ಮಗನಿಗೆ ಪಂಚೆಯನ್ನು ಕಚ್ಚೆ ಹಾಕಿಕೊಂಡು ಉಟ್ಟುಕೊ ಎಂದು ತಾವಾದರೂ ಹೇಳಬಾರದೆ? ಮೂರು ಹೊತ್ತೂ ದಟ್ಟಿಯಲ್ಲೇ ಊರೆಲ್ಲ ತಿರುಗಾಡುತ್ತಾನೆ. ನನಗೆ ತರ್ಪಣ ಕೊಡುವಾಗಲೂ ದಟ್ಟಿಯಲ್ಲಿಯೇ ಕೊಟ್ಟುಬಿಡುತ್ತಾನೋ ಏನೋ!"

ವೆಂಕಟನಾರಾಯಣಪ್ಪನವರು ಇದನ್ನೆಲ್ಲ ಒಂದು ಬಗೆಯ ತಿಳಿನಗೆಯೊಂದಿಗೆ ಕೇಳಿ, ತಮ್ಮ ಮನೆಯಲ್ಲೂ ಇಂಥ ಸಂದರ್ಭಗಳು ಹೇರಳವಾಗಿವೆಯೆಂದು ಒಂದೆರಡು ಉದಾಹರಣೆಗಳನ್ನು ಕೊಟ್ಟು, ತಾವಿಬ್ಬರೂ ನಿಯತಕಾಲ

---

*ಈ ಪ್ರಯೋಗದ ಮೂಲ ನನಗೆ ಗೊತ್ತಿಲ್ಲ.

ವನ್ನು ಮೀರಿ ಬದುಕಿರುವರೆಂದೋ, ಕಾಲ ಕೆಟ್ಟುಹೋಯಿತೆಂದೋ, ತಮಗೂ ಸಮಾಧಾನ ಹೇಳಿಕೊಂಡು ತಾತನವರನ್ನೂ ಸಮಾಧಾನಪಡಿಸುತ್ತಿದ್ದರು.

೨

ವೆಂಕಟನಾರಾಯಣಪ್ಪನವರಿಗೆ ವಿಜ್ಞಾನಶಾಸ್ತ್ರದ ಪರಿಚಯ ಬಹು ಚೆನ್ನಾಗಿತ್ತು. ಎಷ್ಟಾದರೂ ಭೌತಶಾಸ್ತ್ರ ಪ್ರಾಧ್ಯಾಪಕರಾಗಿದ್ದವರು. ಅವರು ಪಾಠ ಹೇಳುತ್ತಿದ್ದ ವಿಜ್ಞಾನಭಾಗದಲ್ಲಿ ಮಾತ್ರವಲ್ಲ, ಜೀವವಿಜ್ಞಾನ, ರಸಾಯನಶಾಸ್ತ್ರಗಳಲ್ಲಿಯೂ ಅವರಿಗೆ ಆಳವಾದ ಪಾಂಡಿತ್ಯವಿತ್ತು. ಇವುಗಳ ಜತೆಗೆ ಆಯುರ್ವೇದವನ್ನೂ ವಿಜ್ಞಾನದೃಷ್ಟಿಯಿಂದ ಪರಿಷ್ಕರಿಸಿ ತಕ್ಕಮಟ್ಟಿಗೆ ಬಳಕೆಯಲ್ಲಿಟ್ಟುಕೊಂಡಿದ್ದರು. ನನ್ನ ತಾತನವರಿಗೆ ಇವರೇ ಅನೇಕ ಸಲ ವೈದ್ಯಸಲಹೆಗಳನ್ನು ಕೊಡುತ್ತಿದ್ದರು. ಇವರು ಕೊಡುತ್ತಿದ್ದ ಸಲಹೆಗಳೇನೋ ಶಾಸ್ತ್ರಸಮ್ಮತವಾದವುಗಳೇ ಆಗಿದ್ದುವಾದರೂ ನನ್ನ ತಾತನವರು ಅವನ್ನು ಕಾರ್ಯಗತವಾಗಿಸಿಕೊಳ್ಳುತ್ತಿದ್ದ ರೀತಿ ನಗುಪಾಡಾಗುತ್ತಿತ್ತು.

ಇಲ್ಲದ ಬೇನೆಗಳನ್ನು ಮನಸ್ಸಿನಲ್ಲಿ ಕಲ್ಪಿಸಿಕೊಂಡು ಅವುಗಳ ನಿವಾರಣಾರ್ಥವಾಗಿ ಔಷಧೋಪಚಾರಗಳನ್ನು ಹುಡುಕಿಕೊಂಡು ಹೋಗುವ ವ್ಯಾಧಿ ನನ್ನ ತಾತನವರಿಗಿತ್ತು. ಆ ಕಾಲದಲ್ಲಿ ಅವರು ಸಾಮಾನ್ಯವಾಗಿ ಕಾಯಿಲೆಗೀಡಾದವರಲ್ಲ; ವಯಸ್ಸಿಗನುಗುಣವಾದ ಆರೋಗ್ಯದಲ್ಲಿಯೇ ಇದ್ದರೆಂದು ನಮ್ಮೆಲ್ಲರ ಅಭಿಪ್ರಾಯ. ಆದರೆ ತಾತನವರ ಪ್ರಕಾರ ಕಫ ಮಲಬದ್ಧತೆಗಳು ದಿನಂಪ್ರತಿಯೂ ಅವರನ್ನು ಕಾಡಿಸುತ್ತಿದ್ದ ಬೇನೆಗಳು. ಇವುಗಳ ನಿವಾರಣೆಗಾಗಿ ಅವರು ಸಲಹೆ ಕೇಳದ ವೈದ್ಯರಿಲ್ಲ, ಸೇವಿಸದ ಔಷಧವಿಲ್ಲ. ಇಷ್ಟಾದರೂ "ಬೇನೆ ಗುಣವಾಗಲಿಲ್ಲ" ಎಂದು ತಾತನವರ ಹೇಳಿಕೆ.

ಯಥಾಪ್ರಕಾರ ಒಂದು ದಿನ ವೆಂಕಟನಾರಾಯಣಪ್ಪನವರು "ದೇಹಸ್ಥಿತಿ ಹೇಗಿದೆ?" ಎಂದು ವಿಚಾರಿಸಿದಾಗ ತಾತನವರು ಕಫದ ಪೇಚಾಟವನ್ನು ಹೇಳಿಕೊಂಡರು. ವೆಂಕಟನಾರಾಯಣಪ್ಪನವರು ಸ್ವಲ್ಪಹೊತ್ತು ಯೋಚಿಸಿ, "ನೋಡಿ, ಯಜಮಾನ್ರೆ, ಮನಸ್ಸಿನಲ್ಲಿ ಒಂದಿದೆ. ಅದನ್ನು ಹೇಳುವುದಕ್ಕೆ ಸ್ವಲ್ಪ ಸಂಕೋಚವಾಗುತ್ತದೆ" ಎಂದರು. ತಾತನವರು "ಏನು ದೇವ್ರು! ಒಂದು ಔಷಧ ಹೇಳುವುದಕ್ಕೆ ಸಂಕೋಚವೆ? ಒಂದು ಬಡಜೀವವನ್ನು ಉದ್ಧಾರ

ಮಾಡುವುದಕ್ಕೆ ಸಂಕೋಚವೆ? ಹೇಳಿ, ಅಮೇಧ್ಯವನ್ನು ತಿನ್ನಬೇಕಾದರೂ ತಿಂದುಬಿಡುತ್ತೇನೆ!" ಎಂದರು.

"ಅಯ್ಯಯ್ಯೊ! ಅಂಥದು ಒಂದೂ ಇಲ್ಲ, ಯಜಮಾನ್ರೆ! ಕಫ, ಗೂರಲು ರೋಗಿಗಳಿಗೆ ಸೀಮೆವೈದ್ಯದಲ್ಲಿ ಒಂದು ಬಗೆಯ ಒಣ ಎಲೆಗಳಿಂದ ಸುರುಟು ತಯಾರುಮಾಡಿ ಕೊಡುತ್ತಾರೆಂದು ಎಲ್ಲಿಯೋ ಓದಿದೆ. ಆ ಜಾತಿಯ ಗಿಡ ಇಲ್ಲೆಲ್ಲಾದರೂ ಸಿಕ್ಕಿದರೆ ನೋಡಬಹುದು. ಆದರೆ ಈ ವಯಸ್ಸಿನಲ್ಲಿ ನಿಮ್ಮ ನಮ್ಮಂಥ ಹಳೆಯ ಕಾಲದವರಿಗೆ ಏನನ್ನಿಸುತ್ತದೆಯೋ?" ಎಂದು ಇನ್ನೂ ಏನನ್ನೋ ಹೇಳುವುದರಲ್ಲಿದ್ದರು. ಅಷ್ಟರಲ್ಲಿಯೇ ತಾತನವರು ಹಿಗ್ಗಿಹೋದರು. ವೆಂಕಟನಾರಾಯಣಪ್ಪನವರಿಗೆ ನಡುಬೀದಿಯಲ್ಲಿಯೇ ಸಾಷ್ಟಾಂಗ ನಮಸ್ಕಾರ ಮಾಡಿ, "ನೀವೇ ಸಾಕ್ಷಾತ್ ಧನ್ವಂತರಿಯ ಅವತಾರ" ಎಂದು ಹೇಳುತ್ತ ಮೇಲೆದ್ದು ಬುಟ್ಟಿಯೊಳಗಿನಿಂದ ಬೊಗಸೆ ತುಂಬ ಒಂದಷ್ಟು ಮಲ್ಲಿಗೆ ಸಂಪಗೆ ಹೂಗಳನ್ನು ಕೊಟ್ಟರು.

ಮರುದಿನದಿಂದಲೇ ಆರಂಭವಾಯಿತು, ನನ್ನ ತಾತನವರ ಔಷಧ ಪ್ರಯೋಗ. ಬೆಳಗ್ಗೆ ೯ ಗಂಟೆವೇಳೆಗೆ ದೇವರಪೂಜೆಯನ್ನು ಮುಗಿಸಿ ತೀರ್ಥ ತೆಗೆದುಕೊಂಡಾದ ಬಳಿಕ ಮನೆಯ ಹಿಂಭಾಗದಲ್ಲಿದ್ದ ಒಗೆಯುವ ಬಂಡೆಯ ಮೇಲೆ ಕುಳಿತು ಒಂದು ಸುರುಟುಹೊತ್ತಿಸುತ್ತಿದ್ದರು. ಮೊದಲನೇ ದಿನ ಸುರುಟು



ಸೇವನೆ ಮುಗಿಸಿ ಹಾಗೆಯೇ ಅಡುಗೆ ಮನೆಯೊಳಕ್ಕೆ ಬಂದು ತಮ್ಮ ಹೆಂಡತಿ (ನನ್ನ ಅಜ್ಜಿ)ಯ ಹತ್ತಿರ ಏನೋ ಮಾತನಾಡಲಾರಂಭಿಸಿದರು. ಆಕೆ ಮೂಗನ್ನು ಸೆರಗಿನ ಕೊನೆಯಿಂದ ಗಟ್ಟಿಯಾಗಿ ಮುಚ್ಚಿಕೊಂಡು "ರಾಮ ರಾಮ! ಅದೇನೋ ಕೆಟ್ಟವಾಸನೆ! ಏನು ತಿಂದು ಬಂದಿರಿ?" ಎಂದು ಕೂಗಿಕೊಂಡರು. ತಾತನವರು "ಏನು ಮಾಡಿಟ್ಟದ್ದೆಯೆ? ತಿನ್ನುವುದಕ್ಕೆ

—ಅಂಥ ಕೆಟ್ಟವಾಸನೆ ಬರುವ ಪಂಡವನ್ನ? ಹೋಗೆ! ಕಫಕ್ಕೆ ಔಷಧ ಕುಡಿದು ಬಂದಿದ್ದೇನೆ. ಕೆಟ್ಟವಾಸನೆಯಂತೆ, ವಾಸನೆ! ಮೂಗಿಗೆ ಬಿರಟೆ ಹಾಕಿಕೊ!" ಎಂದು ಹೆಂಡತಿಯ ಬಾಯನ್ನು ಮುಚ್ಚಿಸಿಬಿಟ್ಟರು.

ತಾತನವರ ಮುಂದಿನ ದಿನದ ಪ್ರಯೋಗದಲ್ಲಿ ಇನ್ನೊಂದು ತಿದ್ದುಪಾಟು ಮೊದಲಾಯಿತು,—ಸುರುಟು ಸೇದಿದ ಬಳಿಕ, ಮನೆಯೊಳಕ್ಕೆ ಬರುವ ಮುನ್ನ, ಬಾಯಿ ಗಂಟಲುಗಳಲ್ಲಿ ನೀರನ್ನು ಮುಕ್ಕುಳಿಸಿ 'ಶುದ್ಧಿ'ಗೊಳಿಸುವ ಹವ್ಯಾಸ. ಬೀದಿಯಲ್ಲಿ ಹೋಗುವವರೆಲ್ಲ ಆಶ್ಚರ್ಯದಿಂದಲೂ ಭಯದಿಂದಲೂ ಗೋಡೆಯ ಮೇಲಿನಿಂದ ಇಣಿಕಿನೋಡುವಷ್ಟು ಮಟ್ಟಿಗೆ ನಡೆಯಿತು ಈ ಆರ್ಭಟ. ಕಿವಿ ಅಷ್ಟು ಚುರುಕಿಲ್ಲದಿದ್ದ ನನ್ನ ಅಜ್ಜಿ ಕೂಡ ಈ ಆರ್ಭಟವನ್ನು ಕೇಳಿ ದಿಗಿಲು ಪಟ್ಟು ಹೊರಕ್ಕೆ ಓಡಿಬಂದು ವಿಷಯವೇನೆಂದು ನೋಡಿದರು. ಸಿಡುಸಿಡು ಗುಟ್ಟುತ್ತ ಒಳಕ್ಕೆ ಬಂದು "ಇದೇನು ಬಂತು ಇವರಿಗೆ, ಈ ವಯಸ್ಸಿನಲ್ಲಿ? ಮುಖಕ್ಷೌರಮಾಡಿಸಿಕೊಂಡ ಮಕ್ಕಳನ್ನು ಕಂಡು ಉರಿದುರಿದು ಬೀಳುತ್ತಾರಲ್ಲ! ಈಗ ತಾವೇ ಮಾಡುತ್ತಿರುವ ಕೆಲಸ ಮಾತ್ರ ಬಹುಯೋಗ್ಯವಾದದ್ದೇನೋ! ಕಫಕ್ಕೆ ಔಷಧ ಕುಡಿದು ಬಂದೆನೆಂಬ ಸುಳ್ಳು ಬೇರೆ! ಅದಾವ ಪುಣ್ಯವಂತ ಗೃಹಸ್ಥ ಈ ವೈದ್ಯವನ್ನು ಹೇಳಿ ಹೋದನೋ, ಅವನಿಗಾದರೂ ಮಾನಮರ್ಯಾದೆ ಬೇಡವೆ?" ಎಂದೂ ಮುಂತಾದ್ದಾಗಿ ಜೋರಿನಿಂದಲೇ ಕೂಗಾಡುತ್ತಿದ್ದರು. ಆಗ ಒಳಕ್ಕೆ ಬಂದ ನನ್ನ ತಾತ ಕೊನೆಯ ವಾಕ್ಯವನ್ನು ಕೇಳಿಯೂ ಕೇಳದಂತೆ ಇದ್ದುಬಿಟ್ಟರು.

ಸುರುಟುಸಾಧನೆ ಸುಮಾರು ಒಂದುವಾರ ನಡೆಯಿತು. ಕಫಕಟ್ಟುವುದು ಕಡಮೆಯಾಗುತ್ತಿದೆಯೆಂದೇ ತಾತನವರು ಸಾರಿಕೊಂಡುಬಂದರು. ಅವರ ಹೆಂಡತಿ "ಶುದ್ಧ ಅಗಟವಿಗಟ, ತಲೆಕೆಳಗುತನ! ವಾಸಿಯಂತೆ ವಾಸಿ. ವಾಸಿಯಾಗುವುದಕ್ಕೆ ಇವರಿಗಾಗಿದ್ದದ್ದು ಏನಂತೆ? ಬರೀ ಚಟ!" ಎಂದು ಸಿಡುಕಾಡುತ್ತಿದ್ದರು. ಮನೆಯಲ್ಲಿದ್ದ ಇತರರಿಗೆ "ಸದ್ಯ, ಇವರಿಗಾಗಿ ವೈದ್ಯರನ್ನೂ ಔಷಧಿಗಳನ್ನೂ ಹುಡುಕಿಕೊಂಡು ಅಲೆದಾಡುವುದು ತಾತ್ಕಾಲಿಕವಾಗಿಯಾದರೂ ತಪ್ಪಿತಲ್ಲ! ಅವರ ಪಾಡಿಗೆ ಅವರು ಸುರುಟು ಸೇದಿಕೊಂಡಿರಲಿ" ಎಂಬ ಗೇಲಿ ಬೆರಕೆಯಾದ ಸಮಾಧಾನ. ನನ್ನ ಬಾಲ್ಯದೃಷ್ಟಿಯಿಂದ ನನಗೆ ಒಂದು ಬಗೆಯ ಆಸಕ್ತಿ, ಕುತೂಹಲ. ಆಗ ನಮ್ಮ ಮನೆಯಲ್ಲಿ ಯಾರಿಗೂ ಧೂಮಪಾನಾಭ್ಯಾಸ

ವಿರಲಿಲ್ಲ. ನನ್ನ ತಾತನವರ ಧೂಮಪಾನವೈಖರಿ, ಆ ಮೋಜು, ನಾನೆಲ್ಲಿಯೂ ಕಂಡಿರಲಿಲ್ಲ. ಧೂಮಪಾನಪೀಠವಾದ ಬಟ್ಟೆ ಒಗೆಯುವ ಕಲ್ಲಿನ ಸುತ್ತ ತಾತ ನವರೇ ಕೈಯಾರ ಬೀಜನೆಟ್ಟು ನೀರುಗೊಬ್ಬರ ಸುರಿದು ಬೆಳಸಿದ್ದ ಹುಲುಸಾದ ತರಕಾರಿ ತೋಟ. ಹಾಲುಪಡವಲ, ಬದನೆ, ತಿಂಗಳುಹುರುಳಿ, ದಂಟು, ಚಕ್ಕೋತ, ಗಿಡಬಳ್ಳಿಗಳು; ಕರಿಬೇವು, ನಿಂಬೆ, ಹೇರಳೆ ಮರಗಳು. ಇವುಗಳಿಂದ ಮನೆಗೆ ತರಕಾರಿ ಎಷ್ಟು ಸಿಕ್ಕುತ್ತಿತ್ತೆಂಬುದು ನನಗೆ ಜ್ಞಾಪಕವಿಲ್ಲ. ಗಿಡಮರ ಬಳ್ಳಿಗಳು ಮಾತ್ರ ಸೊಂಪಾಗಿ ಬೆಳೆದಿದ್ದವು. ತನ್ನ ಕೃತಿಯಲ್ಲಿ ತಾನೇ ಆನಂದ ಪರವಶತೆಯನ್ನನುಭವಿಸುತ್ತಿರುವಂತೆ ಭಾಸವಾಗುವ ಭಂಗಿಯಲ್ಲಿ ಆ ಬಟ್ಟೆ ಒಗೆ



ಯುವ ಬಂಡೆಯ ಮೇಲೆ ಕಾಲಮೇಲೆ ಕಾಲು ಹಾಕಿಕೊಂಡು, ನಿದಾನವಾಗಿ ಸುರುಟನಿಂದ ಸೆಳೆದ ಹೊಗೆಯನ್ನು ಸುರುಳಿಸುರುಳಿಯಾಗಿ ಗಾಳಿಯಲ್ಲಿ ಊದಿಕೊಂಡು, ಹುಡುಗರು ನಾವಾರಾದರೂ ಅಲ್ಲಿ ಸುಳಿದರೆ ಹಟ್‌ಹುಟ್ ಎಂದು ಹೆದರಿಸಿ ಓಡಿಸಿಕೊಂಡು, ಮಧ್ಯೇಮಧ್ಯೇ 'ರಾಮ ನಾಮ ತಾರಕಂ, ರಾಮಕೃಷ್ಣತಾರಕಂ' ಎಂಬ ಮಂತ್ರವನ್ನು ಹಿರಿಗೊರಲಿನಲ್ಲಿಯೇ ಉಚ್ಚರಿಸುತ್ತ 'ಔಷಧ ಸೇವನೆ' ಮಾಡುತ್ತಿದ್ದ ನನ್ನ ತಾತನವರ ದಿಟ್ಟವೇ ದಿಟ್ಟ! ಅವರ ವಿಭೂತಿಪಟ್ಟೆ-ರುದ್ರಾಕ್ಷಿಹಾರಗಳಿಗೂ ಸುರುಟಿಗೂ ಹೊಂದಾಣಿಕೆಯಿರಲಿಲ್ಲವೆಂಬುದೇನೋ ನಿಜವೇ. ಹೊಂದಾಣಿಕೆಯಿತ್ತು ಎಂದಿಟ್ಟುಕೊಂಡರೆ ಅದು ನಗುಪಾಡಿನ ನಂಟು ಎಂಬುದೂ ನಿಜವೇ. ಆಗಿನ ನನ್ನ ದೃಷ್ಟಿಗೆ ಈ ಚಿತ್ರ ಬಹು ಮೆಚ್ಚಿತು.

ತಾತನವರ ಕಫ 'ಗುಣ'ವಾದಂತೆಲ್ಲ ಅಜ್ಜಿಯ ಸಿಡುಕಾಟ ಹೆಚ್ಚಾಯಿತು. ಕೊನೆಕೊನೆಗೆ ಅಜ್ಜಿ ತಾತನವರ ಬಾಯಿಗೆ ಬೀಗಮುದ್ರೆ ಹಾಕಿ

ಬಿಟ್ಟಂತಾಯಿತು. ಪಾಪ, ತಾತನವರಿಗೆ ತಮ್ಮ ಪಾಡು ನಗುಪಾಡಾಗಿದ್ದದ್ದು ಮನವರಿಕೆಯಾಯಿತು. ಒಂದು ವಾರದ ಮಟ್ಟಿಗೆ ಪರಸ್ಥಳಕ್ಕೆ ಹೋಗಿದ್ದ ವೆಂಕಟನಾರಾಯಣಪ್ಪನವರು ಬರುವುದನ್ನೇ ಇದಿರುನೋಡುತ್ತಿದ್ದರು. ಅವರನ್ನು ಕಂಡೊಡನೆಯೆ ಸಾಷ್ಟಾಂಗ ಬಿದ್ದರು. ಆಗ ವೆಂಕಟನಾರಾಯಣಪ್ಪನವರು ತಾವು ತಂದಿದ್ದ ಎರಡು ಕಾಗದದ ಪೊಟ್ಟಣಗಳನ್ನು ತಾತನವರಿಗೆ ಕೊಟ್ಟು, "ಆ ದಿನ ಹೇಳಿದ್ದೆನಲ್ಲ,—ಒಂದು ಮಾದರಿ ಸೊಪ್ಪಿನ ಸುರುಟು—ಆ ಜಾತಿಯ ಎಲೆ ಈ ಪೊಟ್ಟಣಗಳಲ್ಲಿದೆ. ನಮ್ಮ ಹಳ್ಳಿಯ ಹತ್ತಿರ ಬೆಳೆಯುತ್ತದೆ, ತಂದಿದ್ದೇನೆ. ನೀವು ಇದನ್ನು ಸುರುಟನಂತೆಯೋ ಸಿಗರೇಟಿನಂತೆಯೋ ಸುರುಳಿಸುತ್ತಿ ಧೂಮಪಾನ ಮಾಡಬೇಕಾಗಿಲ್ಲ. ಅಗ್ಗಿಷ್ಟಿಕೆಯಲ್ಲಿ ಬೆಂಕಿಯ ಮೇಲೆ ಒಂದಿಷ್ಟು ಒಣ ಎಲೆಯನ್ನು ಪುಡಿಮಾಡಿ ಹಾಕಿ, ಆ ಹೊಗೆಯನ್ನು ಗಂಟಲಿನ ಮೂಲಕ ಸೆಳೆದುಕೊಂಡರೆ ಸಾಕು. ಸೊಪ್ಪಿನಲ್ಲಿ ಕಫ ಕತ್ತರಿಸುವ ಗುಣವಿದ್ದರೆ ನಿಮಗೆ ಅನುಕೂಲವಾಗುತ್ತದೆ." ಎಂದು ಹೇಳಿ ಪೊಟ್ಟಣಗಳನ್ನು ಕೊಟ್ಟರು. ತಾತನವರಿಗೆ ನಿಂತಿದ್ದೆಡೆಯಲ್ಲಿಯೇ ಕುಸಿದು ಬೀಳುವಂತಾಯಿತು. ವೈದ್ಯ ಹೇಳಿದ್ದೊಂದು, ರೋಗಿ ಆತುರದಿಂದ ಮಾಡಿಕೊಂಡದ್ದೊಂದು, ವೈದ್ಯನ ವಿವರಣೆ ಕೇಳಿದಮೇಲೆ ನಡೆದದ್ದು ಮತ್ತೊಂದು,—ಹೀಗಾಗಿಬಿಟ್ಟಿತು. ತಾತನವರು ಫಟಫಟನೆ ಕೆನ್ನೆಗೆ ಹಾಕಿಕೊಂಡು, ಕೈ ಜೋಡಿಸಿ, "ಸ್ವಾಮೀ, ತಾವು ಈ ವಿಧಾನವನ್ನು ಮೊದಲೇ ಹೇಳಬಾರದಾಗಿತ್ತೆ? ನನ್ನ ಸ್ಥಿತಿ ನಾಯಿಪಾಡಿಗಿಂತಲೂ ಕಡೆಯಾಗಿಬಿಟ್ಟಿದೆ ಸ್ವಾಮೀ" ಎಂದರು. ವೆಂಕಟನಾರಾಯಣಪ್ಪನವರು ಆಶ್ಚರ್ಯದಿಂದ "ಏಕೆ? ಏನಾಯಿತು? ಕಫ ಉಲ್ಬಣವಾಯಿತೆ?" ಎಂದರು. "ಅಲ್ಲ ಸ್ವಾಮೀ, ಕಫ ಗುಣವಾಗುತ್ತಲೇಬಂತು. ಆದರೆ ಈ ಮನೆ . . . ನನ್ನ ಹೆಂಡತಿ . . . ನನ್ನ ಮಕ್ಕಳು ಮೊಮ್ಮಕ್ಕಳು . . . " ಎಂದು ಪ್ರಾರಂಭಿಸಿ ತಾತನವರು ನಡೆದದ್ದೆಲ್ಲವನ್ನೂ ಸೂಕ್ಷ್ಮವಾಗಿ ಹೇಳಿಕೊಂಡರು. ವೆಂಕಟನಾರಾಯಣಪ್ಪನವರ ಪ್ರತಿಕ್ರಿಯೆಯನ್ನು ವರ್ಣಿಸಲು ನನಗೆ ಮಾತು ಬಾರದು. ತಾತನವರ ಆತ್ಮಕಥನವನ್ನು ಕೇಳುತ್ತಿದ್ದಾಗ ಅವರ ತಲೆಯ ತೂಗಾಟ, ಕಣ್ಣುಗಳಿಂದ ಹೊಮ್ಮುತ್ತಿದ್ದ ಸರಸಕಿಡಿಗಳು, ತುಟಿಯ ಮೇಲೆ ಅಲೆಅಲೆಯಾಗಿ ಸುಳಿಯುತ್ತಿದ್ದ ಕಿರುನಗೆ, ಮುಖಚರ್ಯೆಯಲ್ಲಿ ರೂಪುಗೊಂಡಿದ್ದ ತಿಳಿಯಾದ ಕುತೂಹಲ, ರಸಾನುಭವಗಳ ಮುದ್ರೆ, ಇವುಗಳನ್ನು ನೋಡಿಯೇ ಅನುಭವಿಸಬೇಕಾಗಿತ್ತು. ಇಂಥ ಬೆ. ವೆಂ.


ಅವರನ್ನು ಬಹುಜನ ಕಂಡಿರಲಾರರು. ಕೊನೆಗೆ ತಾತನವರು ಹೇಳಿಬಿಟ್ಟರು— "ಹೊಗೆ ಸೇದುವ ಔಷಧ ನನಗೆ ಇನ್ನು ಮೇಲೆ ವರ್ಜ್ಯ." ಬಿ. ವೆಂ. ಅವರಿಗೆ ತಾತನವರ ವಿಷಯದಲ್ಲಿ ಇನ್ನೂ ಸ್ವಲ್ಪ ಸಹಾನುಭೂತಿ ಉಳಿದುಕೊಂಡಿದ್ದಿತೆಂದು ಕಾಣುತ್ತದೆ. "ಹೋಗಲಿ, ಸಿಹಿ ಪದಾರ್ಥಗಳ ಬಳಕೆಯನ್ನು ಸ್ವಲ್ಪ ಕಡಮೆಮಾಡಿ ನೋಡಿ" ಎಂದರು. ತಾತನವರಿಗೆ ಈ ಸಲಹೆ ಕೊಡುವವರ ಎದೆಯ ಕೆಚ್ಚು ಅತಿಶಯದ್ದಾಗಿರಬೇಕು! ತಾತನವರು ತಮ್ಮ ಜೀವನಮಂತ್ರಗಳಲ್ಲೊಂದನ್ನು ಹೇಳಿಬಿಟ್ಟರು. "ನೋಡಿ ದೇವ್ರು, ಅದೊಂದು ಮಾತ್ರ ಸಾಧ್ಯವಿಲ್ಲ. ತಿನ್ನಬೇಕು, ತಿಣುಕಬೇಕು, ಅನುಭವಿಸಬೇಕು, ಇತಿ ವೇಂಕಟರಮಣಯ್ಯಃ!" ವೆಂಕಟನಾರಾಯಣಪ್ಪನವರು ಏನನ್ನೂ ಹೇಳಲಿಲ್ಲ. ಒಳಗೆ ಗೂಢವಾಗಿ ಅಡಗಿಕೊಂಡಿದ್ದ ನಗು ಮೇರೆಯೊಡೆದು ಉಕ್ಕಿಬಂತು. ಜೇಬಿನಿಂದ ಗಡಿಯಾರ ತೆಗೆದು ನೋಡಿಕೊಂಡು "ಬರುತ್ತೇನೆ" ಎಂದು ಹೊರಟು ಹೋದರು.

೩

ಶಂಕರಪುರದಲ್ಲಿ ನಾವು ವಾಸವಿದ್ದ ಮನೆಯ ತಲೆಬಾಗಿಲಿನಿಂದ ಬೀದಿಯ ಬಾಗಿಲಿಗೆ ಒಂದು ನೂರು ಅಡಿ ದೂರ. ಈ ದೂರವನ್ನು ಬೈಸಿಕಲ್ಲಿನ ಮೇಲೆ ಹತ್ತಿಕೊಂಡು ಹೋಗುವುದು; ಬೀದಿಯ ಬಾಗಿಲಿನ ಅತಿಸಮೀಪಕ್ಕೆ ಬಂದಾಗ ದಿಢೀರೆಂದು ಎರಡು ಬ್ರೇಕುಗಳನ್ನೂ ಬಲವಾಗಿ ಸೆಳೆದು, ಸೈಕಲಿನ ಮೇಲಿನಿಂದ ಧುಮುಕಿ, ಎರಡು ಮೆಟ್ಟಲುಗಳನ್ನು ಸೈಕಲಿನೊಡನೆ ದಡಬಡನೆ ಇಳಿದು ರಸ್ತೆಯ ಮಟ್ಟವನ್ನು ಸೇರುವುದು; ಅಲ್ಲಿಂದ ಮುಂದಕ್ಕೆ ಎಲ್ಲಿಗೆ ಹೋಗಬೇಕೋ ಅಲ್ಲಿಗೆ ಸೈಕಲ್ ತುಳಿದುಕೊಂಡು ಹೋಗುವುದು; ಇದು ನನ್ನ ವರ್ಷಾನುಗಟ್ಟಲೆಯ ಪದ್ಧತಿ. ಈ ಸರ್ಕಸ್ಸು ಸಾಧಾರಣವಾಗಿ ಸುಗಮವಾಗಿಯೇ ನಡೆಯುತ್ತಿತ್ತು. ಒಂದೆರಡು ಸಲ ಮಾತ್ರ ಅದಕ್ಕೆ ವಿಘ್ನಸೂಚನೆ ಬಂದಿತ್ತು. ಯಾರಾದರೂ ಬೀದಿಯ ಬಾಗಿಲಿನಿಂದ ಮನೆಯೊಳಕ್ಕೆ ಬರುತ್ತಿದ್ದಾರೆಯೆ ಇಲ್ಲವೆ ಎಂಬುದು ಕಾಂಪೌಂಡಿನ ಒಳಗಿನಿಂದ ತಿಳಿಯುತ್ತಿರಲಿಲ್ಲ. ಒಂದೆರಡು ಸಲ ಹೀಗೆ ಅನಿರೀಕ್ಷಿತವಾಗಿ ಒಳಬರುತ್ತಿದ್ದವರಿಗೂ ಸೈಕಲಿನ ಮೇಲಿದ್ದ ನನಗೂ ಘರ್ಷಣೆಯಾಗಿತ್ತು. ಸೈಕಲಿನಿಂದ ಬಿದ್ದು ಪೆಟ್ಟು ತಿಂದವನು ನಾನು; ನನ್ನನ್ನು

ದುರುದುರುಗುಟ್ಟಿ ನೋಡಿಕೊಂಡು ಮನೆಯೊಳಕ್ಕೆ ಹೋಗುತ್ತಿದ್ದವರು ಅವರು. ಅದೃಷ್ಟವಶಾತ್ ಅವರಾರೆಂದು ನನಗೆ ತಿಳಿಯದು, ನಾನಾರೆಂದು ಅವರಿಗೆ ತಿಳಿಯದು. ಆದದ್ದರಿಂದ ವಿಷಯ ಅಷ್ಟರಲ್ಲಿಯೇ ಮುಗಿದಿತ್ತು.

ನನ್ನ ಈ ಪದ್ಧತಿಗೆ ಶಾಶ್ವತವಾಗಿ ಭಂಗ ತಂದವರು ಬೆ. ವೆಂ. ಅವರೆಂದು ಹೇಳುವುದರಲ್ಲಿ ಅತಿಶಯೋಕ್ತಿಯಿಲ್ಲ. ಹಿಂದೆ ನಡೆದಿದ್ದ ಸ್ಥಳದಲ್ಲಿಯೇ, ಹಿಂದೆ ಹೇಳಿದ ಕಾರಣದಿಂದಲೇ ನನಗೂ ಅವರಿಗೂ ಘರ್ಷಣೆ ನಡೆಯಿತು. ಅವರ ಶುಭ್ರವಾದ ಪಂಚೆಯ ಮೇಲೆ ನನ್ನ ಸೈಕಲಿನ ಮುಂದಿನ ಚಕ್ರ, ಮಡ್‌ಗಾರ್ಡು ಗಳು ಸರಿದು ಮಣ್ಣು ಮುದ್ರೆಯನ್ನೊತ್ತಿದವು. ನಾನು ಆಯ ತಪ್ಪಿ ಬಿದ್ದೆ; ಸೈಕಲು ನನ್ನ ಮೇಲೆ ಬಿತ್ತು. ಹಿಂದಿನವರಂತೆ ಬೆ. ವೆಂ. ಅವರು ದುರು ದುರುಗುಟ್ಟಿ ನೋಡಿ ಕೊಂಡು ಹೋಗಲಿಲ್ಲ. ಕೈಲಿದ್ದ ಶ್ವೇತಚ್ಛತ್ರಿ ಯಿಂದ ನನ್ನ ಭುಜದ ಮೇಲೆ ಬಲವಾಗಿ



ಒಂದೇಟು ಕೊಟ್ಟರು. ಕೋಲಿನಿಂದ ಹೊಡೆದಷ್ಟು ಪೆಟ್ಟು ಬೀಳಲಿಲ್ಲವೆನ್ನಿ— ಏಕೆಂದರೆ ಅವರ ಛತ್ರಿಗೆ ದಪ್ಪವಾದ ಬಿಳಿಬಟ್ಟೆಯ ಹೊದಿಕೆಯಿತ್ತು. ದಿಗ್ಭ್ರಾಂತನಾಗಿ ಮೇಲೆದ್ದು ಸೈಕಲನ್ನೂ ಎಬ್ಬಿಸಿದೆ.

ಬೆ. ವೆಂ.—"ಏನಪ್ಪ ಕೊಳ್ಳೆಹೋಗುವ ಅವಸರ? ನಿದಾನವಾಗಿ ಪ್ರಜ್ಞೆ ಯಿಟ್ಟು ಸೈಕಲ್ ಬಿಡುವುದಕ್ಕೇನಂತೆ!"

ನಾನು—"ಇಲ್ಲ ಸರ್, ಹೊತ್ತಾಗಿಬಿಟ್ಟಿತು . . ."

"ಎಲ್ಲಿಗೆ ಹೊತ್ತಾಗಿಬಿಟ್ಟದ್ದು?"

"ಕಾಲೇಜಿಗೆ, ಸರ್."

"ಸ್ವಲ್ಪ ಮುಂಚಿತವಾಗಿ ಹೊರಡುವುದಕ್ಕೆ ಆಗುತ್ತಿರಲಿಲ್ಲವೇನೋ?"

"ಅಡುಗೆ ಹೊತ್ತಾಯಿತು, ಸರ್."

"ಪಾಪ! ನಿನ್ನ ವಿದ್ಯಾಭ್ಯಾಸದ ವಿಷಯದಲ್ಲಿ ಮನೆಯವರಿಗಾರಿಗೂ ಮಮತೆಯಿಲ್ಲ!"

ಸುಮ್ಮನಿದ್ದೆ.

"ಕಾಲೇಜಿಗೋ ಹೊರಟಿರುವುದು?"

"ಹೌದು, ಸರ್."

"ತಲೆಗೆ ಟೋಪಿ ಹಾಕಿಕೊಂಡು ಹೋಗಬೇಕೆಂಬ ಮರ್ಯಾದೆ ಬೇಕಿಲ್ಲ ವೆಂದು ಕಾಣುತ್ತೆ!"

ನಾನು ಮೌನ.

"ತೀರ್ಥರೂಪರು ಮನೆಯಲ್ಲಿದ್ದಾರೆಯೆ?"

"ಇಲ್ಲ, ಸರ್."

ಬಿ.ಎಂ. ಅವರು ನನ್ನ ತಂದೆಯವರ ಹತ್ತಿರ ಕಳೆಯಬೇಕೆಂದಿದ್ದ ಸಮಯವನ್ನು ನನ್ನ ಹತ್ತಿರವೇ ಕಳೆದುಬಿಡಬೇಕೆಂದು ಮನಸ್ಸು ಮಾಡಿದ್ದಿರಬೇಕು.

"ಇಜಾರದ ಬದಲು ಪಂಚೆ ಉಟ್ಟುಕೊಂಡರೆ ಅನನುಕೂಲವೇನೊ!....

"ಕೋಟಿಗೊಂದು ಗುಂಡಿ ಹೊಲಿದುಕೊಳ್ಳುವುದಕ್ಕೂ ಆಗದಷ್ಟು ಕೆಲಸವೇನೋ! . . .

"ಷರಟಿನ ಕೆಳಭಾಗವನ್ನು ಹೊರಕ್ಕೆ ಇಳಿಬಿಡುವುದರ ಬದಲು ಇಜಾರದೊಳಕ್ಕೆ ಸಿಕ್ಕಿಸಿಕೊಂಡರೆ ಫ್ಯಾಷನ್ನಿಗೆ ಕುಂದುಬರುತ್ತದೆಯೇನೋ! . . .

"ಕೋಟಿನ ಬಟ್ಟೆಯಲ್ಲಿ ಷರಟನ್ನು ಹೊಲಿಸುವುದರ ಬದಲು ಷರಟಿನ ಬಟ್ಟೆಯಲ್ಲಿಯೇ ಷರಟನ್ನು ಹೊಲಿಸಿದ್ದರೆ ಮೈಗೆ ಹಗುರವಾಗಿಬಿಡುತ್ತಿತ್ತೇನೋ!"

ನಾನು ಹಾಕಿಕೊಂಡಿದ್ದ ಷರಟು ಕೋಟಿನ ಬಟ್ಟೆಯಿಂದ ತಯಾರಿಸಿದ್ದಾಗಿರಲಿಲ್ಲ. ಬಿನ್ನಿ ಗಿರಣಿಯವರು ಆಗತಾನೆ ತಯಾರುಮಾಡಿ ಮಾರಾಟಕ್ಕಿಟ್ಟಿದ್ದ Gold Standard ಎಂಬ ಹೊಸ ನಮೂನೆಯ ಷರಟಿನ ಬಟ್ಟೆಯೇ. ಆದರೆ ನಾನೇನನ್ನೂ ವಿಶದೀಕರಿಸಹೋಗಲಿಲ್ಲ. ಪ್ರಾಯಶ್ಚಿತ್ತ ಅಷ್ಟಕ್ಕೇ ನಿಲ್ಲುವುದೆಂಬ ಆಸೆಯಿಂದ. ಬಿ.ಎಂ. ಅವರು ಮುಂದುವರಿಸಿದರು:

"ಕೋಟಿನ ಬಟ್ಟೆಯಲ್ಲಿ ಷರಟು, ಜಮಖಾನದಲ್ಲಿ ಷರಾಯಿ, ಇದು ಈವತ್ತು. ನಾಳೆ, ಕಾಲಿನದನ್ನು ತಲೆಯ ಮೇಲಿಟ್ಟುಕೊಂಡುಬಿಡಿ, ತಲೆಯ ಮೇಲಿನದನ್ನು ಕಾಲಿಗೆ ಹಾಕಿಕೊಂಡುಬಿಡಿ! ಕೋಟನ್ನು ನಡುವಿಗೆ ಸುತ್ತಿಕೊ, ಷರಾಯನ್ನು ಷರಟಾಗಿ ಹಾಕಿಕೊ!"

ನನಗೆ ಹಿಡಿಸಲಾರದಷ್ಟು ನಗು ಬಂತು. ಆದರೆ ಬೆ.ವೆಂ. ಅವರ ಆಗಿನ ಆ ವಿಭಾಂಡಕಾವತಾರದೆದುರು ನಗುವನ್ನು ಹೊರತೋರುವುದಕ್ಕೆ ನನಗೆ ಧೈರ್ಯ ಬರಲಿಲ್ಲ. ಸೈಕಲಿನಿಂದ ಬಿದ್ದ ಸಮಯದಲ್ಲಿ ನನ್ನ ಕೈಲಿದ್ದ ಪಾಠಪುಸ್ತಕಗಳು ನೆಲದ ಮೇಲೆ ಚೆಲ್ಲಾಪಿಲ್ಲಿಯಾಗಿ ಚದುರಿದ್ದವು. ಉಕ್ಕುತ್ತಿದ್ದ ನಗುವನ್ನು ಮರೆಮಾಡುವ ಸಲುವಾಗಿ ಆ ಪುಸ್ತಕಗಳನ್ನು ಆರಿಸಿಕೊಳ್ಳುತ್ತಿದ್ದೆ. ಕೊನೆಯ ದಾಗಿ ಕೈಗೆತ್ತಿಕೊಂಡ ಪುಸ್ತಕ "ಚೀನಾದೇಶದ ಬೌದ್ಧಯಾತ್ರಿಕರು."

ಬೆ.ವೆಂ. ಅವರು "ಏನು ಪುಸ್ತಕ ಅದು?" ಎಂದರು. ಪುಸ್ತಕದ ಹೆಸರನ್ನು ಹೇಳಿದ್ದಿದ್ದರೆ ನೆಟ್ಟಗಿರುತ್ತಿತ್ತು. ಆದರೆ "ರತ್ನ ಅವರು ಬರೆದದ್ದು" ಎಂದು ಹೇಳಿ ಮಹಾಪರಾಧಮಾಡಿಬಿಟ್ಟೆನೆಂದು ಕಾಣುತ್ತದೆ. ಬೆ.ವೆಂ. ಅವರು ಹುಬ್ಬುಗಳನ್ನು ಇನ್ನಷ್ಟು ಗಂಟಿಟ್ಟು, ಇನ್ನೂ ಎತ್ತರದ ಕೀರಲುದನಿಯಲ್ಲಿ "ಓಹೋ! ರಾಜರತ್ನಂ ಅವರ ತಾಯಿತಂದೆಯರು ಅವರಿಗಿಟ್ಟ ನಾಮಧೇಯ ಚೆನ್ನಾಗಿಲ್ಲವೇನೋ! ರತ್ನನಂತೆ ರತ್ನ, ಬಂಗಾರಾನ್ನು, ವಜ್ರಾನ್ನು, ವೈಢೂರ್ಯಾನ್ನು! ಲಕ್ಷಣವಾಗಿ ಮಹಾರಾಜೇಶ್ರೀ ಜಿ. ಪಿ. ರಾಜರತ್ನಂ ಎಂದು ಹೇಳಿದರೆ ನಿನ್ನ ಅಂತಸ್ತಿಗೆ ಏನು ಕಡಮೆಯಾಗಿಬಿಡುವುದು? ಎಲ್ಲದರಲ್ಲಿಯೂ ಶುದ್ಧ ಬೇಜವಾಬ್ದಾರಿ, ಅಧಿಕ ಪ್ರಸಂಗಿತನ!" ಎಂದು ನಿಟ್ಟುಸಿರುಬಿಟ್ಟು, ಅಂಗವಸ್ತ್ರದ ನಿರಿಗೆಕುಚ್ಚಿನಿಂದ ಪಂಚೆಯ ಮೇಲಿನ ಸೈಕಲ್ ಚಕ್ರದ ಮುದ್ರೆಯನ್ನು ಒದರಿಕೊಂಡು, "ಹೋಗು ಹೋಗು, ಕ್ಲಾಸಿಗೆ ಹೊತ್ತುಮಾಡಿಕೊಂಡು ಹೋಗಬೇಡ" ಎಂದು ಹೇಳಿ ಸರಸರನೆ ಹೊರಟುಹೋದರು.

೪

ಬಿ.ಎಂ.ಶ್ರೀ. ಅವರ "ಇಂಗ್ಲಿಷ್ ಗೀತಗಳು" ಆಗತಾನೆ ಪ್ರಕಟವಾಗಿತ್ತು. ಬೆ.ವೆಂ. ಅವರೇ ಈ ಪುಸ್ತಕಕ್ಕೆ ಮುನ್ನುಡಿ ಬರೆಯುತ್ತ "ಆಂಗ್ಲೇಯ ಕವಿಗಳ ಉತ್ತಮವಾದ ಸಣ್ಣಸಣ್ಣ ಗೀತಗಳನ್ನು, ಮೂಲದಲ್ಲಿಯ ಭಾವಗಳೂ

ರಸವೂ ಬಿಟ್ಟುಹೋಗದಂತೆ ಸಾಧ್ಯವಾದ ಮಟ್ಟಿಗೆ ಪ್ರಯತ್ನಿಸಿ, ಕನ್ನಡಕ್ಕೆ ಸ್ವಾಭಾವಿಕವಾಗಿರುವಂತೆ ಮಾರ್ಪಡಿಸಿ, ಲಲಿತವಾದ ಭಾಷೆಯಲ್ಲಿ, ಇಂಗ್ಲಿಷಿಗೆ ಹೋಲುವ ಹೊಸ ಛಂದಸ್ಸಿನಲ್ಲಿ, ಗ್ರಂಥಕರ್ತರು ಈ ಕವಿತೆಗಳನ್ನು ರಚಿಸಿರುವರು" ಎಂದು ಹೇಳಿದ್ದಾರೆ. ಆದರೂ ಅವರಿಗೆ ಕನ್ನಡ ಸಾಹಿತ್ಯದಲ್ಲಿ ಆಗತಾನೆ ತಲೆದೋರುತ್ತಿದ್ದ 'ಹೊಸತನ'ದ ಸಾಮಾನ್ಯ ರೀತಿನೀತಿಗಳು ಅಷ್ಟಾಗಿ ಒಪ್ಪಿತವಾದಂತೆ ಕಾಣಬರಲಿಲ್ಲ. ವಿಕ್ರಮಾರ್ಜುನವಿಜಯ, ರಾಮಚಂದ್ರ ಚರಿತ ಪುರಾಣ, ಸೋಮೇಶ್ವರ ಶತಕಗಳನ್ನು ಪರಿಷ್ಕರಿಸಿ, ಅವುಗಳ ಛಂದೋಬಂಧದಲ್ಲಿಯೂ ಅಲಂಕಾರಗಳಲ್ಲಿಯೂ ಚಮತ್ಕಾರಗಳಲ್ಲಿಯೂ ತಲ್ಲೀನವಾಗಿದ್ದ ಅವರ ಅಂತಃಕರಣವನ್ನು ಹೊಸತನದ ಕವಿತಾಲತೆಯ ಮುಳ್ಳುಗಳು ಆಗಾಗ ಚುಚ್ಚಿ ಚುಚ್ಚಿ ಕೆರಳಿಸುತ್ತಿದ್ದದ್ದರಲ್ಲಿ ಆಶ್ಚರ್ಯವಿಲ್ಲ.

ಎಂ. ಆರ್. ಶ್ರೀನಿವಾಸಮೂರ್ತಿಗಳೆಂದು ನನ್ನ ನೆನಪು —ಆಗ ಅವರು ಬೇರಾವುದೋ ಊರಿನಲ್ಲಿ ಕೆಲಸದಲ್ಲಿದ್ದು ಬೆಂಗಳೂರಿಗೆ ಬಂದಿದ್ದವರು ನಮ್ಮ ಮನೆಗೆ ಬಂದರು. ನನ್ನ ತಂದೆಯವರು ಅಭ್ಯಂಜನದಲ್ಲಿದ್ದುದರಿಂದ ಹೊರ ಕೋಣೆಯಲ್ಲಿ ಕುಳಿತುಕೊಂಡರು. ಅಷ್ಟರಲ್ಲಿಯೇ ಬಿ.ವೆಂ. ಅವರೂ ನಂಗಪುರಂ ವೆಂಕಟೇಶ ಐಯಂಗಾರ್ಯರವರೂ ಬಂದು ಸೇರಿದರು. ಮೂವರಿಗೂ ಮಾತುಕತೆ ಆರಂಭವಾಯಿತು.

ಎಂ.ಆರ್.ಶ್ರೀ.—"ಏನು ಸಾರ್, 'ಇಂಗ್ಲಿಷ್ ಗೀತಗಳು' ಬಂದು ಬಿಟ್ಟಿತು!"

ಬಿ.ವೆಂ.—"ಏನೋಪ್ಪ! ಬಂದಿದೆ."

ಎಂ.ಆರ್.ಶ್ರೀ.—"ಯಾಕೆ ಸಾರ್? ನಮಗೆಲ್ಲ ತುಂಬ ಹೆಮ್ಮೆ. ಪದ್ಯಗಳು ಬಲು ಸೊಗಸಾಗಿವೆಯಲ್ಲ!"

ಬಿ.ವೆಂ.—"ಹೌದಪ್ಪ, ಒಪ್ಪಿದೆ. ಎಲ್ಲ ಸರಿಯೆ . . ."

ಎಂ.ಆರ್.ಶ್ರೀ.—"ಯಾಕೆ ಸಾರ್? ಹೀಗೆ ಹೇಳ್ತೀರಿ?"

ನಂ.ವೆಂ.—"ಕೆಲವಂತೂ ಇಂಗ್ಲಿಷಿನಲ್ಲಿರುವುದಕ್ಕಿಂತಲೂ ಸೊಗಸಾಗಿವೆ."

ಬಿ.ವೆಂ.—"ಅದೆಲ್ಲ ಸರಿ ಸ್ವಾಮೀ, ಆದರೆ ಆ ಮೊದಲನೇ ಪದ್ಯ . . ."

ಎಂ.ಆರ್.ಶ್ರೀ.—"'ಕಾಣಿಕೆ'ತಾನೆ ಸಾರ್?"

ಬಿ.ವೆಂ.—"ಅದೇ. ಏಕೋ ನನ್ನ ಮನಸ್ಸಿಗೆ ಅಷ್ಟಾಗಿ ಹಿಡಿಸಲಿಲ್ಲ."

ಎಂ.ಆರ್.ಶ್ರೀ.—“ಏಕೆ ಸಾರ್? ಛಂದಸ್ಸೆಲ್ಲ ಸರಿಯಾಗಿದೆಯಲ್ಲ!”

ಬೆ.ವೆಂ.—“ಇಲ್ಲವೆಂದವರು ಯಾರಪ್ಪ! ಎಲ್ಲ ಇವೆ. ಅದೇನೋ ನೋಡಿ, ಆ—

ಅವಳ ಲಂಗವಿವನಿಗಿಟ್ಟು
ಇವನ ಚಡ್ಡಿ ಅವಳಿಗಿಟ್ಟು
ಹಾಡಬಯಸಿದೆ

ಎಂದೇನೋ ಒಂದು ಸಾಲಿದೆಯಲ್ಲ, ಅದು! ಈ ವೇಷ ತೊಡಿಸಿದ್ದೂ ಅಲ್ಲದೆ ಹಾಡು ಬೇರೆ ಹಾಡಬೇಕೇನಪ್ಪ!”

ಎಂ.ಆರ್.ಶ್ರೀಯವರು ಗೊಳ್ಳೆಂದು ನಕ್ಕುಬಿಟ್ಟರು. ನಂ.ವೆಂ. ಅವರು ಹೊದ್ದುಕೊಂಡಿದ್ದ ಶಾಲುವಿನ ಸೆರಗನ್ನು ಬಾಯಿಗೆ ಅಡ್ಡವಾಗಿಟ್ಟುಕೊಂಡು ನಗುವನ್ನು ಮರೆಮಾಡಿಕೊಂಡರು.

೨೫

“ಏನಪ್ಪ! ಸಾಕುಸಾಕಾಗಿಹೋಯಿತು! ಎಷ್ಟು ಜನಕ್ಕೆ ಹೇಳುವುದು? ಒಬ್ಬರಾದರೂ ಹೇಳಿದ ಮಾತನ್ನು ಕೇಳಬೇಕಲ್ಲ! ಶ್ರೀಕಂಠಯ್ಯನವರಿಗೆ ಹೇಳಿದೆ, ಕಿವಿಯ ಮೇಲೆ ಹಾಕಿಕೊಳ್ಳಲಿಲ್ಲ! ವೆಂಕಣ್ಣಯ್ಯನವರಿಗೆ ಹೇಳಿದೆ, ಕೇಳಿಯೂ ಕೇಳದಂತಿದ್ದುಬಿಟ್ಟರು! ಗುಂಡಪ್ಪನವರಿಗೆ ಹೇಳಿದೆ, ಕೇಳಿದಷ್ಟೂ ಕೇಳಿ ಇನ್ನೇನೋ ಬೇರೆ ಹವ್ಯಾಸವನ್ನಿಟ್ಟುಕೊಂಡುಬಿಟ್ಟರು! ಆಗಬೇಕಾಗಿರುವ ಕೆಲಸವನ್ನು ಯಾರಾದರೂ ಮಾಡಬೇಕಲ್ಲಪ್ಪ! . . .” ಎಂದು ಬೆ.ವೆಂ. ಅವರು ಸ್ವಲ್ಪ ಕೂಗಾಡುತ್ತಿದ್ದರೆಂದೇ ಹೇಳಬೇಕು,—ನಮ್ಮ ಮನೆರಸ್ತೆಯ ಚೌಕದಲ್ಲಿ. ನಾಲ್ಕೈದು ಮಂದಿಗೆ ಈ ಪುಟ್ಟ ಭಾಷಣ ನಡೆಯುತ್ತಿತ್ತು. ಅವರು ಯಾರು ಯಾರೆಂಬುದು ನನ್ನ ಜ್ಞಾಪಕದಲ್ಲಿಲ್ಲ.

ಇಷ್ಟು ಹೊತ್ತಿಗೆ ಸರಿಯಾಗಿ ಎದುರುದಿಕ್ಕಿನಿಂದ ಸುಬ್ರಹ್ಮಣ್ಯಶಾಸ್ತ್ರಿಗಳು (ಮೈಸೂರಿನಲ್ಲಿ ‘ನಕಲಿ ಶಾಸ್ತ್ರಿಗಳು’ ಎಂದು ಪರಿಚಿತರಾದವರು) ಬಂದರು. ಬಂದವರೇ ಹೊದ್ದಿದ್ದ ಅಂಗವಸ್ತ್ರವನ್ನು ನಡುವಿಗೆ ಕಟ್ಟಿ, ಬೆ.ವೆಂ. ಅವರಿಗೆ ಉದ್ದಂಡ ಪ್ರಣಾಮ ಮಾಡಿ ಎದ್ದುನಿಂತು ಹಲ್ಲುಕಿರಿದರು. ಬೆ.ವೆಂ. ಅವರು

"ನೀವೆಲ್ಲಿಂದ ಧುಮಿಕಿದಿರಿ?" ಎಂದಿಷ್ಟೇ ನುಡಿದು ತಮ್ಮ ಭಾಷಣವನ್ನು ಮುಂದುವರಿಸಿದರು.

"ಶ್ರೀಕಂಠಯ್ಯನವರು 'ಇಂಗ್ಲಿಷ್ ಗೀತ'ಗಳನ್ನು ಬರೆದರು!"

ಶಾಸ್ತ್ರಿ—"ಆಹಾ!"

ಬೆ.ವೆಂ.—"ವಾಸುದೇವಯ್ಯನವರು 'ಭೀಷ್ಮಚರಿತೆ' ಬರೆದರು."

"ಅಲ್ಲವೆ!"

"ಗುಂಡಪ್ಪನವರು ವಿದ್ಯಾರಣ್ಯರ ವಿಷಯ ಬರೆದರು!"

"ಪಾಪ!"

"ಇವುಗಳೆಲ್ಲ ಬರಬೇಕಾದದ್ದೇ. ಆದರೆ ಎಳೆಯ ಹುಡುಗರಿಗೆ ಬೇಕಾದ್ದನ್ನು ಯಾರಪ್ಪ ಕೊಡುವವರು?"

ಶಾಸ್ತ್ರಿಗಳು ತೇಲುಗಣ್ಣು ಮೇಲುಗಣ್ಣು ಮಾಡಿಕೊಂಡು ಅಂತರಿಕ್ಷವನ್ನು ನೋಡಿ, ಕೈಗಳಲ್ಲಿ 'ತಾರತಮ್ಯ' ಅಭಿನಯ ಮಾಡಿದರು.


ಬೆ.ವೆಂ. ಅವರು ಶಾಸ್ತ್ರಿಗಳ ನಕಲಿ ಉತ್ತರಗಳನ್ನೂ ಅಭಿನಯವನ್ನೂ ನಿರ್ಲಕ್ಷ್ಯಮಾಡಿದ್ದರಾದರೂ ಸೇರಿದ್ದ ಜನ ಶಾಸ್ತ್ರಿಗಳಲ್ಲಿಯೇ ಆಸಕ್ತಿವಹಿಸಿದರು. ಬೆ.ವೆಂ. ಅವರು "ಯಾರೂ ಮಾಡಲಿಷ್ಟಪಡದ ಕೆಲಸವನ್ನು, ಅತ್ಯಾವಶ್ಯಕವಾಗಿ ಆಗಬೇಕಾಗಿರುವ ಕೆಲಸವನ್ನು, ಯಾರಾದರೊಬ್ಬರು ಮಾಡಬೇಕಲ್ಲಪ್ಪ! ಕೊನೆಗೆ ನಾನೇ ಮಾಡಬೇಕಾಗಿ ಬಂತು. ಇಗೊ . . ." ಎಂದು ಕೈಲಿದ್ದ ಪುಸ್ತಕದ ಕಟ್ಟನಿಂದ ಒಂದು ಪ್ರತಿಯನ್ನು ತೆಗೆದು, ಯಾರೋ ಒಬ್ಬ ಹಿರಿಯರ ಕೈಗೆ ಕೊಟ್ಟರು. ಶಾಸ್ತ್ರಿಗಳು ಬೆ.ವೆಂ. ಅವರ ವಾಕ್ಯ ಮುಗಿದ ತಕ್ಷಣವೇ "ಅಯ್ಯಯ್ಯೊ!" ಎಂದರು. ಅದುವರೆಗೂ ಗಮನಿಸಿಯೂ ಗಮನಿಸದಂತಿದ್ದ ಬೆ.ವೆಂ. ಅವರು ಶಾಸ್ತ್ರಿಗಳನ್ನು ಕುರಿತು "ಏನು ಶಾಸ್ತ್ರಿಗಳೇ, ಹುಚ್ಚಾಟ ನಿಲ್ಲಿಸುವುದಕ್ಕೆ ಇನ್ನೂ ವಯಸ್ಸು ಸಾಲದೋ?" ಎಂದರು. ಶಾಸ್ತ್ರಿಗಳು ಇನ್ನಷ್ಟು ಹಲ್ಲುಕಿರಿದರೇ ವಿನಾ ಮತ್ತೇನನ್ನೂ ಹೇಳಲಿಲ್ಲ.

ಬೆ.ವೆಂ. ಅವರು ಹಿರಿಯರ ಕೈಲಿಟ್ಟ ಪ್ರತಿ "ಕನ್ನಡ ಐದನೆಯ ಪುಸ್ತಕ." ಆ ಹಿರಿಯರು ಪುಸ್ತಕವನ್ನು ಅಲ್ಲಿಯೇ ತೆರೆದು ಹಾಳೆಗಳನ್ನು ತಿರುವಿಹಾಕಲು ಮೊದಲುಮಾಡಿದರು. ಇತರರು ಹಾಳೆಗಳೊಳಕ್ಕೆ ಇಣುಕಿ ನೋಡುತ್ತಿದ್ದರು. ಶಾಸ್ತ್ರಿಗಳ ಗಮನವನ್ನು ಒಂದು ಹಾಳೆ ಆಕರ್ಷಿಸಿತು.

ಅದರಲ್ಲಿ ಈ ಪದ್ಯ ಅಚ್ಚಾಗಿತ್ತು—

ಹುಡುಗರೆ ಬೆಣ್ಣೆಯನು ನೆಟ್ಟನೆ
ಹೊಡೆಯಿರಿ ನೀವದರ ತಲೆಯನಿಕ್ಕಿರಿ ಬಲದಿಂ
ಬಿಡಬೇಡಿರಿ ಹೊಡೆವುದ ನೀವ್
ಕಡು ಕೆಂಪಗೆ ಕಾದ ವೇಳೆಯೊಳ್ ಕಬ್ಬಿಣಮಂ

ಇದು ಬೆ.ವೆಂ. ಅವರ ಕೃತಿ. ಶಾಸ್ತ್ರಿಗಳಿಗೆ ಇದು ತಿಳಿದಿರಲಾರದು. ತಿಳಿದಿದ್ದರೂ ಅವರು ಅದಕ್ಕೆ ಮನ್ನಣೆಕೊಡುತ್ತಿದ್ದರೋ ಇಲ್ಲವೋ! ಮೇಲಿನ ಪದ್ಯವನ್ನು ಹಾವಭಾವಗಳೊಡನೆ ಹಾಡಿ ಅಭಿನಯಿಸಿ "ಹೊಡೆಯಿರಿ ನೀವ್" ಎಂಬ ಮಾತುಗಳು ಬಂದಾಗ ಪಕ್ಕದಲ್ಲಿದ್ದ ಅಪರಿಚಿತರೊಬ್ಬರ ಬೆನ್ನಿನ ಮೇಲೆ ಫಟ್ ಎಂದು ಒಂದೇಟು ಅಪ್ಪಳಿಸಿದರು. ಜನಕ್ಕೆ ಇದು ಬಹು ರಸವತ್ತಾದ ವಿನೋದ ವಾಗಿ ಕಂಡಿತು. ಬೆ.ವೆಂ. ಅವರು ಈ ಪ್ರಸಂಗವನ್ನು ಕಂಡು ಕಿಡಿಕಿಡಿಯಾದರು; ಆ ಹಿರಿಯರನ್ನು ಕುರಿತು "ಸ್ವಾಮೀ, ಆ ಪುಸ್ತಕವನ್ನು ಮನೆಗೆ ತೆಗೆದುಕೊಂಡು ಹೋಗಿ ನಿಮ್ಮ ಚಿರಂಜೀವಿಯ ಕೈಲಿಡಿ. ಓದಬೇಕಾದವನು ಅವನು" ಎಂದು ಹೇಳಿಬಿಟ್ಟು ಹೊರಟುಹೋದರು.



ಟಿ. ಎಸ್. ವಿ.

ಟಿ. ಎಸ್. ವಿ.

ಬೆಳ್ಳಾವೆ ವೆಂಕಟನಾರಾಯಣಪ್ಪನವರು ಎತ್ತರವೋ ಟಿ. ಎಸ್. ವೆಂಕಣ್ಣಯ್ಯನವರು ಎತ್ತರವೋ ನನಗೆ ಜ್ಞಾಪಕವಿಲ್ಲ. ಅಂತೂ ಒಬ್ಬರನ್ನೊಬ್ಬರು ಮೀರಿಸುವಂತಿದ್ದರು. ವೆಂಕಣ್ಣಯ್ಯನವರ ದೇಹದ ಎತ್ತರಕ್ಕೆ ಸರಿದೂಗುವಂತಿದ್ದುವು, ಅವರ ನೀಳವಾದ ತೋಳುಗಳು, ನೀಳವಾದ ಹಸ್ತಗಳು, ಇನ್ನೂ ನೀಳವಾದ ಕೈಬೆರಳುಗಳು. ಅವರ ಈ ಭೌತಚಿತ್ರ ಅನೇಕರಲ್ಲಿ ಮೂಡಿರಬಹುದು. ವಿಕ್ರಮಾರ್ಜುನ ವಿಜಯದ

ಯಮುನಾನದೀತರಂಗಮ-
ನಮುಂಕಿ ವನಲತೆಯ ಮನೆಗಳಂ ಸೋಂಕಿ ವನ-
ಭ್ರಮಣಪರಿಶ್ರಮಮಂ ಮು-
ನ್ನಮೆ ಕಳೆದುದು ಬಂದದೊಂದು ಮಂದಶ್ವಸನಂ.

ಎಂಬ ಪದ್ಯವನ್ನು ವೆಂಕಣ್ಣಯ್ಯನವರು ರಾಗದ ಅಂಚು ಕೊಟ್ಟು ಪಠಿಸುತ್ತಿದ್ದಾಗ ಕಣ್ಣಿನಿಂದ ಗಮನಿಸಬೇಕಾಗಿದ್ದದ್ದು ಅವರ ಬಲಗೈ ಹಸ್ತವನ್ನು. ಆ ಪದ್ಯದ ರಸ, ಧ್ವನಿ, ಭಾವ, ಅರ್ಥ, ಲಾಲಿತ್ಯ, ಸೌಕುಮಾರ್ಯ ಇವೆಲ್ಲವೂ ಆ ಒಂದು ಹಸ್ತದ ಮುದ್ರಾವಿನ್ಯಾಸದಿಂದಲೇ ವೇದ್ಯವಾಗುತ್ತಿತ್ತು. ಹರಿಯುವ ನೀರಿನ ಅಲೆಯ ಮೃದುವಾದ ಏರಿಳಿತಗಳು, ಮಾರುತನ ಒತ್ತಡ, ಅದರಿಂದ ಅಲೆಗಳಿಗುಂಟಾದ ಸ್ಥಿತಿ, ವನಲತೆಯ ಮನೆಗಳಲ್ಲಿ ಮಾರುತನ ಸುಳಿವು ನಲಿವುಗಳು, ಮಂದಶ್ವಸನನ ಆಗಮನ, ಇಷ್ಟನ್ನೂ ಹಸ್ತ ಮತ್ತು ಬೆರಳುಗಳ ಅಭಿನಯದಿಂದಲೇ ವ್ಯಕ್ತಪಡಿಸುತ್ತಿದ್ದರು. 'ಯಮುನಾ ನದೀ' ಎಂಬಲ್ಲಿ ದೀರ್ಘ ಸ್ವರಗಳ ನಾದಗಾಂಭೀರ್ಯ, 'ಅಮುಂಕಿ,' 'ಸೋಂಕಿ' ಎಂಬೆಡೆಗಳಲ್ಲಿ ಅಡಕವಾಗಿರುವ ನೈಜವಾದ ಗಮಕ, 'ಮಂದ' ಎನ್ನುವಾಗ ಭಾರ, ನಿಧಾನ, ಗಾಢ ಎಂಬ ಭಾವ, ಇವೆಲ್ಲವೂ ಅನುಗುಣವಾದ ಉಚ್ಚಾರಣೆಯ ನಯದಿಂದ ವ್ಯಕ್ತವಾಗುತ್ತಿದ್ದುವು.

ಒಂದು ಕಲಾಕೃತಿಯ ರಸೋತ್ಪಾದನೆಯಲ್ಲಿ ತಲ್ಲೀನರಾಗಿ ಆ ಆನಂದವನ್ನು ಅನುಭವಿಸಿ ಸುಖಪಡುವವರನ್ನು ಕಂಡರೆ ನನಗೆ ನೇರವಾಗಿ ನಾನೇ ಆ

ಅನುಭವಸುಖವನ್ನು ಪಡೆದಷ್ಟು ಸಂತೋಷವಾಗುತ್ತದೆ. ಇಂಥ ವೆಂಕಣ್ಣಯ್ಯನವರನ್ನು ನಾನು ಕಂಡದ್ದು ಮೈಸೂರು ಮಹಾರಾಜರ ಕಾಲೇಜಿನಲ್ಲಿ. ಆಗ ಅವರು ಕನ್ನಡ ಪ್ರಾಧ್ಯಾಪಕರಾಗಿದ್ದು ಯಾವುದೋ ಸಣ್ಣ ತರಗತಿಯೊಂದಕ್ಕೆ ಪಾಠ ಹೇಳುತ್ತ ಮೇಲಿನ ಪದ್ಯವನ್ನು ಓದಿ ವ್ಯಾಖ್ಯಾನ ಮಾಡುತ್ತಿದ್ದರು.

ಟಿ. ಎಸ್. ವಿ. ಅವರನ್ನು ನಾನು ಕಂಡದ್ದು ಇದೇ ಮೊದಲನೆಯ ಬಾರಿಯಲ್ಲ. ನನ್ನನ್ನು ಎಳೆತನದಿಂದಲೂ ಬಲ್ಲವರು ಅವರು. ಶಂಕರಪುರದ ಎರಡನೇ ರಸ್ತೆಯಲ್ಲಿ ಅವರ ಮನೆ. ಅವರ ಮಕ್ಕಳೂ ನಾನೂ ನನ್ನ ತಂಗಿಯರೂ ಒಂದೇ ಪ್ರಾಥಮಿಕ ಶಾಲೆಯಲ್ಲಿ ಸಮಕಾಲೀನರಾಗಿದ್ದುಕೊಂಡು ಆಟಪಾಟಗಳನ್ನಾಡಿಕೊಂಡಿದ್ದವರು; ಶಾಲೆ ಮುಗಿದ ಮೇಲೆಯೂ ರಜ ದಿನಗಳಲ್ಲಿಯೂ ಆಟಗಳಲ್ಲಿ ಸಂಗಡಿಗರಾಗಿದ್ದವರು. ಅವರ ಮನೆಯವರೆಲ್ಲ ನಮಗೂ ನಮ್ಮ ಮನೆಯವರೆಲ್ಲ ಅವರಿಗೂ ತುಂಬ ಬೇಕಾಗಿದ್ದವರು, ತುಂಬ ಬಳಕೆಯಾಗಿದ್ದವರು. ನನ್ನ ತಾಯಿ ತೀರಿಕೊಂಡ ಹೊಸದರಲ್ಲಂತೂ ವೆಂಕಣ್ಣಯ್ಯನವರು ಅವರ ಪುರಸೊತ್ತಿನ ವೇಳೆಯನ್ನೆಲ್ಲ ನನ್ನ ತಂದೆಯವರೊಡನೆಯೇ ಕಳೆಯುತ್ತಿದ್ದರೆಂದು ನನ್ನ ಜ್ಞಾಪಕ. ತಂದೆಯವರು ಬರೆದಿದ್ದ ಕೆಲವು ಪದ್ಯಕೃತಿ*ಗಳನ್ನು ರಾಗ ಜೋಡಿಸಿ ಹಾಡುತ್ತಿದ್ದದ್ದೂ ನನ್ನ ಜ್ಞಾಪಕದಲ್ಲಿದೆ. ವೆಂಕಣ್ಣಯ್ಯನವರದು ಸಣ್ಣ ದನಿ; ಇಂಪಾದ ತಂತ್ರೀನಾದದ ಕೊರಲು. ಸಂಗೀತವನ್ನು ಶಾಸ್ತ್ರೋಕ್ತವಾಗಿ ಗುರುಮುಖೇನ ಅಭ್ಯಾಸಮಾಡಿದವರಲ್ಲವೆಂದು ನನ್ನ ಭಾವನೆ. ಆದರೂ ರಾಗತಾಳಗಳ ಜ್ಞಾನ, ಮಾತುಗಳಿಗೆ ಅನುಗುಣವಾದ, ರಸವತ್ತಾದ, ಭಾವಪೂರ್ಣವಾದ ಧಾತುವನ್ನು ಹವಣಿಸುವ ಪರಿಶ್ರಮ ಧಾರಾಳವಾಗಿತ್ತು. ನಶ್ಯದ ಮೂಗಿನ ಪ್ರಭಾವ ಹಾಡಿಕೆಯಲ್ಲಿ ಪ್ರತಿಧ್ವನಿತವಾಗುತ್ತಿದ್ದಿತಾದರೂ ಅಶ್ರಾವ್ಯತೆಯನ್ನು ತಂದೊಡ್ಡುತ್ತಿರಲಿಲ್ಲ. ಒಳ್ಳೆಯ, ಘನವಾದ ಸಂಗೀತವನ್ನು ಹೇರಳವಾಗಿ ಕೇಳಿ ಅನುಭವಿಸಿ ಸಂಸ್ಕಾರಪಡೆದಿದ್ದವರು. ರಾಳ್ಳಪಲ್ಲಿ ಅನಂತಕೃಷ್ಣಶರ್ಮರ ಸಹೋದ್ಯೋಗಿಗಳು (ವಿಶ್ವವಿದ್ಯಾಲಯದಲ್ಲಿ), ಆಪ್ತರು ಎಂದು ಬೇರೆ ಹೇಳಬೇಕೆ? ಇಷ್ಟೇ ಅಲ್ಲ, ವೆಂಕಣ್ಣಯ್ಯನವರ ತಾಯಿ ಕುಮಾರವ್ಯಾಸ ಭಾರತವನ್ನು ಗಮಕಶುದ್ಧವಾಗಿ ಓದುತ್ತಿದ್ದರು. ಮನೆಗೆಲಸ ಮುಗಿದ ಮೇಲೆ ಮಧ್ಯಾಹ್ನದ

---

*ಇವು ಮೊದಲು ಬಿಡಿಬಿಡಿಯಾಗಿ ಅಚ್ಚಾಗಿ ಕೊನೆಗೆ 'ನಿವೇದನ'ದಲ್ಲಿ ಪ್ರಕಟವಾಗಿವೆ.

ವೇಳೆಗಳಲ್ಲಿ ಈ ಪ್ರಸಂಗ ನಡೆಯುತ್ತಿತ್ತು. ನನ್ನ ಅಜ್ಜಿ, ಅತ್ತೆಯವರೊಂದಿಗೆ ನಾನೂ ಅವರ ಮನೆಗೆ ಹೋಗಿ ಭಾರತಪಠನವನ್ನು ಕೇಳಿಬರುತ್ತಿದ್ದೆ. ನನಗೆ ನಾರಣಪ್ಪನ ಭಾರತ ಮೊದಲು ಪರಿಚಯವಾದದ್ದು ಹೀಗೆ, ದೂರ್ವಾಸರ ಆತಿಥ್ಯದ ಕತೆಯನ್ನು ಮೊದಲನೇ ಸಲ ಕೇಳಿದ್ದು ಹೀಗೆ. ಸಂಗೀತ ಸಾಹಿತ್ಯ ಗಳನ್ನು ಅನುಭವಿಸಿ ತಾವೂ ಸಂತೋಷಪಟ್ಟು ಇತರರನ್ನೂ ಅನುಭವಿಸುವಂತೆ ಆಸರೆಗಳನ್ನೊದಗಿಸುವುದು ವೆಂಕಣ್ಣಯ್ಯನವರ ಮನೆತನದ ವೈಶಿಷ್ಟ್ಯಗಳ ಲ್ಲೊಂದೆಂದು ನಾನು ಭಾವಿಸಿದ್ದೇನೆ.

ಸಾಹಿತ್ಯ, ಲಲಿತಕಲೆ, ಮೊದಲಾದವುಗಳ ರಸಾನುಭವಕ್ಕೆ ಹಣದ ಒತ್ತಾಸೆ ಅಧಿಕವಾಗಿರಬೇಕೆಂಬ ಭಾವನೆ ನನ್ನಲ್ಲಿತ್ತು. (ಈಗಲೂ ಅಪರೂಪ ವಾಗಿ ಒಂದೊಂದು ಸಲ ಸುಳಿಯುವುದುಂಟು). ವೆಂಕಣ್ಣಯ್ಯನವರು ಶ್ರೀಮಂತ ಮನೆತನದಲ್ಲಿ ಹುಟ್ಟಿದವರೇನೂ ಅಲ್ಲ; ಸಾವಿರಾರು ರೂಪಾಯಿ ವರಮಾನ ಪಡೆದವರಲ್ಲ; ಸಂಸಾರದ ಕಷ್ಟಕಾರ್ಪಣ್ಯಗಳಿಂದ ಹೊರಗಾದವರಲ್ಲ; ಕಾಯಿಲೆ ಕಸಾಲೆಗಳಿಲ್ಲದ ಮನೆ ಅವರದಲ್ಲ. ಅವರು ಇವುಗಳನ್ನು ಎದುರಿಸದೆ ನಿವೃತ್ತಿ ಮಾರ್ಗವನ್ನವಲಂಬಿಸಿದವರೂ ಅಲ್ಲ. ಇವೆಲ್ಲವನ್ನೂ ತಾಳಿಕೊಂಡು, ಯಾರು ಯಾರಿಗೆ ಏನೇನು ಒಳಿತನ್ನು ಮಾಡುವುದು ಅವರ ಧರ್ಮವೆಂದು ವಿಧಿಸಿಕೊಂಡಿ ದ್ದರೋ ಅಷ್ಟನ್ನೂ ಯಥಾಶಕ್ತಿ (ಕೆಲವು ಸಲ ಶಕ್ತಿಮೀರಿಯೇ) ಶುದ್ಧಮನಸ್ಸಿ ನಿಂದ ಮಾಡಿದವರು. ಇಂಥ ಸನ್ನಿವೇಶಗಳ ಒತ್ತಡದಲ್ಲಿಯೂ ಅವರ ರಸಿಕ ಶೀಲತೆ ಕುಂದಲಿಲ್ಲ. ತಾವೂ ಸವಿದು ನೆರೆಯವರನ್ನೂ ಸವಿಯಗೊಡುತ್ತಿದ್ದರು.

ಬಿ. ವೆಂಕೋಬರಾಯರ ಮನೆಯಲ್ಲಿ ಒಂದು ಸಂಜೆ ರಾಳ್ಳಪಲ್ಲಿ ಅನಂತ ಕೃಷ್ಣಶರ್ಮರ ಹಾಡುಗಾರಿಕೆ ನಡೆಯಿತು. ನೆರೆದಿದ್ದವರು ಒಂದು ಹತ್ತು ಜನ, ಎಲ್ಲರೂ ಇವರಿಬ್ಬರಿಗೂ ಆಪ್ತರು, ಮೇಲಾಗಿ ರಸಿಕರು. ಇವರ ಪೈಕಿ ವೆಂಕಣ್ಣಯ್ಯನವರೂ ಒಬ್ಬರು. ಸ್ವಯಂ ರಸಿಕರೂ ಸಾಹಿತ್ಯ ಪಂಡಿತರೂ ಪ್ರತಿಭಾವಂತರೂ ಆದ ಸಂಗೀತಗಾರರಿಗೆ ಸಹೃದಯರಾದ ರಸಿಕವೃಂದ ದೊರೆ ತಾಗ ವಿಕಾಸವಾಗುವ ರಸಸಮಾವೇಶ ಇನ್ನೆಲ್ಲಿ ಸಾಧ್ಯ? ಅನಂತಕೃಷ್ಣಶರ್ಮರು ತಮ್ಮ ಸ್ವಂತ ಕೃತಿಯಾದ 'ಮಮ ಮನಸಿ ಸದಾ ವಿಹರ' ಎಂಬ ಹಮೀರ ಕಲ್ಯಾಣಿರಾಗದ ವರ್ಣದಿಂದ 'ಕಚೇರಿ' ಆರಂಭಿಸಿದರು. ವಾಗ್ಗೇಯಕಾರರ ಹೃದಯವನ್ನು ಭೇದಿಸಿಕೊಂಡು ಆ ಅಂತರಾಳದಲ್ಲಿ ಅಡಗಿರುವ ಅಮೃತವನ್ನು

ಆಸ್ವಾದನೆ ಮಾಡುವುದೂ ಮಾಡಿಸುವುದೂ ಅನಂತಕೃಷ್ಣಶರ್ಮರ ವಿಶೇಷ ವ್ಯಕ್ತಿತ್ವ. (ಈ ಪೂಜ್ಯರಿಗೆ ನಾನು ಯೋಗ್ಯತಾಪತ್ರ ಕೊಟ್ಟು ಅಧಿಕಪ್ರಸಂಗಿಯಾಗುವುದಕ್ಕೆ ಪ್ರಯತ್ನಪಡುತ್ತಿದ್ದೇನೆಂದು ಯಾರೂ ಭಾವಿಸುವುದಿಲ್ಲವೆಂದು ನಂಬಿದ್ದೇನೆ). 'ರಾಮಬಾಣ', 'ಮನಸು ನಿಲ್ಪ ಶಕ್ತಿ', 'ಮೀನಾಕ್ಷಿ ಮೇಮುದಂ', 'ಶಂಕರಿ ಶಂ ಕುರು', 'ಶಂಕರಿ ನೀವೆ' ಮೊದಲಾದ ಕೃತಿರತ್ನಗಳನ್ನು ಹಾಡಿದರು; ಕ್ಷೇತ್ರಯ್ಯನವರ ಎರಡು ಪದಗಳನ್ನು ಹಾಡಿದರು; 'ಅಥ ಕಥಮಪಿ ಯಾಮಿನೀಂ' ಶ್ಲೋಕವನ್ನೂ ಆದನ್ನು ಹಿಂಬಾಲಿಸುವ 'ರಜನಿಜನಿತಗುರುಜಾಗರ' ಎಂಬ ಅಷ್ಟಪದಿಯನ್ನೂ ರಾಗಮಾಲಿಕೆಯಲ್ಲಿ ಹಾಡಿದರು. ಎಲ್ಲರೂ ದಿವ್ಯ ಸುಧೆಯನ್ನು ಈಂಟಿದರು. ಕೆಲವರು ನಡುನಡುವೆಯೇ 'ಭಲೆ' 'ಭೇಷ್' ಎಂದು ರಸಾಭಾಸಕ್ಕೆಡೆಗೊಟ್ಟು ತಮ್ಮ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸುತ್ತಿದ್ದರು. ವೆಂಕಣ್ಣಯ್ಯನವರು ಅನುಭವಿಸಿದ ಮಾದರಿಯೇ ಬೇರೆ. ಪದ್ಮಾಸನ; ಮುಚ್ಚಿದ ಕಣ್ಣುಗಳು; ಎದುರಿನಲ್ಲಿ ಕೈಗೆಟುಕುವಂತೆ ನಶ್ಯದ ಡಬ್ಬಿ, ಕರವಸ್ತ್ರ; ಬಲಗೈ ಹಸ್ತದಲ್ಲಿ ಯೋಗಮುದ್ರೆ, ಚಿಟಿಕೆಯಲ್ಲಿ 'ಜ್ಞಾನಚೂರ್ಣ'; ಎಡಗೈ ಬೆರಳುಗಳಿಂದ ಆಗಾಗ ಅಪರೂಪವಾಗಿ ಕೃತಿಲಯ ವಿನ್ಯಾಸದ ಅನುಕರಣ; ತುಟಿಯ ಮೇಲೆ ಆತ್ಮೀಯವಾದ, ರಸ ಭಾವ ಆನಂದ ಗರ್ಭಿತವಾದ ಸುಳಿನಗು; ಬಾಯಿಂದ ಒಂದು ಮಾತಿಲ್ಲ. ಶ್ರೋತೃಗಳಿಗೆ ಸಂಗೀತ ಸುಧೆಯ ಆನಂದ ಒಂದು ಕಡೆ, ಸಂಗೀತಸುಧೆಯನ್ನು ರಸಿಕತೆಯಿಂದ ಅನುಭವಿಸುತ್ತಿರುವವರನ್ನು ಕಾಣುವ ಆನಂದ ಒಂದು ಕಡೆ. ಹೀಗಿದ್ದಿತು.



ಲಲಿತಕಲೆಗಳ ರಸಾಸ್ವಾದನೆಯಲ್ಲಿ ವೆಂಕಣ್ಣಯ್ಯನವರು ಎಷ್ಟು ರಸಿಕರೋ, ಇತರ ಲೌಕಿಕ ವಸ್ತುಗಳಲ್ಲಿಯೂ ಹಾಗೆಯೇ ಇರುತ್ತಿದ್ದರೆಂಬುದಕ್ಕೆ ಒಂದು ಸಣ್ಣ ಉದಾಹರಣೆಯನ್ನು ಕೊಡಬಹುದು. ನನ್ನ ತಂದೆಯವರು ಕರ್ಣಾಟಕ

ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾಗಿದ್ದ ಕಾಲದಲ್ಲಿ, ಅದರ ಕಾರ್ಯಕ್ಕೆ ಸಂಬಂಧಿಸಿದ ಕೆಲವು ಮಾತುಕತೆಗಳು ಪೂರ್ವಭಾವಿಯಾಗಿ ನಮ್ಮ ಮನೆಯಲ್ಲಿಯೇ ನಡೆಯುತ್ತಿದ್ದವು. ಸಾಮಾನ್ಯವಾಗಿ ಎ. ಆರ್. ಕೃಷ್ಣಶಾಸ್ತ್ರಿಗಳು, ವೆಂಕಣ್ಣಯ್ಯನವರು, ವಿ. ಸೀತಾರಾಮಯ್ಯನವರು, ಆಗಾಗ್ಗೆ ಡಿ. ಸಿ. ಸುಬ್ಬರಾಯಪ್ಪನವರು, ಸಿ. ಕೆ. ವೆಂಕಟರಾಮಯ್ಯನವರು ಸೇರುತ್ತಿದ್ದರು. ಆ ದಿನ ಬಂದಿದ್ದವರು ವೆಂಕಣ್ಣಯ್ಯನವರು ಮತ್ತು ಕೃಷ್ಣಶಾಸ್ತ್ರಿಗಳು. ಮಧ್ಯಾಹ್ನ ಮೂರು ಗಂಟೆಗೆ ಮಾತುಕತೆ ಆರಂಭಿಸಿದರು. ಸಂಜೆ ಆರು ಗಂಟೆಯಾದರೂ ಯಾವುದೋ ಒಂದು ವಿಷಯದಲ್ಲಿ ನಿರ್ಧಾರಕ್ಕೆ ಬಂದಿರಲಿಲ್ಲವೆಂದು ನನ್ನ ಊಹೆ. ಕೃಷ್ಣಶಾಸ್ತ್ರಿಗಳು —"ಏನೋಪ್ಪ! ನನಗೊಂದೂ ತೋರುವುದಿಲ್ಲ. ಮುಂದಿನ ವಾರ ಬೇಕಾದರೆ ತಿರುಗಿ ಮಾತನಾಡೋಣ." ಎಂದು ಖಂಡಿತವಾಗಿ ಹೇಳಿಬಿಟ್ಟರು.

ಆ ದಿನ ನಮ್ಮ ಮನೆಯಲ್ಲಿ ಏನೋ ವಿಶೇಷ. ನನ್ನ ಅಜ್ಜಿ 'ಪಟ್ಟೆ'ವ್ರತ ಆಚರಿಸಿದ ದಿನವೆಂದು ಜ್ಞಾಪಕ. ಒಳಗಡೆ ಬೆಲ್ಲದ ದೋಸೆ, ಬಾಳೆಹಣ್ಣಿನ ಶೀಖರಣೆ, ಬೇಲದಹಣ್ಣಿನ ಪಾನಕ ಆಗತಾನೆ ತಯಾರಾಗಿತ್ತು. ಅತಿಥಿಗಳಿಗೆಂದು ಪಾತ್ರೆಗಳಲ್ಲಿ ಹಾಕಿ ಅವರೆದುರಿಗಿಟ್ಟೆವು. ಇಷ್ಟು ಹೊತ್ತಿಗೆ ತಾನೆ ಕೃಷ್ಣಶಾಸ್ತ್ರಿಗಳ ಬಾಯಿಂದ ಮೇಲಿನ ಮಾತುಗಳು ಹೊರಬಂದಿದ್ದವು. ವೆಂಕಣ್ಣಯ್ಯನವರು "ಇಲ್ಲಿ ನೋಡು, ಕೃಷ್ಣ, ಹಾಗೆಲ್ಲ ಹೇಳಿದರೆ ಪ್ರಯೋಜನವೇನು? ಕಾರ್ಯ ಸಾಧಿಸಿದಂತಾಯಿತೊ? ಇಂದ ತಗೊ, ಒಂದು ಚೂರು ದೋಸೆ ಮುರಿ, ಅದರೊಂದಿಗೆ ಸ್ವಲ್ಪ ಶೀಖರಣೆಯನ್ನೂ ತೆಗೆದುಕೊ, ಬಾಯೊಳಕ್ಕೆ ಹಾಕಿಕೊ; ತಿಂದಾದ ಬಳಿಕ ಒಂದು ಗುಟುಕು ಪಾನಕ ಕುಡಿ. ಇನ್ನೊಂದು ಚೂರು ದೋಸೆ, ಶೀಖರಣೆ, ಪಾನಕ, ಹೀಗೆ ಮಾಡಿ ಎದುರಿನಲ್ಲಿರುವುದನ್ನು ಮುಗಿಸು. ಅಷ್ಟುಹೊತ್ತಿಗೆ ಮನಸ್ಸು ತಿಳಿಯಾಗುತ್ತದೆ, ಉಪಾಯ ಹೊಳೆಯುತ್ತದೆ." ಎಂದು ಹೇಳಿ, ಆ ವೇಳೆಗೆ ಎದ್ದುನಿಂತಿದ್ದ ಕೃಷ್ಣಶಾಸ್ತ್ರಿಯವರನ್ನು ಕೈಹಿಡಿದು ಕುರ್ಚಿಯ ಮೇಲೆ ಕುಳ್ಳಿರಿಸಿದರು.

ವೆಂಕಣ್ಣಯ್ಯನವರು ಕೋಪಗೊಂಡದ್ದನ್ನು ನಾನು ಒಂದು ಸಲವಾದರೂ ಕಂಡಿಲ್ಲ. "ವೆಂಕಣ್ಣಯ್ಯನವರಿಗೆ ಕೋಪಬರುತ್ತಿತ್ತೆ?" ಎಂದು ನನಗಿಂತಲೂ ಹೆಚ್ಚಾಗಿ ಅವರನ್ನು ತಿಳಿದಿದ್ದ ಒಂದಿಬ್ಬರನ್ನು ಕೇಳಿದೆ. ಅವರೂ "ಛೆ ಛೆ! ಅವರು ಕೋಪಗೊಂಡದ್ದನ್ನೇ ಕಾಣೆವು" ಎಂದುಬಿಟ್ಟರು. ಅಪರೂಪವಾಗಿ

ಬರುತ್ತಿದ್ದಿತೋ ಏನೋ; ಅಂಥ ಸಮಯಗಳಲ್ಲಿ ಅವರು ದನಿ ಎತ್ತಿ ಕೂಗಾಡುತ್ತಿದ್ದವರಲ್ಲವೆಂದೂ, ಕೋಪಬಂದರೆ ಅದನ್ನು ಒಡನೆಯೆ ನುಂಗಿಕೊಂಡು ಇಂಗಿಸಿಕೊಂಡುಬಿಡುವ ಸ್ವಭಾವ ಅವರದೆಂದೂ ನನಗನ್ನಿಸುತ್ತದೆ. ಅವರು 'ಕೆರಳಿ'ದ್ದನ್ನು ನಾನು ಕಂಡದ್ದು ಒಂದೇ ಸಲ.

ಕರ್ಣಾಟಕ ಸಾಹಿತ್ಯಪರಿಷತ್ತಿನ ಮೊದಮೊದಲಿನ ವಸಂತಸಾಹಿತ್ಯೋತ್ಸವಗಳಲ್ಲೊಂದು. ಜನಸಂದಣಿ ಅಸಾಧ್ಯ, ಸಭಾಂಗಣ ಕಿಕ್ಕಿರಿದು ನೆರೆಯುತ್ತಿತ್ತು. ಸಂಸ್ಕೃತ ಪಂಡಿತರು, ಕನ್ನಡ ಪಂಡಿತರು, ಶಾಲಾ ಉಪಾಧ್ಯಾಯರು, ಕಾಲೇಜು ಅಧ್ಯಾಪಕರು, ವಿದ್ಯಾರ್ಥಿಗಳು, ಕಸುಬುದಾರರು, ವ್ಯಾಪಾರಿಗಳು, ಬಗೆಬಗೆಯ ಅಂತಸ್ತಿನವರು, ಬಗೆಬಗೆಯ ಕೋಮುಗಳವರು, ಎಲ್ಲರೂ ಒಂದೇ ಉತ್ಸಾಹದಿಂದ ಕಲೆಯುತ್ತಿದ್ದರು. ಈ ಉತ್ಸವದಲ್ಲೊಂದು ದಿನ ಆಧುನಿಕ ಕನ್ನಡ ಸಾಹಿತ್ಯದ ವಿಷಯವಾಗಿ ವೆಂಕಣ್ಣಯ್ಯನವರ ಭಾಷಣವೇರ್ಪಟ್ಟಿತ್ತು. ವಿಷಯಪೋಷಣೆಗಾಗಿ "ಅಶ್ವತ್ಥಾಮನ್", "ಚೋಮನ ದುಡಿ", ವಿ. ಸೀ. ಅವರ "ಅಂದಿನಾ ದೇವರುಗಳೆಲ್ಲ ಮಡಿದುರುಳಿಹರು" ಎಂಬ ಕವನ (ಬಹುಶಃ ಇನ್ನೊಂದೆರಡು ಉದಾಹರಣೆಗಳು), ಇವುಗಳನ್ನೆತ್ತಿಕೊಂಡು ಮಾತನಾಡಿದರು. "ಅಶ್ವತ್ಥಾಮನ್" ನಾಟಕದ ವಿಷಯವಾಗಿ ಅವರು ವಿವರಣೆಕೊಡುತ್ತಿದ್ದಾಗ ಅಲ್ಲಿದ್ದ ಹಳೆಯಕಾಲದ ಪಂಡಿತರ ಮುಖಗಳನ್ನು ನೋಡಬೇಕಾಗಿತ್ತು. ಅದೇನು ವ್ಯಂಗ್ಯಕುತೂಹಲ, ಕೊಂಕುನಗು, ಪಿಸುಮಾತು, ತಮ್ಮತಮ್ಮಲ್ಲಿಯೇ ದೃಷ್ಟಿ ಹಾರಿಸುತ್ತಿದ್ದ ಅದೇನು ಭಾವಗರ್ಭಿತವಾದ ಒಸಗೆ! ಭಾಷಣ ನಡೆಯುತ್ತಿದ್ದಾಗಲೇ ಒಂದೆರಡು ಅಡಚಣೆತಲೆಗಳು ಎದ್ದುನಿಂತು ಪ್ರಶ್ನೆಹಾಕಲೆಳಸಿದವು. "ಭಾಷಣ ಮುಗಿದ ಮೇಲೆ ಪ್ರಶ್ನೆಹಾಕುವುದಕ್ಕೆಂದೇ ಪ್ರತ್ಯೇಕ ಕಾಲವನ್ನು ಮೀಸಲಾಗಿಟ್ಟದ್ದೇವೆ. ದಯವಿಟ್ಟು ಭಾಷಣ ಮುಗಿಯುವ ವರೆಗೂ ಅವಕಾಶ ಕೊಡಿ" ಎಂದು ಸಭಾಧ್ಯಕ್ಷರು ಕೋರಿದರು. ಪ್ರಯೋಜನವಾಗಲಿಲ್ಲ. ಕೊನೆಗೆ ಅಧ್ಯಕ್ಷರು "ಸಭಾಮರ್ಯಾದೆಯೆಂಬುದೊಂದಿದೆ. ಸಭೆಗೆ ಅವಮರ್ಯಾದೆ ಮಾಡಬೇಡಿ" ಎಂದು ಖಂಡಿತ ನುಡಿದ ಬಳಿಕ ವೆಂಕಣ್ಣಯ್ಯನವರ ಭಾಷಣ ಮುಂದುವರಿಯಿತು, ಮುಗಿಯಿತು. "ಅಶ್ವತ್ಥಾಮನ್" ಪ್ರಕಟವಾದಂದು ಹೊಗೆಯಾಡಿ ಹೊತ್ತಿಕೊಂಡು ಉರಿಯೆದ್ದು ಕಾಲಕ್ರಮೇಣ ಆರಿದ್ದ ಕೊಳ್ಳಿ ಇಂದು ಪುನಃ ಹೊಗೆಯಾಡಿತು. ಪ್ರಶ್ನೆಗಳು ದಳ್ಳುರಿಯಂತೆ ಮೇಲೆದ್ದವು.

"ನಮ್ಮ ಭಾರತ ಪುರಾಣಗಳ ಅಶ್ವತ್ಥಾಮ ಚಿರಂಜೀವಿ. ಈ ನಾಟಕದಲ್ಲಿ ಅವನು ಆತ್ಮಹತ್ಯ ಮಾಡಿಕೊಂಡಂತೆ ಚಿತ್ರಿತವಾಗಿದೆ. ಇದು ಸಂಪ್ರದಾಯ ವಿರುದ್ಧ. ಚಿರಂಜೀವಿ ಸಾಯುವುದೆಂದರೇನು? ಇದೇನು ಅಪಾರ್ಥಕಲ್ಪನೆ? ಈ ಮಾರ್ಪಾಟಿಗೆ ಆವಶ್ಯಕತೆಯೇನಿತ್ತು?" ಇತ್ಯಾದಿ. ಈ ಪ್ರಶ್ನೆಗಳನ್ನೇ ಹತ್ತು ಜನ ಹತ್ತುವಿಧಗಳಲ್ಲಿ ಚರ್ವಿತಚರ್ವಣವಾಗಿ ಕೇಳಿದರು. ಒಬ್ಬರಾದಮೇಲೊಬ್ಬರು ಕ್ರಮವಾಗಿ ಈ ಪ್ರಶ್ನೆಗಳನ್ನು ಕೇಳಲಿಲ್ಲ. ಒಬ್ಬರು ಕೇಳಿದ ಪ್ರಶ್ನೆಗೆ ವೆಂಕಣ್ಣಯ್ಯನವರು ತಾಳ್ಮೆಯಿಂದ ಸಮಾಧಾನಕೊಡುವುದರೊಳಗಾಗಿಯೇ ಇನ್ನೊಬ್ಬರೆದ್ದು, ಕೇಳಿದ ಪ್ರಶ್ನೆಯನ್ನೇ ಇನ್ನೊಂದು ವಿಧದಲ್ಲಿ ಕೇಳುತ್ತಿದ್ದರು. ಪ್ರಶ್ನೆ ಹಾಕುವುದರಲ್ಲಿ ಅವರಿಗಿದ್ದ ಹುಮ್ಮಸ್ಸು ವೆಂಕಣ್ಣಯ್ಯನವರು ಕೊಡುವ ಸಮಾಧಾನವನ್ನು ಕೇಳುವುದರಲ್ಲಿರಲಿಲ್ಲವೆಂಬುದು ವ್ಯಕ್ತವಾಗುತ್ತಿತ್ತು. ಕೊನೆಗೆ ವೆಂಕಣ್ಣಯ್ಯನವರು ದವಡೆ ಬಿಗಿದರು; ಮಿತವಾಗಿ ಹಲ್ಲುಕಚ್ಚಿದರು; ಚಿಟಿಕೆಯಲ್ಲಿದ್ದ ನಶ್ಯದ ಪುಡಿಯನ್ನು ಒದರಿ, ಎರಡು ಕೈಗಳನ್ನೂ ಬಲವಾಗಿ ಉಜ್ಜಿಕೊಂಡರು; ಮೇಜನ್ನೊಂದು ಸಲ ಕುಟ್ಟಿ "ಧೃಷ್ಟದ್ಯುಮ್ನ, ಯುಧಾಮನ್ಯು ಮೊದಲಾದ ನಿರಪರಾಧಿಗಳನ್ನು ಕಾರಣವಿಲ್ಲದೆ ಮೋಸದಿಂದ ಕೊಂದ ಆ ಪಾಪಿ ಅಶ್ವತ್ಥಾಮ ಚಿರಂಜೀವಿಯಾಗಿರಬೇಕಾಗಿತ್ತೇನು? ಆ ಕೊಲೆಕಡುಗ ಬದುಕಿರಬೇಕಿತ್ತೇನು? ಇನ್ನೇನೇನು ಹೀನಕೃತ್ಯಗಳನ್ನು ಮಾಡುವುದಕ್ಕಾಗಿ ಆ ಪಾಪಿ ಬದುಕಿದ್ದಿರಬೇಕಾಗಿತ್ತು?" ಎಂದರು. (ಗರ್ಜಿಸಲಿಲ್ಲ!) ಸಭೆಯ ಅಲ್ಲೋಲ ಕಲ್ಲೋಲ ಮಾಯವಾಯಿತು, ಸೂಜಿ ಬಿದ್ದರೆ ಶಬ್ದ ಕೇಳುವಷ್ಟು ನುಟ್ಟಿಗೆ ಶಾಂತವಾಯಿತು.

ಈ ಪ್ರಕರಣ ವೆಂಕಣ್ಣಯ್ಯನವರ ಅನುತಾಪದ ದೃಷ್ಟಾಂತವೆಂದೇ ನನ್ನ ಅಭಿಪ್ರಾಯ. "ಪಂಡಿತರೆಂದೆನಿಸಿಕೊಂಡವರಿಗೆ ಆಧುನಿಕ ಸಾಹಿತ್ಯದ ತಿಳಿವಳಿಕೆಯೇ ಬೇಡವಾಗಿದೆಯಲ್ಲ; ತಿಳಿಸುವವರಿದ್ದರೂ ಅರಿವು ತಮಗೆ ಬೇಡವೆನ್ನುತ್ತಾರಲ್ಲ. ವಿಷಯವನ್ನು ತಿಳಿದುಕೊಂಡು ಬೇಕಾದರೆ ಅಭಿಪ್ರಾಯ ಭೇದವಿಟ್ಟುಕೊಳ್ಳಲಿ; ತಿಳಿದುಕೊಳ್ಳದೆಯೇ ಮೊಂಡುತನ ಹಿಡಿಯುತ್ತಿದ್ದಾರೆಯಲ್ಲ" ಎಂಬ ಅನುತಾಪವೇ ವೆಂಕಣ್ಣಯ್ಯನವರ ಮೇಜಿನ ಕುಟ್ಟಿನಲ್ಲಿ ಅಡಕವಾಗಿದ್ದ ಅರ್ಥವೆಂದು ನನ್ನ ನಂಬಿಕೆ.

ಬಿ. ಎಂ. ಶ್ರೀ.

'ಮರ್ಚೆಂಟ್ ಆಫ್ ವೆನಿಸ್' ನಾಟಕವನ್ನು ನಮಗೆ ಪಾಠ ಹೇಳುತ್ತಿದ್ದವರು ಬಿ. ಎಂ. ಶ್ರೀಕಂಠಯ್ಯನವರು. ಆ ತರಗತಿಯಲ್ಲಿದ್ದವರು ಸುಮಾರು ೨೦೦ ಮಂದಿ ವಿದ್ಯಾರ್ಥಿಗಳು ಸಾಧಾರಣವಾಗಿ ನಿಶ್ಶಬ್ದವಾಗಿಯೇ ಇರುತ್ತಿದ್ದರಾದರೂ ಕೆಲವು ಸಲ ಸ್ವಲ್ಪ ಗೊಂದಲಕ್ಕೆಡೆಗೊಡುತ್ತಿದ್ದರು. ಶ್ರೀಯವರು ಆಂಟೋನಿಯೊ ಪಾತ್ರವಿಮರ್ಶೆಯನ್ನು ತೆಗೆದುಕೊಂಡ ಸಂದರ್ಭಗಳಲ್ಲಿ ಗುಸುಗುಂಪಲು ಆರಂಭವಾಗಿ ಪಾಠ ಭಂಗವಾಗುತ್ತಿತ್ತು. ಹಿಂಬದಿಯ ಬೆಂಚುಗಳಿಂದ ಈ ಅಲೆ ಏಳುತ್ತಿತ್ತು. ಆ ಬೆಂಚುಗಳಲ್ಲಿ ಕುಳಿತುಕೊಳ್ಳುತ್ತಿದ್ದವರೆಲ್ಲ ಸಾಮಾನ್ಯವಾಗಿ ಎರಡು ಮೂರು ವರ್ಷ 'ಘುಂಕಿ' ಹೊಡೆದ ಅನುಭವಸ್ಥರು, ಮತ್ತು ಸಯನ್ಸ್ ಆನರ್ಸ್ ತರಗತಿಗಳವರು. ನಿಜ ಹೇಳಬಹುದಾದರೆ, ಅಲೆಯೆಬ್ಬಿಸುವುದಕ್ಕೆ ಕಾರಣರಾದವರು 'ಘುಂಕಿ' ಹೊಡೆದವರು; ಆನರ್ಸ್ ವಿದ್ಯಾರ್ಥಿಗಳಲ್ಲ. (ನಾನೂ ಇವರ ಪೈಕಿಯೇ.)

ಆನರ್ಸ್ ತರಗತಿಯವರು ಹಿಂಬದಿಯ ಬೆಂಚುಗಳಲ್ಲಿ ಕುಳಿತುಕೊಳ್ಳುವುದಕ್ಕೆ ಅನಿವಾರ್ಯವಾದ ಕಾರಣವೊಂದಿತ್ತು. ತಮ್ಮ ತಮ್ಮ ಡಿಪಾರ್ಟ್‌ಮೆಂಟುಗಳಲ್ಲಿ ವಿಹಿತವಾಗಿದ್ದ ಪೀರಿಯಡ್‌ಗಳನ್ನು ಮುಗಿಸಿಕೊಂಡು ಗಣಿತಶಾಸ್ತ್ರ ಭವನದಲ್ಲಿ ನಡೆಯುತ್ತಿದ್ದ ಇಂಗ್ಲಿಷ್ ತರಗತಿಗೆ ಹೋಗಬೇಕಾಗಿತ್ತು. ಅಲ್ಲಿಗೆ ತಲಪುವ ವೇಳೆಗೆ ಬಿ. ಎಸ್‌ಸಿ., ತರಗತಿಯ ೧೫೦–೧೬೦ ಮಂದಿ ಮುಂದಿನ ಬೆಂಚುಗಳಲ್ಲಿ ಕೂತುಬಿಟ್ಟಿರುತ್ತಿದ್ದರು; ನಿರ್ವಾಹವಿಲ್ಲದೆ ನಾವು ಹಿಂಬದಿಯ ಬೆಂಚುಗಳನ್ನು ಆಕ್ರಮಿಸಿಕೊಳ್ಳಬೇಕಾಗುತ್ತಿತ್ತು. ನಮಗಿಂತಲೂ ಸ್ವಲ್ಪ ಮುಂಚೆ ಬರುತ್ತಿದ್ದ 'ಘುಂಕಿ' ತಂಡದವರು ಹಿಂಬದಿಯ ಬೆಂಚುಗಳನ್ನೇ ಹಿಡಿಯುತ್ತಿದ್ದರಾದ ಕಾರಣದಿಂದ, ಇವರೂ ಬಿಟ್ಟ ಜಾಗ ಮಾತ್ರ ನಮಗೆ ಸಿಕ್ಕುತ್ತಿತ್ತು. ಒಂದೊಂದು ಸಲ ನಾವು ತರಗತಿಯೊಳಕ್ಕೆ ಕಾಲಿಡುವ ಹೊತ್ತಿಗಾಗಲೇ ಪಾಠ ಪ್ರಾರಂಭವಾಗಿದ್ದದ್ದೂ ಉಂಟು. ಶ್ರೀಯವರು ವೈಯಕ್ತಿಕವಾಗಿಯೂ ಸಾಮೂಹಿಕವಾಗಿಯೂ ಆನರ್ಸ್ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಕಟುವಾಗಿಯೇ



ಬಿ. ಎಂ. ಶ್ರೀ.

ಟೀಕಿಸುತ್ತಿದ್ದರು; "ಹೊತ್ತಾಗಿ ಬರುವುದಾದರೆ ತರಗತಿಗೆ ಬರುವುದೇ ಬೇಡ" ಎಂದೂ ಹೇಳಿದ್ದರು. ಒಟ್ಟಿನಲ್ಲಿ ಸಯನ್ಸ್ ಆನರ್ಸ್ ವಿದ್ಯಾರ್ಥಿಗಳನ್ನು ಕಂಡರೆ ಸ್ವಲ್ಪ 'ಹಾಗೆಹಾಗೆಯೇ'. ಅನೇಕ ಸಲ ನಮ್ಮನ್ನು ತರಗತಿಯಲ್ಲಿ "Well! You are the picked intelligentsia of this college!" ಎಂದು ವ್ಯಂಗ್ಯನುಡಿಯುತ್ತಿದ್ದರು.

ಆಂಟೋನಿಯೊ ಪಾತ್ರವಿಶ್ಲೇಷಣೆಯಲ್ಲಿ ಶ್ರೀಯವರು ವಾದಮಾಡುತ್ತಿದ್ದದ್ದು ಹೀಗೆ: "ಈತ ಜಂಟ್ಲ್‌ಮನ್, ಸುಸಂಸ್ಕೃತ, ಕುಲೀನ, ಸಂಪನ್ನ, ವಿನಯಶೀಲ, ಯಾರಿಗೂ ಅಪಚಾರ ಮಾಡಿದವನಲ್ಲ, ಕಟುಮಾತುಗಳನ್ನಾಡಿದವನಲ್ಲ," ಇತ್ಯಾದಿ. ಈ ತೆರನಾದ ಅಭಿಪ್ರಾಯ ನಮ್ಮಲ್ಲಿ ಅನೇಕರಿಗೆ ಒಪ್ಪಿಗೆಯಾಯಿತೆನ್ನುವುದರಲ್ಲಿ ಸಂದೇಹವಿಲ್ಲ. ಬೇರೆ ಯಾರ ಬಾಯಿಂದಲೂ ನಾವು ಈ ನಾಟಕವನ್ನು ಅಭ್ಯಾಸಮಾಡದೆ ಇದ್ದದ್ದರಿಂದ ನಮಗೆ ಭಿನ್ನಾಭಿಪ್ರಾಯದ ಹಂತಗಳು ತಿಳಿದಿರಲಿಲ್ಲ. 'ಘುಂಕಿ' ಹೊಡೆದವರಿಗೆ ಹಾಗಲ್ಲ. ಬೇರೆ ಬೇರೆ ಕಾಲೇಜುಗಳ ತೀರ್ಥಗಳಲ್ಲಿ ಮಿಂದು, ವಿವಿಧ ಕೈವಾಡಗಳ ಊಟಗಳನ್ನು ಉಂಡು, ಆದರೂ ವಿಶ್ವವಿದ್ಯಾಲಯದ ಸ್ವರ್ಗದ್ವಾರವನ್ನು ದಾಟುವುದಕ್ಕೆ ಬೇಕಾದ ಅರ್ಹತೆಯನ್ನು ಪಡೆಯದೆ ಪುನರ್ಜನ್ಮವೆತ್ತಿ, ಸೆಂಟ್ರಲ್ ಕಾಲೇಜಿನೊಂದಿಗಿದ್ದ ಋಣಾನುಬಂಧವನ್ನೂ ತೀರಿಸಿಕೊಳ್ಳುವ ಸಲುವಾಗಿ ಬಂದಿದ್ದ ಯಾತ್ರಿಕರಿಗೆ ಶ್ರೀಯವರ ವಾದಸರಣಿ ರುಚಿಸಲಿಲ್ಲ. ಷೈಲಾಕಿನ ಹೀನ ನಡವಳಿಕೆಗಳಿಗೆ ಆಂಟೋನಿಯೋವೇ ಕಾರಣನೆಂದೂ, ಆಂಟೋನಿಯೊ ಅನೇಕ ವೇಳೆ ಷೈಲಾಕಿನೊಂದಿಗೆ ನಯದಿಂದ ನಡೆದುಕೊಳ್ಳಲಿಲ್ಲವೆಂದೂ, ಸಾಲಿಗನು ಹಣ ಕೇಳಿದಾಗ ಸಾಲಗಾರನಾದವನು "ನಿನಗೆ ಉಗಿಯುತ್ತೇನೆ" ಎಂದು ಮೊದಲಾಗಿ ನಿಂದನೆಗಳನ್ನಾಡುತ್ತಿದ್ದನೆಂದೂ, ಷೈಲಾಕ್ ಸ್ವಯಂ ತಪ್ಪಿತಸ್ಥನಾಗಿರುವುದಕ್ಕಿಂತಲೂ ತಪ್ಪಿತವನ್ನು ಹೊರಿಸಲ್ಪಟ್ಟವನಾಗಿರುವನೆಂದೂ 'ಘುಂಕಿ' ಹೊಡೆದವರಿಗೆ ಪಾಠವಾಗಿತ್ತಂತೆ. ಶ್ರೀಯವರು ಷೈಲಾಕನ್ನೋ ಆಂಟೋನಿಯೊವನ್ನೋ ಕುರಿತು ಮಾತನಾಡುವುದಕ್ಕೆ ಆರಂಭಿಸಿದಾಗೆಲ್ಲ ಈ ವಿದ್ಯಾರ್ಥಿಗಳು ಗುಸುಗುಸುತೆರೆಗಳನ್ನೆಬ್ಬಿಸುತ್ತಿದ್ದರು. ಈ ನಿಜಾಂಶವನ್ನು ಶ್ರೀಯವರು ಅರಿಯದೆ ಹೋದದ್ದು ನಮ್ಮ ದೌರ್ಭಾಗ್ಯ. ಒಂದು ಸಲ ನನ್ನನ್ನು ತಮ್ಮ ರೂಮಿಗೆ ಕರೆದು, ಒಂದರ್ಧ ಗಂಟೆ ಮಾತನಾಡಿದರು, ಎಂದರೆ ಕಠಿನವಾಗಿ

ದಂಡಿಸಿದರು—"ನಿನ್ನ ಸ್ನೇಹಿತರು ಯೋಗ್ಯವಾದ ದಾರಿಯಲ್ಲಿ ನಡೆಯುವಂತೆ ಮಾಡುವುದು ನಿನ್ನ ಭಾರ" ಎಂದುಬಿಟ್ಟರು. ನನಗೆ ನಿಜವಾಗಿಯೂ ಆಪತ್ತು ಬಂದಂತಾಯಿತು. ಸಂಕಟದಲ್ಲಿ ಸಿಕ್ಕಿಬಿದ್ದೆ.

ಅದೃಷ್ಟವಶಾತ್ ಮುಂದಿನ ಮೂರು ನಾಲ್ಕು ಪಾಠಗಳಲ್ಲಿ ಯಾವೊಂದು ಅಡಚಣೆಯೂ ಬರಲಿಲ್ಲ. ಪೋರ್ಷಿಯಾ ಪಾತ್ರವಿಶ್ಲೇಷಣೆ ನಡೆಯಿತು. ಈ ಪಾಠಗಳಲ್ಲಿ ಹಿಂಬದಿಯ ಬೆಂಚಿನವರಿಗೆ ಭಿನ್ನಾಭಿಪ್ರಾಯವಿರಲಿಲ್ಲವಾದದ್ದರಿಂದ ಗದ್ದಲವೇರ್ಪಡಲಿಲ್ಲ. ಒಂದು ಸಲ ಮಾತ್ರ ಆರ್ಮುಗಂ—ಚೇಪೇಕಾಯನ್ನು ಕಚ್ಚಿ ತಿನ್ನುತ್ತಿದ್ದವನು—ಹಾಗೆಯೇ ಎದ್ದುನಿಂತುಕೊಂಡು, "ಹೆಂಗಸು ಗಂಡಸಿನ ವೇಷ ತೊಟ್ಟುಕೊಂಡು ನ್ಯಾಯಾಲಯದಲ್ಲಿ ವಾದಮಾಡಿದ್ದು ತಪ್ಪಲ್ಲವೆ? ಹೀಗೆ ಮಾಡಿದ್ದರಿಂದ ಪೋರ್ಷಿಯಾ ನ್ಯಾಯಕ್ಕೂ ನ್ಯಾಯಾಲಯಕ್ಕೂ ಮೋಸಮಾಡಿದಂತಾಗಲಿಲ್ಲವೆ? ಷೈಲಾಕನ್ನು ಮೋಸದಿಂದ ಗೆದ್ದಹಾಗಾಗಲಿಲ್ಲವೆ? ಅದೂ ಹೋಗಲಿ, ನಿಜವಾದ ಗಂಡಸಿಗೂ ಗಂಡುವೇಷ ಧರಿಸಿದ ಹೆಂಗಸಿಗೂ ವ್ಯತ್ಯಾಸವರಿಯದೆ ಹೋದ ಆ ನ್ಯಾಯಾಧಿಪತಿ ಎಂಥ ಪೆದ್ದ? ನ್ಯಾಯಾನ್ಯಾಯಗಳನ್ನು ನಿರ್ಣಯಿಸುವುದಕ್ಕೆ ಇಂಥವನು ಯೋಗ್ಯನೆ? ಅದೂ ಹೋಗಲಿ. ಸಾಮಾನ್ಯ ನಿತ್ಯಜೀವನದಲ್ಲಿ ಹೆಂಗಸು ಗಂಡಸಿನ ವೇಷ ಹಾಕಿಕೊಂಡು ಸಾರ್ವಜನಿಕ ಕಾರ್ಯಗಳಲ್ಲಿ ಪಾಲುಗೊಳ್ಳುವುದು ಎಲ್ಲಿಯಾದರೂ ಕಂಡುಬರುತ್ತದೆಯೆ? ಷೇಕ್ಸ್‌ಪಿಯರಿಗೆ ಜನತೆಯ ಜ್ಞಾನ ಸಾಲದೆಂಬುದಕ್ಕೆ ಇದೊಂದು ನಿದರ್ಶನವಲ್ಲವೆ?" ಎಂದು ಕೇಳಿಬಿಟ್ಟ. ಆರ್ಮುಗಂ ಹೀಗೆ ಮಾತನಾಡುತ್ತಿದ್ದಾಗ ಅಕ್ಕಪಕ್ಕಗಳಲ್ಲಿದ್ದವರು ಅವನ ಕೋಟನ್ನೆಳೆದು ಕುಳ್ಳಿರಿಸುವುದಕ್ಕೆ ಪಟ್ಟ ಪ್ರಯತ್ನವೆಲ್ಲ ವ್ಯರ್ಥವಾಯಿತು. ಶ್ರೀಯವರ ಮುಖಚರ್ಯೆ ಬದಲಾಯಿಸಿತು. "ತಿನ್ನುತ್ತಿರುವುದನ್ನು ತರಗತಿಯಿಂದ ಹೊರಗೆ ಹೋಗಿ ಪೂರ್ತಿ ತಿಂದು ಬನ್ನಿ. ಈಗ ದಯವಿಟ್ಟು ಹೊರಕ್ಕೆ ಹೋಗಿಬಿಡಿ" ಎಂದರು. ಆರ್ಮುಗಂ ಹಾಗೆಯೇ ಮಾಡಿದ; ಆದರೆ ಪುನಃ ತರಗತಿಯೊಳಕ್ಕೆ ಬರಲಿಲ್ಲ.

ಈ ಪ್ರಕರಣಕ್ಕೆ ನಾನು ಪರೋಕ್ಷವಾಗಿ ಆಸರೆ ಕೊಟ್ಟೆನೋ ಏನೋ ಎಂಬ ಅಳುಕು ನನ್ನನ್ನು ಆಗಾಗ ಬಾಧಿಸುತ್ತದೆ. ಯಾವುದೋ ಒಂದು ಸಮಯದಲ್ಲಿ ಕುಚೇಷ್ಟೆಗಾಗಿ ಆರ್ಮುಗಂ ಹೇಳಿದ ವಾದಸರಣಿಯನ್ನು ಕೆಲವು ಗೆಳೆಯರೆದುರಿಗೆ ಎತ್ತಿದ್ದೆ. ಇದು ಕೇವಲ ಹುಡುಗಾಟಕ್ಕಾಗಿ ಮಾಡಿದ

ವಿತಂಡವಾದ. ಆರ್ಮುಗಂ ಅದನ್ನು ಹೀಗೆ ಈ ಸಂದರ್ಭದಲ್ಲಿ ಉಪಯೋಗಿಸಿಕೊಂಡದ್ದು ನನಗೆ ಆಶ್ಚರ್ಯ, ವ್ಯಾಕುಲ. ಶ್ರೀಯವರ ವಿಷಯದಲ್ಲಿ ನಮಗೆ ಗೌರವವಾಗಲಿ ಪೂಜ್ಯಭಾವವಾಗಲಿ ಇರಲಿಲ್ಲವೆಂದು ಯಾರೂ ತಿಳಿಯಬಾರದು. ಪಾಠದ ವೇಳೆಗಳಲ್ಲಿ ಸ್ವಲ್ಪ ಹುಡುಗುತನದ ಪ್ರದರ್ಶನ ಮಾಡುತ್ತಿದ್ದೆವೇ ಹೊರತು ಅವರ ಘನತೆಗೂ ವ್ಯಕ್ತಿತ್ವಕ್ಕೂ ಕುಂದು ಬರುವಂತೆ ಯಾವಾಗಲೂ ನಡೆದುಕೊಂಡದ್ದಿಲ್ಲ. ಇನ್ನೂ ಹೇಳಬಹುದಾದರೆ, ಶ್ರೀಯವರು ನಡಸುತ್ತಿದ್ದ 'ಸೆಮಿನಾರ್'ಗಳಿಗೆ ತಪ್ಪದೆ ಹೋಗಿ, ಅದರ ಎಲ್ಲ ಕಾರ್ಯಕಲಾಪಗಳಲ್ಲಿಯೂ ಪೂರ್ಣವಾಗಿ ಭಾಗವಹಿಸುತ್ತಿದ್ದ ವಿದ್ಯಾರ್ಥಿಗಳೇ ನಾವು,—'ಘುಂಕಿ' ತಂಡದವರು, ಸಯನ್ಸ್ ಆನರ್ಸ್ ವಿದ್ಯಾರ್ಥಿಗಳು. ಸೆಂಟ್ರಲ್ ಕಾಲೇಜಿನಲ್ಲಿ ಆನರ್ಸ್ ವಿದ್ಯಾರ್ಥಿಗಳಾಗಿದ್ದಷ್ಟು ಕಾಲವೂ (ಮೂರು ವರ್ಷಗಳು) ಈ 'ಸೆಮಿನಾರ್'ಗಳಿಗೆ ಕಾರ್ಯದರ್ಶಿಯಾಗಿಯೋ, ಸಹಕಾರ್ಯದರ್ಶಿಯಾಗಿಯೋ, ಹಂಗಾಮಿ ಕಾರ್ಯದರ್ಶಿಯಾಗಿಯೋ ಕೆಲಸ ನೋಡಿದವರೆಲ್ಲ ನಮ್ಮ ಗುಂಪಿನವರೇ. ಈ 'ಗುರುಕುಲ'ದ ವೇಳೆಗಳಲ್ಲಿ ಶ್ರೀಯವರ ಇಂಗ್ಲಿಷ್ ಪಾಂಡಿತ್ಯವನ್ನೂ ವಾಗ್ಮಿತೆಯನ್ನೂ ಕಂಡು ಅವರ ದಾಸರಾಗಿಬಿಟ್ಟದ್ದೆವು. ಆದರೂ ನಮ್ಮಲ್ಲಿ ಕೆಲವರಿಗೆ ಅವರ ಮೃದುಸ್ವಭಾವವನ್ನು ಕೆಣಕಿ, ಅವರನ್ನು ಚೆನ್ನಾಗಿ ರೇಗಿಸಿ, ತನ್ಮೂಲಕ ಅವರ ಬಾಯಿಂದ ಹೊರಬರುವ ವಾಕ್‌ಝುರಿಯನ್ನು ಕೇಳಬೇಕೆಂಬ ಕುತೂಹಲ ಬಲವಾಗಿತ್ತು. ಇದನ್ನು ಆಗಮಾಡಿಸುವುದಕ್ಕೆ 'ಸೆಮಿನಾರ್' ತಕ್ಕ ಸ್ಥಳವಲ್ಲವೆಂದೂ, ತರಗತಿಯೇ ಫಲವತ್ತಾದ ಜಾಗವೆಂದೂ ನಿರ್ಣಯಿಸಿಕೊಂಡಿದ್ದೆವು. ಆರ್ಮುಗಂ ಕಾರ್ಯೋನ್ಮುಖನಾದದ್ದು ಈ ಹಿನ್ನೆಲೆಯಿಂದ. ಕಾರ್ಯಸಾಧನೆಯಾಗದೆಹೋದದ್ದರಿಂದ ನಮಗೆಲ್ಲ ಕೊಂಚ ನಿರಾಶೆಯಾಯಿತೆಂದೇ ಹೇಳಬೇಕು.

ಕೆಲವು ದಿನಗಳ ತರುವಾಯ ಪಾಠದಲ್ಲಿ ಮರಳಿ ಆಂಟೊನಿಯೊ ಪ್ರಸ್ತಾಪ ಬಂತು. ಶ್ರೀಯವರು ತಮ್ಮ ಪದ್ಧತಿಯ ಪ್ರಕಾರ ಪಾತ್ರವಿಶ್ಲೇಷಣೆ ಮಾಡಲಾರಂಭಿಸಿದರು. 'ಘುಂಕಿ' ಹೊಡೆದ ಪಂಗಡದ ಮುಖ್ಯಸ್ಥನಾಗಿದ್ದ ರಂಗಪ್ಪ ನಡುವೆ ಎದ್ದುನಿಂತು ತನ್ನ ಕಕ್ಷಿಯನ್ನಾರಂಭಿಸಿಬಿಟ್ಟ. ಶ್ರೀಯವರ ಮುಖದ ಮೇಲೆ ನಸುನಗೆ ಮೂಡಿತೇ ಹೊರತು ಕೋಪ ಕಾಣಲಿಲ್ಲ. ಒಂದೆರಡು ಸಮಾಧಾನದ ಮಾತು ಹೇಳಿದರು. ರಂಗಪ್ಪ ಅದಕ್ಕೂ ವಿತಂಡದ ಕೋಟೆ ಹಾಕಿ ಮೊಂಡಾಟ ಮಾಡಿದ. ಶ್ರೀಯವರ ನಗೆ ಮಾಯವಾಗಿ ಹುಬ್ಬು ಸ್ವಲ್ಪ

ಗಂಟಿಟ್ಟಿತು. ನಮ್ಮ ಕಾರ್ಯ ಕೈಗೂಡಿತೆಂದುಕೊಂಡೆವು. ಅದುವರೆಗೂ ಇಂಗ್ಲಿಷಿನಲ್ಲಿ ಮಾತನಾಡುತ್ತಿದ್ದ ಶ್ರೀಯವರು ಇದ್ದಕ್ಕಿದ್ದಂತೆಯೆ ಕನ್ನಡದಲ್ಲಿ, "ನಿಮಗೆ ಸೂಕ್ಷ್ಮ ವಿಚಾರಗಳು ತಿಳಿಯುವುದಿಲ್ಲ. ಅವನ್ನು ಅರ್ಥಮಾಡಿಕೊಳ್ಳುವುದಕ್ಕೆ ನೀವು ಇಷ್ಟಪಡುವುದೂ ಇಲ್ಲ. ನಿಮಗೆ ಬೇಕಾದಂತೆಯೇ ಇಟ್ಟುಕೊಂಡುಬಿಡಿ. ಆಂಟೊನಿಯೊ ನನ್ನ ಮಗನೇನೂ ಅಲ್ಲ, ತಮ್ಮನೂ ಅಲ್ಲ, ಅಳಿಯನೂ ಅಲ್ಲ!" ಎಂದುಬಿಟ್ಟು ಪಾಠವನ್ನು ಮುಂದುವರಿಸಿದರು. ಈ ಕೊನೆಯ ಮಾತುಗಳನ್ನು ಕೇಳಿ ತರಗತಿಯಲ್ಲಿದ್ದವರೆಲ್ಲ ಘೊಳ್ಳೆಂದು ನಕ್ಕುಬಿಟ್ಟರು. ಹಿಂಬದಿಯ ಬೆಂಚುಗಳಲ್ಲಿದ್ದ ನಮಗೆ ಇದರಿಂದ ಒಂದು ವಿಧದಲ್ಲಿ ಅವಮಾನವೂ ಆಯಿತು, ಉದ್ದೇಶಭಂಗದಿಂದ ನಿರಾಶೆಯೂ ಆಯಿತು. ಇಂಥ ಪ್ರಯತ್ನಗಳನ್ನು ಪುನಃ ಮಾಡಹೋಗಲಿಲ್ಲ.

ಶ್ರೀಯವರು ಆಗಾಗ 'ಕನ್ನಡದ ನಾಡುಗಳ ಸಿರಿಯ ನೋಡುತ್ತ, ತಾಯಡಿಯ ಹುಡಿಯ ತಲೆಗಾನುತ್ತ, ಹರಕೆಯ ಪವಿತ್ರಯಾತ್ರೆ' ಮಾಡಿ 'ಒಸಗೆನುಡಿ'ಯನ್ನು ತರುತ್ತಿದ್ದರು. ಇಂಥ ಯಾತ್ರೆಗಳಾದ ಬಳಿಕ ಕರ್ಣಾಟಕ ಸಂಘದಲ್ಲಿ ಶ್ರೀಯವರ ಒಂದು ಉಪನ್ಯಾಸವನ್ನು ಏರ್ಪಡಿಸುವುದು ವಾಡಿಕೆ. ಈ ಸಲ ಹೈದರಾಬಾದು ಕರ್ಣಾಟಕ, ಅಜಂತ, ಎಲ್ಲೋರಗಳನ್ನು ನೋಡಿ ಬಂದಿದ್ದರು. ಕೃಷ್ಣಶಾಸ್ತ್ರಿಗಳವರು 'ಹೋಗಿ ಕೇಳಿ, ಒಂದು ದಿನವನ್ನು ಗೊತ್ತು ಮಾಡಿಬಿಡು' ಎಂದರು.

"ಯಾವ ವಿಷಯವೆಂದು ಕೇಳಲಿ, ಸರ್?"

"ನೀನು ಏನನ್ನು ಕೇಳಬೇಕು ಅಂತೀಯ?"

"ಈಗ ಕರ್ಣಾಟಕದ ಏಕೀಕರಣ ಪ್ರಶ್ನೆ ಪ್ರಕೃತವಾಗಿದೆಯಲ್ಲ, ಸರ್. ಇದರ ವಿಷಯವನ್ನೆತ್ತಿಕೊಂಡು ಹೈದರಾಬಾದು ಕರ್ಣಾಟಕದ ಸ್ಥಾನಮಾನವನ್ನು ವಿಚಾರ ಮಾಡಿದರೆ . . ."

"ಸರಿಯೆ. ಆದರೆ ಅವರೇನು ಹೇಳುತ್ತಾರೋ? ನೀನು ಹೇಳುವ ವಿಷಯಕ್ಕೆ ಸ್ವಲ್ಪ ಪೊಲಿಟಿಕಲ್ ಛಾಯೆ ಬರುತ್ತದೆ. ಅವರೇನೆನ್ನುವರೋ?"

"ಹಾಗಿದ್ದರೆ ಅವರಿಗೇ ಬಿಟ್ಟುಬಿಡುತ್ತೇನೆ, ಸರ್."

ಮಾರನೆಯ ದಿನ ಶ್ರೀಯವರನ್ನು ಕಂಡು, ವಿಷಯ ಬಿನ್ನವಿಸಿಕೊಂಡೆ.

"ಕರ್ಣಾಟಕ ಸಂಘದ ಕಾರ್ಯದರ್ಶಿ ಬಂದು ಕೇಳಿದರೆ ಒಲ್ಲೆನೆನ್ನುತ್ತೇನೆಯೆ? ಯಾವ ವಿಷಯ ಮಾತನಾಡಬೇಕು?"

"ತಮ್ಮ ಈಚಿನ ಪ್ರವಾಸವನ್ನು ಕುರಿತು ಏನಾದರೂ ಹೇಳಬಹುದು, ಸರ್. ಇಲ್ಲವೆ, ಏಕೀಕರಣದಲ್ಲಿ ಹೈದರಾಬಾದು ಕರ್ಣಾಟಕ . . ."

ಸ್ವಲ್ಪ ಯೋಚನೆಮಾಡಿ, "ಈ ವಿಷಯವನ್ನು ಕುರಿತು ನಾಳೆ ಪರಿಷತ್ತಿನಲ್ಲಿ ಮಾತನಾಡುತ್ತೇನೆ. ಸಂಘದಲ್ಲಿಯೂ ಅದನ್ನೇ ಹೇಳಿದರೆ ಚರ್ವಿತಚರ್ವಣವಾಗುವುದಿಲ್ಲವೆ?" ಎಂದರು.

ನಾನು ಏನನ್ನೂ ಹೇಳಲಿಲ್ಲ. ಬಳಿಕ ಅವರೇ "ಅಜಂತ ಗುಹೆಗಳ ಭಿತ್ತಿಚಿತ್ರಗಳನ್ನು ಕುರಿತು ಎರಡು ಮಾತು ಹೇಳುತ್ತೇನೆ. ನೀವಾರೂ ಇವುಗಳನ್ನು ನೋಡಿರಲಾರಿರಿ. ತಿಳಿದುಕೊಳ್ಳಬೇಕಾದ ವಿಷಯ ಇದು" ಎಂದರು.

ಇದನ್ನು ಕೇಳಿದೊಡನೆ ನನಗೆ ಒಂದು 'ಥರ' ಆಯಿತು. ಏನೋ ಮಾಡುವುದಕ್ಕೆ ಹೋಗಿ ಇನ್ನೇನೋ ಆಯಿತಲ್ಲ ಎಂದು ಮನ ತಳಮಳಗೊಂಡಿತು. ಅಜಂತ ಚಿತ್ರಕಲೆಯ ಪರಿಚಯವನ್ನೂ ವಿಮರ್ಶೆಯನ್ನೂ ಮಾಡುವುದಕ್ಕೆ ಬೇರೆ ಜನರಿಲ್ಲವೆ ಎಂದೂ ಎನ್ನಿಸಿತು. ಆದರೆ ಮರುಮಾತನಾಡುವುದಕ್ಕೆ ಧೈರ್ಯವಿಲ್ಲದೆ ಒಪ್ಪಿಕೊಂಡು ಬಂದು ಕೃಷ್ಣಶಾಸ್ತ್ರಿಗಳವರಿಗೆ ನಡೆದ ವಿಷಯವನ್ನೆಲ್ಲ ಹೇಳಿದೆ. "ಸರಿ, ಆದದ್ದಾಯಿತು. ನೋಟೀಸು ಪ್ರಿಂಟು ಮಾಡಿಸಿಬಿಡು" ಎಂದರು. ಅಧ್ಯಕ್ಷರೂ ಉಪಾಧ್ಯಕ್ಷರೂ ಒಪ್ಪಿಯಾದ ಮೇಲೆ ಕಾರ್ಯ ನಡಸುವುದು ತಾನೆ ಕಾರ್ಯದರ್ಶಿಯ ಜವಾಬ್ದಾರಿ!

ಭಾಷಣ ಆರಂಭವಾದದ್ದು ಸಂಜೆ ಐದೂಕಾಲುಗಂಟೆಗೆ, ಗಣಿತಶಾಸ್ತ್ರ ಭವನದಲ್ಲಿ. ಸಭಾಂಗಣ ಪ್ರೇಕ್ಷಕರಿಂದ ತುಂಬಿತ್ತು. ಇನ್ನೂ ಮುನ್ನುಡಿ ಮುಗಿದಿರಲಿಲ್ಲ. ಎಂಟು ಗಂಟೆಯಾದಾಗತಾನೆ ಚಿತ್ರಗಳ ವಿಶದೀಕರಣ ಆರಂಭವಾಯಿತು. ಗ್ರಿಫಿತ್, ಹ್ಯಾರಿಂಗ್‌ಹ್ಯಾಮ್, ಯಜದಾನಿ ಮೊದಲಾದವರ ಪ್ರಕಟನೆಗಳಿಂದ ಒಂದೊಂದು ಚಿತ್ರವನ್ನು ಎಪಿಡಿಯಾಸ್ಕೋಪಿನ ಮೂಲಕ ತೆರೆಯ ಮೇಲೆ ಕಾಣಿಸಿ, ಆಯಾ ಚಿತ್ರಗಳ ವಸ್ತುವಾಗಿದ್ದ ಜಾತಕ ಕಥೆ, ಬೌದ್ಧ ಧರ್ಮಸೂತ್ರಗಳ ವಿಶದೀಕರಣ, ಬುದ್ಧನ ಹಿರಿಮೆ ಮೊದಲಾದವುಗಳ ದೀರ್ಘ ಜಿಜ್ಞಾಸೆಗಳು ಬೆಳೆಯುತ್ತ ಬಂದವು. ಒಂಬತ್ತು ಗಂಟೆ ವೇಳೆಗೆ ಐದೋ ಆರೋ ಚಿತ್ರಗಳ ಪರಿಚಯ ಮುಗಿದಿತ್ತು; ಸಭಾಂಗಣ ಮುಕ್ಕಾಲುಪಾಲು

ಖಾಲಿಯಾಗಿತ್ತು. ಶ್ರೀಯವರ ಹುಮ್ಮಸ್ಸು ಕುಗ್ಗಲಿಲ್ಲ. ಸಭೆಯಲ್ಲಿ ಉಳಿದಿದ್ದವರು ಬಹುಭಾಗ ಅವರ ಆಪ್ತ ಶಿಷ್ಯವರ್ಗಕ್ಕೆ ಸೇರಿದ್ದವರು, ಮತ್ತು ಸೆಂಟ್ರಲ್ ಕಾಲೇಜ್ ಹಾಸ್ಟಲಿನಲ್ಲಿದ್ದವರು. ಹಾಸ್ಟಲಿನವರು ಗೊಣಗಲಾರಂಭಿಸಿದರು. ಒಂಬತ್ತೂವರೆ ಗಂಟೆಯೊಳಗಾಗಿ ಹಾಸ್ಟಲಿನಲ್ಲಿದ್ದವರಿಗೆ ಮಾತ್ರ ಊಟ; ಇದಕ್ಕಿಂತ ಹೊತ್ತಾಗಿ ಹೋದವರಿಗೆ ಉಪವಾಸ; ಹೀಗಿತ್ತು ಅಲ್ಲಿನ ನಿಯಮ. ಆದ್ದರಿಂದ ಇವರು "ಲೋ ಸ್ವಾಮಿ, ನಮ್ಮನ್ನು ಉಪವಾಸ ಹಾಕಿಸುವ ಪಾಪವನ್ನು ಬೇರೆ ಹೊತ್ತುಕೊಳ್ಳುತ್ತೀಯಲ್ಲೊ! ನಿನ್ನನ್ನು ನೋಡಿದರೆ ನಮಗೆ ಅಯ್ಯೋ ಎನ್ನಿಸುತ್ತದೆ. ನೀನೂ ಬಾ, ಊಟಮಾಡಿಬಿಟ್ಟು ನಾವು ಬೆಚ್ಚಗೆ ಮಲಗಿಕೊಳ್ಳುತ್ತೇವೆ. ನೀನು ಬೇಕಾದರೆ ತಿರುಗಿ ಬರುವೆಯಂತೆ" ಎಂದು ಹೇಳಿ ಸಣ್ಣ ಸಣ್ಣ ಗುಂಪುಗಳಲ್ಲಿ ಹೊರಟುಹೋಗಲು ಮೊದಲುಮಾಡಿದರು. ನಾನು ಎಷ್ಟೆಷ್ಟೋ ಗೋಗರೆದೆ—ಒಂದು ದಿನ ಹೇಗಾದರೂ ಇದ್ದುಬಿಡಿ ಎಂದು. ನನ್ನ ಹೊಟ್ಟೆಯೇ ಬೊಬ್ಬೆಯಿಡುತ್ತಿದ್ದಾಗ ಇತರರನ್ನು ಹೀಗೆ ಕೇಳಿಕೊಳ್ಳುವುದು ಸರಿಯೆ—ಎನ್ನಿಸಿತು. ನನ್ನೊಂದಿಗೆ ಸಹಕಾರ್ಯದರ್ಶಿಯಾಗಿದ್ದ ವಿಶ್ವೇಶ್ವರಯ್ಯ (ಹಾಸ್ಟಲಿನಲ್ಲಿಯೇ ಇದ್ದವರು) ಕೂಡ "ವಿಪರೀತ ಹಸಿವಾಗುತ್ತಿದೆ. ಹೊತ್ತೂ ಆಗಿದೆ. ಬನ್ನಿ, ಹಾಸ್ಟಲಿಗೆ ಹೋಗಿ ಊಟ ಮಾಡಿಕೊಂಡು ತಿರುಗಿ ಬರೋಣ. ಭಾಷಣ ಇನ್ನೂ ನಡೆಯುತ್ತಲೇ ಇರುತ್ತದೆ" ಎಂದು ಆಶಾವಾದಿಯಾದರು. ಊಟ ಮಾಡಿಕೊಂಡು ಬರುವ ವೇಳೆಗೆ ಒಂಬತ್ತೂ ಮುಕ್ಕಾಲು ಗಂಟೆಯಾಗಿತ್ತು. ಶ್ರೀಯವರ ಭಾಷಣ ಅದುವರೆಗೂ ನಡೆದು ಬಂದಿದ್ದ ರೀತಿಯಲ್ಲಿಯೇ ಇನ್ನೂ ನಡೆಯುತ್ತಿತ್ತು. ಒಬ್ಬರ ಮುಖವನ್ನೊಬ್ಬರು ನೋಡಿಕೊಂಡೆವು. ಸಭಾಂಗಣವನ್ನು ನೋಡಿದೆವು; ಒಂದು ಹತ್ತು ಜನ ಮಾತ್ರ ಉಳಿದಿದ್ದರು. ಅವರಲ್ಲಿಬ್ಬರು ಕೂತೆಡೆಯಲ್ಲಿಯೇ ತೂಕಡಿಸುತ್ತಿದ್ದರು. ಹತ್ತು ಗಂಟೆಯಾಯಿತು. ಅನಿರೀಕ್ಷಿತವಾಗಿ ಎಪಿಡಿಯಾಸ್ಕೋಪಿನ ಬೆಳಕು ನಂದಿ ಹೋಯಿತು. ರಿಪೇರಿಮಾಡುವ ಉದ್ದೇಶದಿಂದ ಸಭಾಂಗಣದ ದೀಪಗಳನ್ನು ಹೊತ್ತಿಸಿದೆವು. ಬಲ್ಬೇ 'ಬರ್ನ್' ಆಗಿತ್ತು. ಶ್ರೀಯವರಿಗೆ ತಿಳಿಸಿದೆವು. ಅವರು ಸಭಾಂಗಣವನ್ನು ಸಿಂಹಾವಲೋಕನಮಾಡಿ "ಎಲ್ಲರೂ ಹೋದಂತಿದೆ!" ಎಂದರು. ನಾವು ಅರ್ಥಗರ್ಭಿತವಾಗಿ ಒಬ್ಬರನ್ನೊಬ್ಬರು ನೋಡಿಕೊಂಡೆವು. ಶ್ರೀಯವರು "ಹೇಳಬೇಕಾದದ್ದು ಇನ್ನೂ ಬೇಕಾದಷ್ಟಿದೆ. ಕಾರ್ಯದರ್ಶಿಗಳು

ಸಭೆಯನ್ನು ಇನ್ನೊಂದು ದಿನಕ್ಕೆ ಮುಂದುವರಿಸಬಹುದು" ಎಂದರು. ಬೀಸುವ ದೊಣ್ಣೆ ತಪ್ಪಿತಲ್ಲ! ವಿಶ್ವೇಶ್ವರಯ್ಯ ಧನ್ಯವಾದ ಸಮರ್ಪಣೆಗೆ ಎದ್ದು ನಿಂತರು. ಶ್ರೀಯವರು "ಈಗೇನಪ್ಪ ಅವಸರ, ಅರ್ಧದಲ್ಲಿ? ಉತ್ತರಾರ್ಧದ ಕಾರ್ಯಕ್ರಮ ಮುಗಿದ ಮೇಲೆ ಮಾಡುವೆಯಂತೆ" ಎಂದುಬಿಟ್ಟರು.

ಈ ಕಾರ್ಯಕ್ರಮ ನಡೆದಮೇಲೆ ಸಂಘದ ಆಶ್ರಯದಲ್ಲಿ ಐದಾರು ಸಭೆಗಳು ನಡೆದವು. 'ಉತ್ತರಾರ್ಧ' ನಡೆಯುವ ಯೋಗ ಬರಲಿಲ್ಲ. ಅಪೂರ್ಣವಾಗಿ, ಧನ್ಯವಾದ ಸಮರ್ಪಣೆಯಿಲ್ಲದೆ ನಡೆದ ಕಾರ್ಯಕ್ರಮ ಸಂಘದ ಚರಿತ್ರೆಯಲ್ಲಿ ಇದೊಂದೇ ಎಂದು ನನ್ನ ಎಣಿಕೆ.



೧೯೩೬ರಲ್ಲಿ ವಿಜಯನಗರದ ಷಟ್‌ಶತಮಾನಸ್ಮಾರಕೋತ್ಸವ ನಡೆಯಿತು, ಹಂಪೆಯಲ್ಲಿ. ಕೃಷ್ಣಶಾಸ್ತ್ರಿಗಳವರು "ಸ್ವಾಮಿ, ಹಂಪೆ ನೋಡಿದ್ದೀಯ?" ಎಂದರು. ತಲೆ ಅಲ್ಲಾಡಿಸಿದೆ. "ಸಂಘದ ಪರವಾಗಿ ಹೋಗಿಬರುತ್ತೀಯೋ? ನಿನ್ನ ಪ್ರಯಾಣದ ವೆಚ್ಚ, ಅಲ್ಲೊಂದೆರಡುಮೂರು ದಿನಗಳಿಗೆ ತಗಲುವ ವೆಚ್ಚ, ಸಂಘದಿಂದ ಕೊಡಿಸುತ್ತೇನೆ. ಹಾಗೆಯೇ ಸಂಘದ ಕಾಣಿಕೆಯಾಗಿ ಸ್ವಲ್ಪ ಹಣ ಕೊಡುತ್ತೇನೆ, ಅದನ್ನೂ ಸಮಾರಂಭ ಸಮಯದಲ್ಲಿ ಸಂಘದ ಪರವಾಗಿ ಕೊಟ್ಟುಬಿಡುವಿಯಂತೆ" ಎಂದರು. ನನಗೆ ಸ್ವರ್ಗ ಸಿಕ್ಕಿದಂತಾಯಿತೆಂದು ಪ್ರತ್ಯೇಕವಾಗಿ ಹೇಳಬೇಕೇನು!

ಬೆಂಗಳೂರಿನಿಂದ ಹೊರಟ ರೈಲಿನಲ್ಲಿ ಸಂಘದ ಅಧ್ಯಕ್ಷರೂ ಪ್ರಯಾಣ ಮಾಡಿದರು. ರೈಲು ಹತ್ತುವ ಮುನ್ನ "ಹುಬ್ಬಳ್ಳಿಯಲ್ಲಿ ಇಳಿದುಬಿಡು, ಅಲ್ಲಿಂದ ನನ್ನ ಜತೆಗಿದ್ದುಬಿಡು. ಅಲ್ಲಿ ಒಂದೆರಡು ಸಣ್ಣ ಕೆಲಸಗಳಿವೆ. ಅವನ್ನು

ಮುಗಿಸಿಕೊಂಡು ಗದಗು ಹೊಸಪೇಟೆಗಳ ಮಾರ್ಗವಾಗಿ ಹಂಪೆಗೆ ಹೋಗೋಣ" ಎಂದರು.

ಹುಬ್ಬಳ್ಳಿಯನ್ನು ಸೇರುವಷ್ಟು ಹೊತ್ತಿಗೆ ಮಧ್ಯಾಹ್ನ ಸುಮಾರು ಒಂದು ಗಂಟೆಯಾಯಿತು. ಶ್ರೀಯವರನ್ನು ಎದುರುಗೊಳ್ಳಲು ಮೂವತ್ತು ನಲವತ್ತು ಜನ ನಿಲ್ದಾಣಕ್ಕೆ ಬಂದಿದ್ದರು. ಅನೇಕರು ಹಾರ ತುರಾಯಿ ನಿಂಬೆಹಣ್ಣು ಗಳನ್ನು ಶ್ರೀಯವರಿಗೆ ಅರ್ಪಿಸಿದರು. ಶ್ರೀಯವರು ಬಂದಿದ್ದವರಿಗೆ "ನಮ್ಮ ಕಾಲೇಜು ಕರ್ಣಾಟಕ ಸಂಘದ ಕಾರ್ಯದರ್ಶಿ" ಎಂದು ನನ್ನ ಪರಿಚಯ ಹೇಳುತ್ತಿದ್ದರು. ನನ್ನ ತಲೆ ಭುಜದ ಮೇಲಿನಿಂದ ಎರಡಡಿ ಎತ್ತರದಲ್ಲಿ ಹಾರಾಡುವುದಕ್ಕೆ ಆರಂಭವಾಯಿತು. ಇನ್ನೂ ಹೇಳಲೆ? ಈ ಪರಿಚಯದ ಮಾರ್ದನಿಯೆಂಬಂತೆ ನನ್ನ ಕೊರಳಿಗೂ ಹಾರ, ಕೈಗೆ ನಿಂಬೆಹಣ್ಣು ಬಿತ್ತು! ಈ ಮರ್ಯಾದೆಯನ್ನು ಮಾಡಿಸಿಕೊಳ್ಳುವುದಕ್ಕೆ ನನಗೆ ನಿಜವಾಗಿಯೂ ನಾಚಿಕೆ ಯಾಯಿತು. ಮರುಸಲ "ಕ್ಷಮಿಸಬೇಕು, ನಾನೊಲ್ಲೆ" ಎಂದೆ. ಶ್ರೀಯವರು "ಮದುವೆಯಾಗುವುದಕ್ಕೆ ಇನ್ನೂ ಕೆಲವಾರು ವರ್ಷಗಳಾದರೂ ಇವೆ. ನೀನು ಈಗಲೇ ಹೀಗೆ ನಾಚಿಕೆಪಟ್ಟುಕೊಂಡರೆ ಹೇಗೆ?" ಎಂದುಬಿಟ್ಟರು. ಹೂವಿನ ಜತೆಗೆ ನಾನು ನಾರಾಗಿ ಸೇರಿಕೊಂಡಿದ್ದೇನೆ ಎಂಬ ಅರಿವು ಸ್ಥಿರವಾಗಿ ನನ್ನಲ್ಲಿ ನೆಲೆಸಿತು.

ರೈಲ್ವೆ ನಿಲ್ದಾಣದಿಂದ ಯಾವುದೋ ಒಂದು ಛತ್ರವನ್ನೋ ಅಥವಾ ಯಾರದೋ ಮನೆಯನ್ನೋ (ಸರಿಯಾಗಿ ಜ್ಞಾಪಕವಿಲ್ಲ) ಸೇರಿ ಸ್ನಾನ ಊಟ ಗಳನ್ನು ಮುಗಿಸಿದೆವು. ಮಧ್ಯಾಹ್ನ ಮೂರು ಗಂಟೆಗೆ ಶ್ರೀಯವರ 'ಸಣ್ಣ' ಕೆಲಸಗಳು ಆರಂಭವಾದವು. ಮೂರೂವರೆ ಗಂಟೆಯಿಂದ ನಾಲ್ಕೂವರೆಯ ವರೆಗೂ ಅಲ್ಲಿಯ ಪ್ರೌಢಶಾಲೆಯಲ್ಲಿ ರಗಳೆಯ ಕವಿಗಳನ್ನು ಕುರಿತು ಕನ್ನಡದಲ್ಲಿ ಭಾಷಣಮಾಡಿದರು. ಐದರಿಂದ ಆರರವರೆಗೂ ಇನ್ನಾವುದೋ ಸಂಘದ ಆಶ್ರಯ ದಲ್ಲಿ ವರ್ಡ್ಸ್‌ವರ್ತ್ ಕವಿಯನ್ನು ಕುರಿತು ಇಂಗ್ಲಿಷಿನಲ್ಲಿ ಭಾಷಣಮಾಡಿದರು. ಆರೂಕಾಲರಿಂದ ಆರೂಮುಕ್ಕಾಲರವರೆಗೆ ಊರಿನ ಗಣ್ಯರೂ ಕನ್ನಡಾಭಿಮಾನಿ ಗಳೂ ಸೇರಿದ್ದ ಖಾಸಗಿಸಭೆಯಲ್ಲಿ ಕನ್ನಡದ ಏಳಿಗೆಯ ಬಗ್ಗೆ ಮಾತುಕತೆ ನಡಸಿದರು. ಸ್ವಲ್ಪ ಉಪಾಹಾರವಾಯಿತು. ಏಳೂವರೆ ಗಂಟೆಗೆ ಯಾವುದೋ ನಾಟಕಶಾಲೆಯಲ್ಲಿ ನಡೆಯುತ್ತಿದ್ದ ಯಾವುದೋ ಬಳಗದ ವಾರ್ಷಿಕೋತ್ಸವದಲ್ಲಿ

ಭಾಗಿಯಾಗಿ, ಎಂಟೂವರೆ ಗಂಟೆಯವರೆಗೂ ಗ್ರೀಕ್‌ರುದ್ರನಾಟಕಗಳ ಪರಿಚಯವನ್ನು ಕನ್ನಡದಲ್ಲಿ ಮಾಡಿದರು. ಎಂಟೂವರೆಯಿಂದ ಒಂಬತ್ತೂಕಾಲರವರೆಗೂ ಬಯಲೊಂದರಲ್ಲಿ ನೆರೆದಿದ್ದ ೧೦೦-೧೫೦ ಸಭಿಕರಿಗೆ ಕನ್ನಡತಾಯಿಯ ಗಾತ್ರ ವಿಸ್ತೀರ್ಣಗಳನ್ನು ಇಂಗ್ಲಿಷಿನಲ್ಲಿ ವರ್ಣಿಸಿದರು. ಒಂದರ್ಧಗಂಟೆಯೊಳಗಾಗಿ ಯಾರದೋ ಮನೆಯಲ್ಲಿ ಊಟಮಾಡಿ, ಇನ್ನಾರದೋ ಮನೆಯಲ್ಲಿ ನೆರೆದಿದ್ದ ಆಂಧ್ರ-ಕನ್ನಡಿಗರನ್ನು ಉದ್ದೇಶಿಸಿ ಆಂಧ್ರರಿಂದ ಕನ್ನಡಕ್ಕೆ ಆಗಬೇಕಾಗಿರುವುದು ಬಹಳವಿದೆಯೆಂದು ನಾಲ್ಕುಮಾತನ್ನಾಡಿ, ಅವರನ್ನು ಅಟ್ಟಕ್ಕೇರಿಸಿದರು. ಇದರ ತತ್‌ಕ್ಷಣದ ಫಲ—ಸಭೆಯಿಂದ ಹೊರಬಂದೊಡನೆಯೆ ಹುಬ್ಬಳ್ಳಿಯ ಕನ್ನಡ



ಮಹಾಜನರಿಗೂ ಆಂಧ್ರ-ಕನ್ನಡ ಮಹಾಜನರಿಗೂ ಮಾತುಕದನ ಹೊತ್ತಿಕೊಂಡಿತು. ಶ್ರೀಯವರೇ ಇದನ್ನು ಆರಿಸಿದರು. ಇಷ್ಟರಲ್ಲಿ ವೀರಶೈವ ವಿದ್ಯಾರ್ಥಿನಿಲಯದ ಗುಂಪೊಂದು ಬಂದು ಶ್ರೀಯವರನ್ನು ಆಹ್ವಾನಿಸಿದರು. ಒಡನೆಯೆ ಒಪ್ಪಿಕೊಂಡು ಅಲ್ಲಿಗೆ ಹೋದರು. ಅಲ್ಲಿ ನೂರೆಂಟರದೋ ಸಾವಿರದೆಂಟರದೋ ಸ್ವಾಮಿಗಳೊಬ್ಬರ ಅಧ್ಯಕ್ಷತೆಯಲ್ಲಿ ರಾತ್ರಿ ಹನ್ನೊಂದೂಮುಕ್ಕಾಲು ಗಂಟೆಯವರೆಗೂ "ಕನ್ನಡ ಸಾಹಿತ್ಯಕ್ಕೆ ವಚನಕಾರರ ಕಾಣಿಕೆ" ಎಂಬ ವಿಷಯವನ್ನೆತ್ತಿಕೊಂಡು ವಿಶದೀಕರಿಸಿ ಸಭಿಕರ ಮನಸ್ಸಂತೋಷಕ್ಕೆ ಪಾತ್ರರಾದರು. ನಮ್ಮ ಅಭ್ಯಾಗತರು "ಹನ್ನೆರಡು ಹೊಡೀತ್ರಿ. ತುಸು ಆರಾಮ ತೊಗೋಬಹುದಲ್ಲ!" ಎಂದು ಎಚ್ಚರಿಸಿದರು. "ಓಹೋ, ಹಾಗೇನು! ಮುಂದಿನ ಕೆಲಸಗಳನ್ನು ನಾಳೆ ನೋಡಿಕೊಳ್ಳೋಣ" ಎಂದು ಶ್ರೀಯವರು ಒಪ್ಪಿಕೊಂಡರು.

ಒಂದು ಉಪನ್ಯಾಸವನ್ನು ಐದು ಗಂಟೆಗಳ ಕಾಲ (ಅಸಂಪೂರ್ಣವಾಗಿ) ಕೊಟ್ಟದ್ದು ಶ್ರೀಯವರ ವಾಗ್ಮಿತೆಯ ಒಂದು ಮುಖ; ಏಳು ಗಂಟೆಗಳಲ್ಲಿ ಆರು

ಇಂಗ್ಲಿಷ್–ಕನ್ನಡ ಉಪನ್ಯಾಸ ಮಾಲೆಯನ್ನು ಆಗಗೊಳಿಸಿದ್ದು ಇನ್ನೊಂದು ಮುಖ.

ಮರುದಿನ ಬೆಳಗ್ಗೆ ಗದಗನ್ನು ಸೇರಿದೆವು. ಹತ್ತು ಗಂಟೆಗೆ ಅಲ್ಲಿಯ ಹೆಣ್ಣುಮಕ್ಕಳ ಶಾಲೆಯೊಂದರಲ್ಲಿ ಕನ್ನಡದ ಬಾವುಟವನ್ನು ಹಾರಿಸಿದರು. ಹನ್ನೊಂದು ಗಂಟೆಯಿಂದ ಸಂಜೆ ನಾಲ್ಕು ಗಂಟೆಯವರೆಗೂ ಶ್ರೀಯವರು ಎಲ್ಲೆಲ್ಲಿರುತ್ತಿದ್ದರೂ ಅಲ್ಲಲ್ಲಿಯೇ ಕಿರುಸಭೆಗಳು ಸೇರುತ್ತಿದ್ದವು. ಶ್ರೀಯವರು ಕನ್ನಡದ ಏಳಿಗೆಗೆ ಜನ ಮಾಡಬೇಕಾಗಿರುವ ಕೆಲಸಗಳು, ಸುಧಾರಣೆಗಳು, ಕರ್ತವ್ಯಗಳು ಮೊದಲಾದುವನ್ನು ಕನ್ನಡ, ಇಂಗ್ಲಿಷ್, ಕನ್ನಡ–ಇಂಗ್ಲಿಷ್ ಭಾಷೆಗಳಲ್ಲಿ ವಿವರಿಸುತ್ತಿದ್ದರು. ಕೊನೆಯದಾಗಿ ಬಂದವರು ಮೂವರು ಸಂಸ್ಕೃತ ಪಂಡಿತರು, ಮುದುಕರು; ಇವರಲ್ಲಿ ಮೈಸೂರಿನ ಗೋಪಾಲಕೃಷ್ಣಶಾಸ್ತ್ರಿಗಳೂ ಒಬ್ಬರು. ಅದಾವುದೋ ಗುಡಿಯೊಂದರಲ್ಲಿ ಭಾಷಣ ಮಾಡಬೇಕೆಂದು ಆಹ್ವಾನಿಸಿದರು. "ನಿಮ್ಮಂಥವರು ಬಂದು ಕೇಳಿದರೆ ನಾನು ಆಜ್ಞೆಯೆಂದು ತಿಳಿಯುತ್ತೇನೆ. ನನಗೆ ಈಗ ಬಿಡುವಿದೆ" ಎಂದರು. ಪಂಡಿತರು "ಹಾಗಿದ್ದರೆ ಇನ್ನೊಂದರ್ಧ ಗಂಟೆಯೊಳಗಾಗಿ ಅಲ್ಲಿಗೆ ದಯಮಾಡಿಸೋಣವಾಗಲಿ" ಎಂದು ಹೇಳಿ ಹೊರಟುಹೋದರು.

ಈ ಕಾರ್ಯಕ್ರಮ ನಡೆದದ್ದು ಯಾವುದೋ ದೇವಾಲಯದ ಮುಖ ಮಂಟಪದಲ್ಲಿ. ಸುಮಾರು ಐವತ್ತು ಜನ (ಬಹುವಾಗಿ ಸಂಸ್ಕೃತ ಪಂಡಿತರು, ವೈದಿಕರು) ನೆರೆದಿದ್ದರು. ಗೋಪಾಲಕೃಷ್ಣಶಾಸ್ತ್ರಿಗಳು ಅಧ್ಯಕ್ಷತೆ ವಹಿಸಿದರು. ಶ್ರೀಯವರು ಮಾಡಿದ ಭಾಷಣದ ಸಾರಾಂಶ ಹೀಗಿತ್ತು—"ನೀವೆಲ್ಲ ಸಂಸ್ಕೃತ ಪಂಡಿತರು, ಸಂಸ್ಕೃತ ಪಾಠ ಹೇಳುತ್ತಿದ್ದೀರಿ. ಆದ್ದರಿಂದ ನಿಮಗೆ ಸಂಸ್ಕೃತ ಒಂದು ಜೀವನೋಪಾಯ ಮಾರ್ಗ. ಈ ಕಾಲದಲ್ಲಿ ಸಂಸ್ಕೃತದ ಉಪಯೋಗ ಇದಕ್ಕಿಂತ ಹೆಚ್ಚಾಗಿಲ್ಲ. ನಿಮಗೆ ಸಂಸ್ಕೃತ ವ್ಯಾಮೋಹ. ನಿಮ್ಮ ಮನೆ ಮಾತು, ತಾಯ್ನುಡಿ, ಮುದ್ದಾದ ತಿಳಿಗನ್ನಡ. ತಾಯ್ನುಡಿಯನ್ನು ಮಲ ತಾಯಿಯನ್ನಾಗಿಟ್ಟುಕೊಂಡು ಸಂಸ್ಕೃತವನ್ನು ಹೆತ್ತ ತಾಯಿಯಾಗಿ ಭಾವಿಸಿ ಕೊಂಡಿದ್ದೀರಿ . . ." ಈ ವೇಳೆಗೆ ಸಭೆಯಲ್ಲಿ ಗುಸುಗುಸು ಆರಂಭವಾಗಿ ರಘುಪತ್ಯಾಚಾರ್ಯ (ಅಥವಾ ರಘುನಾಥಾಚಾರ್ಯ ಎಂದೋ ನನಗೆ ಜ್ಞಾಪಕ ವಿಲ್ಲ) ಎಂಬೊಬ್ಬರು ಎದ್ದು ನಿಂತು "ಸ್ವಾಮಿ, ನಮಗೆ ಸಂಸ್ಕೃತ ಜೀವನೋಪಾಯ

ಮಾತ್ರವಲ್ಲ; ಪ್ರಥಮವಾಗಿ, ಅಧಿಕವಾಗಿ, ಆತ್ಮಜ್ಞಾನೋಪಾಯ" ಎಂದು ಹೇಳಿ ಮಂಟಪದ ಮೂಲೆಗಂಬದ ಹತ್ತಿರ ಸಿಂಧೂರ ಬಳಿದಿದ್ದ ಹನುಮಂತನ ವಿಗ್ರಹದ ಅಡಿಯಲ್ಲಿ ತನಿಯಾಗಿ ಹೋಗಿ ಕುಳಿತುಬಿಟ್ಟರು. ಅಧ್ಯಕ್ಷರು ಎದ್ದುನಿಂತು "ಸಭಿಕರು ಸಹೃದಯತೆಯಿಂದ ವರ್ತಿಸಬೇಕಾಗಿ ಪ್ರಾರ್ಥಿಸುತ್ತೇನೆ" ಎಂದರು. ಶ್ರೀಯವರೂ "ಮನ್ನಿಸಬೇಕು. ನನ್ನ ಮಾತುಗಳನ್ನು ಕೊನೆಯವರೆಗೂ ಲಾಲಿಸಬೇಕು" ಎಂದು



ಬೇಡಿಕೊಂಡು ಮುಂದುವರಿಸಿದರು—"ನಾನು ಹೇಳಿದ ನುಡಿ ನಿಜವಾದದ್ದರಿಂದ ನಿಮಗೆ ಒಪ್ಪಿಗೆಯಾಗದೆ ಹೋಯಿತೋ ಏನೋ! ವಿಷಯ ಇಷ್ಟು: ನಿಮ್ಮ ಮನೆಮಾತಿಗೆ ಮೊದಲನೇ ಜಾಗ ಕೊಡಬೇಕು, ನಿಮ್ಮ ಪಾಠಶಾಲೆಗಳಲ್ಲಿ ಕನ್ನಡ ಬಳಗಗಳನ್ನು ಹುಟ್ಟಿಸಿ ಬೆಳಸಿಕೊಂಡುಬರಬೇಕು. ನಿಮ್ಮಂಥ ಹಿರಿಯರು ಕನ್ನಡಮ್ಮನ ಮಕ್ಕಳಿಗೆ ಅವರ ನಿಜವಾದ ತಾಯಿ ಯಾರೆಂಬುದರ ಅರಿವು ಕೊಡಬೇಕು . . . " ಎಂದೂ ಮುಂತಾಗಿ ಒಂದರ್ಧ ಗಂಟೆ ಮಾತನಾಡಿ, "ಸಂಸ್ಕೃತವಿಲ್ಲದಿದ್ದರೆ ಕನ್ನಡ ಬೆಳೆಯದು ಎಂಬ ನಿಮ್ಮ ಭಾವನೆ ಹೋಗಬೇಕು" ಎಂದು ಹೇಳಿ ಕುಳಿತುಕೊಂಡರು. ಸಭಿಕರಲ್ಲಿ ಉತ್ಸಾಹದ ಅಂಕುರಗಳೇನೂ ಕಾಣಲಿಲ್ಲ. ಕೆಲವರ ಕಣ್ಣುಗಳು ಮಾತ್ರ ದುರುದುರುಗುಟ್ಟುತ್ತಿದ್ದವು. ಗೋಪಾಲಕೃಷ್ಣಶಾಸ್ತ್ರಿಗಳು "ಇಂಥ ಜಿಜ್ಞಾಸಾಪ್ರಚೋದಕಗಳಾದ ವಿಷಯಗಳನ್ನು ನಮ್ಮ ಅವಗಾಹನೆಗೆ ಮಂಡಿಸಿದುದಕ್ಕಾಗಿ . . . " ಎಂದೂ ಮುಂತಾದ್ದಾಗಿ ವಂದನಾರ್ಪಣೆ ಮಾಡಿದರು. ಗುಡಿಯ ಮೂಲವಿಗ್ರಹವಾದ ಹನುಮಂತರಾಯನಿಗೆ ಮಂಗಳಾರತಿಯಾಯಿತು. ಈ ಸಭೆ ಹೀಗೆ ಮುಗಿದು, ಶ್ರೀಯವರೂ ಗೋಪಾಲಕೃಷ್ಣಶಾಸ್ತ್ರಿಗಳೂ ಬೆನ್ನು ತಿರುಗಿಸಿದರು. ರಘುಪತ್ಯಾ

ಚಾರ್ಯರ ನೇತೃತ್ವದಲ್ಲಿ ಅದೇ ಜನ ಇನ್ನೊಂದು ಸಭೆ ಸೇರಿದರು. ಈ ಸಭೆಯ ನಡವಳಿಕೆಗಳನ್ನು ಗಮನಿಸುವ ಚಪಲ ನನಗೆ ಬಹಳವಿತ್ತಾದರೂ ಸಾಧ್ಯವಾಗಲಿಲ್ಲ.

ಮಧ್ಯಾಹ್ನ ನಾಲ್ಕುಗಂಟೆಗೆ ಹೊಸಪೇಟೆಯನ್ನು ತಲಪಿದೆವು. ಮೊದಲನೆಯ ಕಾರ್ಯಕ್ರಮ—ಅಲ್ಲಿಯ ಕರ್ಣಾಟಕ ಸಂಘದಲ್ಲಿ ಆರಂಭ ಭಾಷಣ. ಮಾಧ್ಯಮಶಾಲೆಯ ಹುಡುಗನೊಬ್ಬ ಭೂತಾಕಾರದಲ್ಲಿ ಬರೆದಿದ್ದ ಕನ್ನಡನಾಡಿನ ಭೂಪಟವನ್ನು ಸಭಾಂಗಣದಲ್ಲಿ ತೂಗಹಾಕಿದ್ದರು. ಶ್ರೀಯವರು ಅದನ್ನು ಕಂಡೊಡನೆಯೆ ಐದು ನಿಮಿಷ ಪರವಶರಾದವರಂತೆ ನಿಂತುಬಿಟ್ಟರು. "ಎಷ್ಟು ಮುದ್ದಾಗಿದೆ, ಅಲ್ಲವೆ?" ಎಂದು ಪಕ್ಕದಲ್ಲಿದ್ದವರೆಲ್ಲರನ್ನೂ ಕೇಳಿದರು. ಯಾರೂ ಯಾವೊಂದು ಉತ್ತರವನ್ನೂ ಕೊಡಲಿಲ್ಲ. ಕನ್ನಡನಾಡಿನ ಆಕೃತಿಯಲ್ಲಾಗಲಿ, ಆ ಹುಡುಗುತನದ ಗೀಟುಗಳಲ್ಲಾಗಲಿ ನನಗಾವ ಮುದ್ದೂ ಕಾಣಲಿಲ್ಲವಾದ್ದರಿಂದ ನಾನೂ ಸುಮ್ಮನಿದ್ದೆ. ಹೊಸಪೇಟೆಯ ಕನ್ನಡಿಗರು ಮಂಕುಬಡಿದವರಂತೆ ಕಣ್ಣುಬಾಯಿಗಳನ್ನು ಬಿಟ್ಟುಕೊಂಡು ನಿಂತಿದ್ದರು. ಆ ಮಹಾಜನರಿಗೆ ಶ್ರೀಯವರ ಕನ್ನಡ ಅರ್ಥವಾಗಿದ್ದಿರಲಾರದು. ಶ್ರೀಯವರು ಬಹುಶಃ "ಭಾಳ ಛಲೋ ಅದ, ಹೇಂಗ್ರಿ?" ಎಂದಿದ್ದಿದ್ದರೆ ಒಡನೆಯೆ "ಹೌದ್ಹೌದ್ರಿ" ಎನ್ನುತ್ತಿದ್ದರೆಂದು ನನ್ನ ಅಭಿಪ್ರಾಯ. ಆ ಭೂಪಟದ ಶಿಲ್ಪಿಯ ಕೈಲಿ ಒಂದು ಹೂಮಾಲೆಯನ್ನು ಕೊಟ್ಟು ಹಿರಿಯರೊಬ್ಬರು "ಹಾಕೋ ತಮ್ಮಾ!" ಎಂದರು. ಅವನು ತನ್ನ ಕೃತಿ ತೂಗಾಡುತ್ತಿದ್ದ ಗೂಟಕ್ಕೆ ಹಾರವನ್ನು ಏರಿಸಿದ. ಹಿರಿಯರು ಹಾಹಾಕಾರವೆಬ್ಬಿಸಿ "ಅಯ್ಯೋ, ಮಂಗನಾಥ! ಅದಕಲ್ಲೋ, ಶ್ರೀಕಂಠಯ್ಯನೋರಿಗೋ!" ಎಂದು ಕೂಗಿದರು. ಶ್ರೀಯವರು ಸಂತೋಷದಿಂದ ಹುಡುಗನನ್ನು ಅಪ್ಪಿಕೊಂಡು, ಹಾರವನ್ನು ಭೂಪಟಕ್ಕೇ ಹಾಕಿಸಿ, ಕನ್ನಡತಾಯಿಯ ಗಾತ್ರ ವಿಸ್ತೀರ್ಣಗಳನ್ನೇ ಕುರಿತು ಮಾತನಾಡಿದರು.

ಎರಡನೆಯ ಕಾರ್ಯಕ್ರಮ ನಡೆದದ್ದು—ಊರಿನ ವೀರಶೈವ ಪ್ರಮುಖರೊಬ್ಬರ ಮನೆಯಲ್ಲಿ. ನೆರೆದಿದ್ದವರು ಹದಿನೈದು ಮಂದಿ. ಅವರಲ್ಲಿ ಐದು ಪಂಗಡಗಳವರು,—ಮರಾಠಿ-ಕನ್ನಡವಾದಿ, ತೆಲುಗು-ಕನ್ನಡವಾದಿ, ಹಿಂದಿ-ಕನ್ನಡವಾದಿ, ಮೈಸೂರು ಕನ್ನಡ-ಧಾರವಾಡ ಕನ್ನಡವಾದಿ. ಈ ಸಭೆಗೆ

ನಿಯತ ಕಾರ್ಯಕ್ರಮವಾಗಲಿ ನಿಶ್ಚಿತ ಉದ್ದೇಶವಾಗಲಿ ಇದ್ದಂತೆ ನನಗೆ ತೋರಲಿಲ್ಲ. ಶ್ರೀಯವರ ಮಾತನ್ನು ಯಾರೂ ಅಪೇಕ್ಷಿಸಿದಂತೆಯೂ ತೋರ ಲಿಲ್ಲ. ಒಂದೊಂದು ಪಂಗಡದ ನಾಯಕನೂ ತನ್ನ ಮೂಗಿನ ನೇರಕ್ಕೆ ಒರ ಟೊರಟಾಗಿ ಮಾತನಾಡಿಕೊಂಡು, ಕನ್ನಡಿಗರು ತಮಗೆ ಅನ್ಯಾಯ ಮಾಡುತ್ತಿ ದ್ದಾರೆಂದು ಬಿರುಸಿನಿಂದ ವಾದಿಸಿದ. ಐದನೆಯ ಪಂಗಡದ ನಾಯಕನ (ನಾಯ ಕನೂ ಅವನೇ, ಅನುಯಾಯಿಯೂ ಅವನೇ) ತರ್ಕವಂತೂ ವಿಪರೀತ ಅಸಂಬದ್ಧ ವಾಗಿತ್ತು. ಆತ ಹಿಂದೆಂದೋ ಮೈಸೂರು ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿ ಯಾಗಿದ್ದನಂತೆ; ಇಂಟರ್ ಪರೀಕ್ಷೆಗೆ 'ಹತ್ತಿದ್ದ'ನಂತೆ; ಇಂಗ್ಲಿಷ್ ಭಾಷೆಯಲ್ಲಿ ತೇರ್ಗಡೆಯಾಗದೆಹೋದುದರಿಂದ ಬಿ.ಎ., ಡಿಗ್ರಿಗೆ 'ಕೂಡ್ರುವ' ಅವಕಾಶವಿಲ್ಲದೆ ಹೋಯಿತಂತೆ; ಇದಕ್ಕೆ ಶ್ರೀಯವರು ಕಾರಣರಂತೆ; ಏಕೆಂದರೆ, ಈ 'ಪರಮ ಅನ್ಯಾಯ' ನಡೆದಾಗ ಶ್ರೀಯವರೇ ಪ್ರಾಧ್ಯಾಪಕರು! ಆದರೇನಂತೆ! ಈಗ ಪ್ಲೀಡರ್ ಆಗಿ ಇಂಗ್ಲಿಷಿನಲ್ಲಿ ವಾದಮಾಡಿ ಕೇಸುಗಳನ್ನು ಗೆಲ್ಲುತ್ತಿದ್ದಾನಂತೆ, ಹಣವನ್ನೂ ಸಂಪಾದಿಸುತ್ತಿದ್ದಾನಂತೆ, ಊರಿನ ಗಣ್ಯರಲ್ಲೊಬ್ಬನಾಗಿ ಸಹಸ್ರಾರು ಅನುಯಾಯಿಗಳಿಗೆ ನಾಯಕನಾಗಿದ್ದಾನಂತೆ! "ಇಂಥ ಅನ್ಯಾಯಗಳು ನಿಂತ ಹೊರತು ಕನ್ನಡ ನಾಡಿನ ಏಕೀಕರಣ ಸಾಧ್ಯವಿಲ್ಲ" ಎಂದು ಮುಕ್ತಾಯ ಮಾಡಿದ. ಇಷ್ಟನ್ನೂ ಶ್ರೀಯವರು ಶಾಂತರಾಗಿ ಕೇಳಿ, "ಹಿರಿಯದೊಂದು ಗುರಿಯ ಮುಡಿವಿಗೆ ನಾವು ದುಡಿಯಬೇಕು. ಸಣ್ಣಸಣ್ಣ ಕೊರತೆಗಳನ್ನು ಮರೆತುಬಿಡಬೇಕು . . . " ಎಂದು ಹೇಳುತ್ತಿದ್ದಂತೆಯೆ ವಿವಿಧ ಪಂಗಡಗಳವರೂ "ಅದು ಹೇಂಗ್ರಿ ಸಾಧ್ಯ?" ಎಂದು ಒಕ್ಕೊರಲಿನಿಂದ ಅಬ್ಬರಿಸಿದರು. ವೀರ ಶೈವಗಣ್ಯರು ಕೈ ಕೈ ಹಿಸುಕಿಕೊಳ್ಳುತ್ತ, ಮರ್ಯಾದೆಯಿಂದ ನಡೆದುಕೊಳ್ಳ ಬೇಕೆಂದು ಸಭಿಕರಿಗೆ ಸನ್ನೆ ಮಾಡಿದರು. ಶ್ರೀಯವರ ಮುಖದ ಮೇಲೆ ಒಂದು ಬಗೆಯ ನಗು ಸುಳಿಯಿತು. ಭಾಷಣವನ್ನು ಮುಂದುವರಿಸಹೋಗಲಿಲ್ಲ. ಆತಿಥೇಯರ ಕಿವಿಯಲ್ಲಿ ಏನೋ ಪಿಸುಮಾತು ಹೇಳಿದರು. ಅವರು ಅರ್ಧ ಅರೆಮನಸ್ಸಿನಿಂದಲೂ ಇನ್ನರ್ಧ ಸಂಕೋಚದಿಂದಲೂ ಪ್ರಯಾಸದಿಂದ ಎದ್ದು ನಿಂತು, ಶ್ರೀಯವರು ಮುಂದಕ್ಕೆ ಪ್ರಯಾಣ ಮಾಡಬೇಕಾಗಿರುವುದರಿಂದ ಅವರಿಂದ 'ನಾಲ್ಕು ಸಲಹೆಯ ಮಾತುಗಳನ್ನು' ಕೇಳಲು ಸಮಯವಿಲ್ಲದೆ ಹೋದುದಕ್ಕೆ ವಿಷಾದವನ್ನು ವ್ಯಕ್ತಪಡಿಸಿ, ಹಂಪೆಯಿಂದ ಹಿಂತಿರುಗುವಾಗಲಾ

ದರೂ ಇದು ಸಾಧ್ಯವಾಗುವಂತಾಗಲಿ ಎಂದು ಹಾರೈಸಿ ವಂದನಾರ್ಪಣೆ ಮಾಡಿದರು.

ಅಂದಿನ ಕೊನೆಯ ಕಾರ್ಯಕ್ರಮ—ಯಾವುದೋ ಪ್ರೌಢಶಾಲೆಯ ವಿದ್ಯಾರ್ಥಿಗಳಿಂದ ವಿವಿಧ ವಿನೋದಾವಳಿ. ಶ್ರೀಯವರು ಅಧ್ಯಕ್ಷತೆ ವಹಿಸಿದರು. 'ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು' ಎಂಬ ಗೀತೆಯನ್ನು ಇಬ್ಬರು ಹುಡುಗರು ಕಠೋರವಾಗಿ, ಅಶ್ರಾವ್ಯವಾಗಿ ಹಾಡಿದರು. ಮುಂದಿನ ಅಂಕ ನವೀನವೂ ಆಗಿತ್ತು, ನಗುಪಾಡೂ ಆಗಿತ್ತು. ಭರತಮಾತೆಯಂತೆ ವೇಷತೊಟ್ಟ ಹುಡುಗನೊಬ್ಬ ರಂಗದ ಹಿಂಭಾಗದಲ್ಲಿ ಬಂದು ನಿಂತ. ಗಾಂಧಿಟೋಪಿ ಹಾಕಿಕೊಂಡ ಹುಡುಗನೊಬ್ಬ ಬಂದು ಶ್ರೀಯವರ 'ಭರತಮಾತೆಯ ವಾಕ್ಯ'ವನ್ನು 'ಅನ್ನ'ಲಾರಂಭಿಸಿದ. ಈ ಪದ್ಯದಲ್ಲಿನ ಒಂದೊಂದು ಪ್ರಶ್ನೆಯನ್ನು 'ಅಂದ' ಹಾಗೆಲ್ಲ ಭರತಮಾತೆಯ ತಲೆಯೂ ನಿಲುವೂ ನಾಚಿಕೆಯಿಂದಲೋ ಏನೋ ಕುಗ್ಗಿಕುಗ್ಗಿ ಸೊರಗಿಹೋಗುತ್ತಿದ್ದವು; "ಧರ್ಮ ಶಾಂತಿ ಸ್ವತಂತ್ರವಲ್ಲವೆ ನಮ್ಮ ಹಿರಿಯರ ನುಡಿಗಳು?" ಎಂದು ಕೇಳುವಷ್ಟುಹೊತ್ತಿಗೆ ಸರಿಯಾಗಿ ಭರತಮಾತೆ ಪೂರ್ತಿ ಕುಸಿದುಬಿದ್ದಳು. "ಭರತಮಾತೆಯೆ, ಭರತಮಾತೆಯೆ, ನಿನ್ನ ಮಾತನು ಮರೆಯೆವು"—ಎಂಬ ನುಡಿಯನ್ನು ಹಾಡುತ್ತ ಹುಡುಗ ನರ್ತನಮಾಡ 'ಹತ್ತಿದ'; ಭರತಮಾತೆಯೂ ದಿಡೀರೆಂದು ಮೇಲೆದ್ದು ಅವನೊಂದಿಗೆ ಕುಣಿಯುತ್ತ ಸೇರಿಕೊಂಡಳು. ಇಬ್ಬರೂ ಹಾಡುತ್ತ ಕುಣಿಯುತ್ತ ಪದ್ಯವನ್ನು ಮುಗಿಸಿದರು. ಮಿಕ್ಕ ಅಂಕಗಳು ನನಗೆ ಸರಿಯಾಗಿ ಜ್ಞಾಪಕವಿಲ್ಲ. ಶ್ರೀರಂಗರ 'ಮನೆಯಲ್ಲಿ ಮಹಾಸಭೆ' ಏಕಾಂಕನಾಟಕ, ಬೇಂದ್ರೆಯವರ ಕೆಲವು ಪದ್ಯಗಳ ವಾಚನ, ಇನ್ನಾವುದೋ ಕನ್ನಡ ನಾಟಕಗಳ ತುಣುಕುಗಳು, ಜಾನಪದ ನೃತ್ಯ, ಮೊದಲಾದವೆಲ್ಲ ನಡೆದವು. ಒಬ್ಬಾತ ಸರ್ವಜ್ಞಕವಿಯಂತೆ ವೇಷ ಹಾಕಿಕೊಂಡು ಕೆಲವು ವಚನಗಳ ಅಣಕವಾಡುಗಳನ್ನು ಹೇಳಿದ. ಅವುಗಳಲ್ಲೊಂದು ಹೀಗಿತ್ತು (ಜ್ಞಾಪಕದಿಂದ ಹೇಳುತ್ತಿದ್ದೇನೆ; ಸ್ವಲ್ಪ ಅದಲುಬದಲಾಗಿದ್ದರೂ ಇರಬಹುದು):

ಶ್ರೀಕಂಠ ಸಿರಿಕಂಠ ಕನ್ನಡದ ಹಿರಿಭಂಟ
ಕನ್ನಡದ ನಾಡುನುಡಿಗಳ ಗಂಟ ಶಿರದಲಿ
ತಳೆದ ಸಿರಿಗಂಡ—ಸರ್ವಜ್ಞ

ಇದನ್ನು ಕೇಳಿ ಶ್ರೀಯವರಿಗೆ ಸಂತೋಷವಾಯಿತೋ ಇಲ್ಲವೋ, ಸಭಿಕರಂತೂ "ಅಗದಿ" ಕರತಾಡನಮಾಡಿ ಕಂಠಘೋಷದ ಮಳೆಗರೆದರು. ಶ್ರೀಯವರು ಇಲ್ಲಿ ಮಾಡಿದ ಭಾಷಣ ಕಿರಿಯ ಪ್ರಮಾಣದ್ದೆಂದೇ ಹೇಳಬೇಕು,—ಕೇವಲ ಮೂವತ್ತು ನಿಮಿಷಗಳು. ಕನ್ನಡದ ಏಳಿಗೆಗೆ ಜನ ಮಾಡಬೇಕಾಗಿರುವ ಕೆಲಸಗಳನ್ನು ವಿವರಿಸಿದರು. ಕೊನೆಯದಾಗಿ, "ಈ ನುಡಿಗಳನ್ನು ಎಲ್ಲರೂ ಒಕ್ಕೊರಲಿನಿಂದ ಜಯಕಾರಮಾಡಬೇಕು,—ಸಿರಿಗನ್ನಡಂ ಗೆಲ್ಗೆ! ಕನ್ನಡ ತಾಯ್ ಬಾಳ್ಗೆ!" ಈ ಅಕ್ಷರಗಳ ಕ್ರಮ ಸ್ಪೂನರಿನ ಸೂತ್ರರೀತ್ಯಾ ನೂರಾರು ರೀತಿಯಲ್ಲಿ ಅಸ್ತವ್ಯಸ್ತಗೊಂಡು ಸಭಿಕರ ಬಾಯಿಂದ ಪ್ರತಿಧ್ವನಿಸಿದುವು.

ಶ್ರೀಯವರನ್ನು ಚೆನ್ನಾಗಿ ಅರಿತು, ಅವರ ಜತೆಯಲ್ಲಿ ದುಡಿದ ಹಿರಿಯರೆಲ್ಲರೂ ಶ್ರೀಯವರು ಕನ್ನಡನಾಡುನುಡಿಗಳ ಏಳಿಗೆಗಾಗಿ ಆತ್ಮಸಮರ್ಪಣೆ ಮಾಡಿಕೊಂಡಿದ್ದ ರೀತಿಗಳನ್ನೂ ವರ್ಣಿಸಿದ್ದಾರೆ. ನನ್ನಂಥ ಕಿರಿಯರಿಗೆ ಇವರ ಮಾತುಗಳಲ್ಲಿ ಸ್ವಲ್ಪ ಉತ್ಪ್ರೇಕ್ಷೆಯಿರಬಹುದೇನೋ ಎನ್ನಿಸುತ್ತಿತ್ತು. ಐವತ್ತೈದು ವಯಸ್ಸಿನ ಶ್ರೀಯವರ ಒಂದೂವರೆ ದಿನದ ಕಾರ್ಯಕ್ರಮವನ್ನು ಕಣ್ಣಾರೆ ಕಂಡ ಮೇಲೆ—ಅವರ ಗೆಳೆಯರಾಡಿದ್ದ ಮಾತುಗಳ ಸತ್ಯಾಂಶ ನನಗೆ ಸ್ಪಷ್ಟವಾಯಿತು.

ಎ. ಆರ್. ಕೃ.

ಪ್ರೌಢಶಾಲೆಯಲ್ಲೂ ಇಂಟರ್‌ಮೀಡಿಯಟ್ ಕಾಲೇಜಿನಲ್ಲೂ ನನಗೆ ಆನಂದಮಠ, ದುರ್ಗೇಶನಂದಿನಿಗಳ ಪಾಠವಾಗಿತ್ತು. ಪಾಠ ಹೇಳಿದವರ ದುರದೃಷ್ಟವೋ ಹೇಳಿಸಿಕೊಂಡವನ ದುರದೃಷ್ಟವೋ, ನನಗೆ ವೆಂಕಟಾಚಾರ್ಯರ ಕಾದಂಬರಿಗಳ ವಿಷಯದಲ್ಲಿ ಉತ್ಸಾಹವಂತೂ ಉಂಟಾಗಲಿಲ್ಲ. ತಾತ್ಸಾರದ ಮೊಳಕೆಯೇ ಅಂಕುರವಾಯಿತೆಂದು ಹೇಳಬೇಕು. ಆನರ್ಸ್ ತರಗತಿಗೆ ಬಂದಾಗಲೂ "ವಿಷವೃಕ್ಷ" ಪಾಠಪುಸ್ತಕವಾಯಿತು. ಎ. ಆರ್. ಕೃಷ್ಣಶಾಸ್ತ್ರಿಗಳವರೇ ಇದನ್ನು ಪಾಠಹೇಳುವುದಕ್ಕೆ ಬಂದರು. ಈ ಕಾದಂಬರಿಯನ್ನು ಹಿಂದೆಯೇ ಒಂದು ಸಲ ತಿರುವಿಹಾಕಿದ್ದೆ; 'ಪ್ರಬುದ್ಧ ಕರ್ಣಾಟಕ'ದ ಸಂಚಿಕೆಯೊಂದರಲ್ಲಿ ಕೃಷ್ಣಶಾಸ್ತ್ರಿಗಳವರು ಈ ಕಾದಂಬರಿಯನ್ನು ಕುರಿತು ಬರೆದಿದ್ದ ವಿಮರ್ಶೆಯನ್ನೂ ಓದಿದ್ದೆ. ಗೊತ್ತಿದ್ದ ಕತೆಯನ್ನು ಇನ್ನೊಂದು ಸಲ ಹಾಸುಗೆಯ ಮೇಲೆ ಓದಿಕೊಂಡು, ಈ ವಿಮರ್ಶೆಯನ್ನೂ ಸ್ವಲ್ಪ ಜಾಗರೂಕತೆಯಿಂದ ಓದಿಕೊಂಡೆನಾದರೆ ಪರೀಕ್ಷೆಯಲ್ಲಿ ಶೇಕಡ ಅರವತ್ತು ನಂಬರು ಗಿಟ್ಟಿಸಬಹುದೆಂದು ಆತ್ಮವು ವಿಶ್ವಾಸದಿಂದ ನುಡಿಯಿತು. ಈ ಪುಸ್ತಕವನ್ನು ಪಾಠಕ್ಕಾಗಿ ಆರಿಸಿದವರ ಮೇಲೆ ಕೋಪವೂ ಬಂತು. ಕನ್ನಡ ಪಾಠತರಗತಿಗಳಲ್ಲಿ ಹಾಜರಿರಬೇಕೆ? ಎಂಬ ಧರ್ಮಸಂಕಟ ಒದಗಿತು. ನಮಗೆ ನಿಯತವಾಗಿದ್ದ ಇನ್ನೊಂದು ಪಠ್ಯ ಪುಸ್ತಕ ಶ್ರೀನಿವಾಸರ 'ರವೀಂದ್ರನಾಥ ಠಾಕೂರರು'. ಒಟ್ಟಿನಲ್ಲಿ ನಮ್ಮ ದುರದೃಷ್ಟ—ಪಠ್ಯಪುಸ್ತಕಗಳೆಂದೆನಿಸಿಕೊಂಡಿದ್ದ ಎರಡೂ ಬಂಗಾಳಿಸಾಹಿತ್ಯಕ್ಕೆ ಸಂಬಂಧಪಟ್ಟವು; ಒಂದು ಬಂಗಾಳಿಭಾಷೆಯಿಂದ ಕನ್ನಡಕ್ಕೆ ತರ್ಜುಮೆ, ಇನ್ನೊಂದು ಬಂಗಾಳಿ ಲೇಖಕನ ಬಂಗಾಳಿ ಬರಹಗಳ ಕೃತಿವಿಮರ್ಶೆ (ಕನ್ನಡದಲ್ಲಿ). ಕನ್ನಡ ಸಾಹಿತ್ಯವನ್ನೇ ಆಗಲಿ ಕನ್ನಡ ಸಾಹಿತ್ಯವಿಷಯವನ್ನೇ ಆಗಲಿ ಒಳಕೊಂಡ ಕನ್ನಡ ಪಠ್ಯಪುಸ್ತಕಗಳೇ ಇರಲಿಲ್ಲವೋ ಏನೋ!

ಮೊದಲನೇ ಎರಡುಮೂರು ಪಾಠಗಳಿಗೆ ಗೈರುಹಾಜರಿಯಾದೆ. ಮುಂದಿನ ಪಾಠ ಮುಗಿಸಿಕೊಂಡು ಕೃಷ್ಣಶಾಸ್ತ್ರಿಗಳವರು ತಮ್ಮ ರೂಮಿಗೆ ಹಿಂತಿರುಗಿ



ಎ. ಆರ್. ಕೃ.

ಬರುತ್ತಿದ್ದಾಗ ಅನಿರೀಕ್ಷಿತವಾಗಿ ಸಿಕ್ಕಿಬಿದ್ದೆ. ಕಕ್ಕಾಬಿಕ್ಕಿಯಾಗಿ ಕಂಡೂ ಕಾಣದವನಂತೆ ಅವರ ರೂಮಿನ ಪಕ್ಕದಲ್ಲಿದ್ದ 'ನಾರಾಯಣನ ಹೋಟೆಲಿ'ಗೆ ನುಸುಳಿಕೊಂಡೆ. ಐದು ನಿಮಿಷ ಕಳೆದ ಮೇಲೆ ಮುದ್ದಯ್ಯನ ಕೈಲಿ ಹೇಳಿಕಳು ಹಿಸಿದರು. ಹೋದೆ.

"ಬಾ, ಕುಳಿತುಕೊ."

"ಪರವಾಯಿಲ್ಲ, ಸರ್."

"ಪರವಾಯಿಲ್ಲದ್ದೇನು ಬಂತು? ಎದುರಿಗೆ ಬಂದು ಕೂತುಕೊ ಎಂದರೆ ಪರವಾಯಿಲ್ಲ ಎನ್ನುತ್ತೀಯಲ್ಲ!"

ಹವ ಬದಲಾಯಿಸಿದೆ ಎಂದುಕೊಂಡು ಒಳಗೆ ಹೋಗಿ ಕುಳಿತೆ. ಕೇಳಿದರು :

"ತಿಂಡಿ ತಿಂದದ್ದಾಯಿತೊ? ಕಾಫಿ ಕುಡಿದದ್ದಾಯಿತೊ?"

"ಆಯ್ತು, ಸರ್."

"ಕೊ, ಬಾಯಲ್ಲಿ ಹಾಕಿಕೊ" ಎಂದು ಎರಡು ಬಾದಾಮಿ ಪೆಪ್ಪರ್ ಮಿಂಟ್‌ಗಳನ್ನು ಕೊಟ್ಟು,

"ಕ್ಲಾಸುಗಳ ಟೈಮ್‌ಟೇಬಲ್ ಬರೆದುಕೊಂಡಿದ್ದೀಯೊ?" ಎಂದರು.

"ಇದೆ, ಸರ್."

"ಕನ್ನಡ ಕ್ಲಾಸುಗಳದು?"

"ಅದೂ ಇದೆ, ಸರ್."

"ಪಠ್ಯಪುಸ್ತಕಗಳನ್ನು ಕೊಂಡುಕೊಂಡಿದ್ದೀಯೊ?"

"ಹೂಂ, ಸರ್."

"ಸ್ವಯಮಾಚಾರ್ಯನಾಗಬೇಕೆಂದಿದ್ದೀಯೊ?"

ಸುಳ್ಳು ಹೇಳಿ ತಪ್ಪಿಸಿಕೊಳ್ಳುವುದಕ್ಕೆ ಹೋಗಿ ಇನ್ನೇನಾದರೂ ಅನಾಹುತ ಗಳಾಗಬಹುದೆಂಬ ಹೆದರಿಕೆಯಿಂದ ಸುಮ್ಮನಿದ್ದೆ.

"ಶ್ರೀಕಂಠಯ್ಯನವರ ಕ್ಲಾಸಿಗೆ ತಪ್ಪದೆ ಹೋಗುತ್ತೀಯಂತೆ! ನಿನ್ನ ಡಿಪಾರ್ಟ್‌ಮೆಂಟಿನಲ್ಲಿ ಎಲ್ಲ ತರಗತಿಗಳಿಗೂ ಹೋಗುತ್ತೀಯಂತೆ! ಸಿ. ಆರ್. ನಾರಾಯಣರಾಯರ ಕ್ಲಾಸುಗಳಿಗೆ ಹಾಜರಾಗುತ್ತೀಯಂತೆ! ಕನ್ನಡಕ್ಕೆ ಮಾತ್ರ ಯಾಕಪ್ಪ—ಈ ಅನಾದರಣೆ ಎನ್ನಲೆ? ಅವಮರ್ಯಾದೆ ಎನ್ನಲೆ? . . ."

ಇಷ್ಟೊಂದು ಸತ್ಯಾಂಶಗಳನ್ನು ಸಂಗ್ರಹಿಸಿಟ್ಟುಕೊಂಡಿದ್ದವರ ಹತ್ತಿರ ನನ್ನ ಆಟ ಏನುತಾನೆ ನಡೆದೀತು? "ಇನ್ನುಮೇಲೆ ಸರಿಯಾಗಿರುತ್ತೇನೆ, ಸರ್. ಕ್ಷಮಿಸಬೇಕು" ಎಂದೆ.

ಸುಳಿನಗೆಯೊಂದಿಗೆ "ಈಗೆಲ್ಲಪ್ಪ ಕ್ಷಮಿಸುವುದು! ಈ ವರ್ಷ ನೀನು ಕರ್ಣಾಟಕ ಸಂಘದ ಕಾರ್ಯದರ್ಶಿಯಾಗಿ ಕೆಲಸಮಾಡಿಯಾದಮೇಲೆ ಕ್ಷಮಿಸುತ್ತೇನೆ. ಮುಂದಿನ ಎರಡು ವರ್ಷ ನಿನ್ನ ಮುಖ್ಯ ಸಬ್ಜೆಕ್ಟ್ ಬೆಳೆದುಬಿಡುತ್ತದೆ; ಪರೀಕ್ಷೆಗಳೂ ಬಂದುಬಿಡುತ್ತವೆ. ಆದ್ದರಿಂದ ಈ ವರ್ಷವೇ ಕಾರ್ಯದರ್ಶಿಯಾಗಿಬಿಡು" ಎಂದರು.

ಭೇಟಿಯ ಮೊದಲನೇ ಭಾಗವನ್ನು ಮಾತ್ರ ಊಹಿಸಿಕೊಂಡಿದ್ದೆ; ಎರಡನೆಯದನ್ನು ನಿರೀಕ್ಷಿಸಿರಲಿಲ್ಲ. ದಿಗ್ಭ್ರಾಂತನಾದೆ. "ಎರಡು ದಿನವಾದಮೇಲೆ ಹೇಳುತ್ತೇನೆ, ಸರ್" ಎಂದೆ. "ಆಗಬಹುದು" ಎಂದರು.

* * * *

೧೯೩೭ರಲ್ಲಿ ಬಿ.ಎಂ.ಶ್ರೀ. ಅವರು ನಮ್ಮ ಸಂಘದ ಅಧ್ಯಕ್ಷರು; ಎ.ಆರ್.ಕೃ. ಅವರು ಉಪಾಧ್ಯಕ್ಷರು; ನಾನು ಕಾರ್ಯದರ್ಶಿಯಾಗಿದ್ದದ್ದು ಕಾಗದದ ಮೇಲೆ ಮಾತ್ರ. ಕೆಲಸ ಮಾಡಿದವರು ಬೇರೆ, ಮಾಡಿಸುತ್ತಿದ್ದವರು ಬೇರೆ.

ಆಗಿನ ಕರ್ಣಾಟಕ ಸಂಘದಲ್ಲಿ ನಡೆಯುತ್ತಿದ್ದ ಕೂಟಗಳಿಗೆ ಹೊರಗಿನವರನ್ನೂ—ಸಂಘದ ಹಿತೈಷಿಗಳು, ಮಹಾಜನಗಳು, ಸಾಹಿತ್ಯಾಭಿಮಾನಿಗಳು, ಇತ್ಯಾದಿ—ಅಚ್ಚಾದ ಆಹ್ವಾನಪತ್ರಿಕೆ ಕೊಟ್ಟು ಕರೆಯುವುದು ವಾಡಿಕೆಯಾಗಿತ್ತು. ಒಂದು ಸಲ ಯಾವುದೋ ಒಂದು ಕಾರ್ಯಕ್ರಮ ಅನಿರೀಕ್ಷಿತವಾಗಿ ಇತ್ಯರ್ಥವಾಗಿತ್ತು. ಆಹ್ವಾನಪತ್ರಿಕೆ ಅಚ್ಚಾಗಿ ಸಂಘದ ಕೈ ಸೇರಿದಾಗ, ಕಾರ್ಯಕ್ರಮ ಆರಂಭವಾಗುವುದಕ್ಕೆ ಕೇವಲ ೨೪ ಗಂಟೆಗಳು ಮಾತ್ರ ಉಳಿದಿದ್ದವು. ಕವರುಗಳಿಗೆ ವಿಳಾಸಗಳನ್ನು ಬರೆದು, ಆಹ್ವಾನಪತ್ರಿಕೆಗಳನ್ನು ಅದರೊಳಗಿಟ್ಟು ವಿಳಾಸದಾರರಿಗೆ ಆ ಸಂಜೆಯೇ ತಲಪಿಸಬೇಕು. ಕೃಷ್ಣಶಾಸ್ತ್ರಿಗಳವರೂ ನಾನೂ ಕುಳಿತುಕೊಂಡು ಸುಮಾರು ೬೦ ಕವರುಗಳಿಗೆ ವಿಳಾಸ ಬರೆದೆವು. "ನೀನು ಈ ನಲವತ್ತನ್ನು ತೆಗೆದುಕೊ. ಮಲ್ಲೇಶ್ವರ, ಚಾಮರಾಜಪೇಟೆ, ಶಂಕರಪುರಗಳನ್ನು ನೋಡಿಕೊ. ನಾನೂ ಈ ಇಪ್ಪತ್ತನ್ನು ತೆಗೆದುಕೊಂಡು

ವಿಶ್ವೇಶ್ವರಪುರ, ಬಸವನಗುಡಿ ನೋಡಿಕೊಳ್ಳುತ್ತೇನೆ" ಎಂದರು. ನನಗೆ ನಾಚಿಕೆಯಾಯಿತು. ಸಂಘದ ಉಪಾಧ್ಯಕ್ಷರು, ನನ್ನ ಗುರುಗಳು, ಆಹ್ವಾನ ಪತ್ರಿಕೆಗಳನ್ನೆತ್ತಿಕೊಂಡು ಸೈಕಲಿನ ಮೇಲೆ ಮನೆಮನೆಗೂ ಸುತ್ತಾಡುವುದು ನನಗೆ ಸ್ವಲ್ಪವೂ ಇಷ್ಟವಾಗಲಿಲ್ಲ. "ತಾವು ಬೇಡಿ, ಸರ್. ಈಗ ಈ ಕಟ್ಟನ್ನು ಮುಗಿಸಿ, ನಾಳೆ ಬೆಳಗ್ಗೆ ಕಾಲೇಜಿಗೆ ಬರುವ ದಾರಿಯಲ್ಲಿ ತಮ್ಮ ಹತ್ತಿರವಿರುವ ಕವರುಗಳನ್ನೂ ನಾನೇ ತಲಪಿಸುತ್ತೇನೆ" ಎಂದೆ. "ಅದು ಸರಿಯಪ್ಪ! ಆದರೆ ನೀನು ನಾಳೆ ತಲಪಿಸುವ ವೇಳೆಗೆ ಅವರೆಲ್ಲ ಆಫೀಸುಗಳಿಗೆ ಹೊರಟುಬಿಟ್ಟದ್ದರೆ ಏನು ಪ್ರಯೋಜನವಾದಹಾಗಾಯಿತು?" ಎಂದು ಸ್ವಲ್ಪ ಸಿಡುಕಿ, ಮರುಕ್ಷಣವೆ ನಸುನಗೆಯೊಂದಿಗೆ "ಪರವಾಯಿಲ್ಲ, ಯಾರಾದರೂ ಕೇಳಿದರೆ ನೀನೇ ತಲಪಿಸಿದೆ ಎಂದು ಹೇಳುತ್ತೇನೆ, ಹೋಗು" ಎಂದುಬಿಟ್ಟರು.

ನನ್ನ ಸುತ್ತು ಮುಗಿಸಿಕೊಂಡು ಮನೆ ಸೇರಿಕೊಂಡೆ. ಬಿ.ಎಂ.ಶ್ರೀ. ಅವರು ನನ್ನ ತಂದೆಯವರೊಂದಿಗೆ ಮಾತನಾಡಿಕೊಂಡಿದ್ದರು. ಕೃಷ್ಣಶಾಸ್ತ್ರಿಗಳವರು ಒಳಕ್ಕೆ ಬಂದು, ಕೋಟಿನ ಜೇಬಿನಿಂದ ಅವರಿಬ್ಬರ ವಿಳಾಸಗಳನ್ನು ಬರೆದಿದ್ದ ಕವರುಗಳನ್ನು ತೆಗೆದು ಅವರವರ ಕೈಗೆ ಕೊಟ್ಟರು. "ಇದೇನು ನೀವೇ ತಂದುಬಿಟ್ಟಿರಿ? ಕಾರ್ಯದರ್ಶಿ . . . ?" ಎಂದು ಶ್ರೀಯವರು ಕೇಳಿದರು. ಅಷ್ಟರಲ್ಲಿ ನನ್ನ ತಂದೆಯವರು ಕೊಟ್ಟ ವಿವರಣೆ :—"ಕಾರ್ಯದರ್ಶಿಗಳು ದಿವ್ಯವಾಗಿ ನಿರ್ವಹಿಸುತ್ತಿದ್ದಾರೆಯಲ್ಲ! ಕಾರ್ಯಮಾಡುವವರನ್ನು ದರ್ಶಿಸುತ್ತ ನಿಂತಿದ್ದಾರೆ ನೋಡಿ!" ಎಂದು ಅಲ್ಲೆಲ್ಲಿಯೋ ಸುಳಿದಾಡುತ್ತಿದ್ದ ನನ್ನನ್ನು ತೋರಿಸಿದರು. ನನ್ನ ತಂದೆಯವರು ಹೇಳಿದ್ದು ಅಕ್ಷರಶಃ ನಿಜ. ಕರ್ಣಾಟಕ ಸಂಘದ ಕಾರ್ಯದರ್ಶಿಯಾಗಿ ನಾನು ನಿಭಾಯಿಸಿದ್ದು ಇಷ್ಟೆ.

* * * *

ಮೊದಲನೇ ವರ್ಷದ ಸಯನ್ಸ್ ಆನರ್ಸ್ ವಿದ್ಯಾರ್ಥಿಗಳೆಲ್ಲರಿಗೂ ಸಾಮೂಹಿಕವಾಗಿ ಭಾಷಾಪಾಠಪ್ರವಚನಗಳು ನಡೆಯುತ್ತಿದ್ದುವು. ಇಂಥ ವಿದ್ಯಾರ್ಥಿಗಳ ಒಟ್ಟು ಸಂಖ್ಯೆ ಅರವತ್ತಕ್ಕೆ ಮೀರಿತ್ತು. ಇಂಗ್ಲಿಷ್ ಪಾಠಗಳಲ್ಲಿ ಈ ಸಂಖ್ಯೆ ಪೂರ್ಣವಾಗಿರುತ್ತಿತ್ತು. ಇದರಲ್ಲಿ ಸುಮಾರು ಇಪ್ಪತ್ತೈದು ಹುಡುಗರ ದ್ವಿತೀಯಭಾಷೆ ಉರ್ದು, ತೆಲುಗು, ತಮಿಳು, ಅಥವಾ ಸಂಸ್ಕೃತ;

ಉಳಿದವರದು ಕನ್ನಡ. ಆದರೂ ಕನ್ನಡ ಪಾಠಗಳಿಗೆ ಇಪ್ಪತ್ತು ಹುಡುಗರಿಗಿಂತ ಹೆಚ್ಚಾಗಿ ಕೂಡುತ್ತಿರಲಿಲ್ಲವೆಂದು ನನ್ನ ಜ್ಞಾಪಕ. "ವಿಷವೃಕ್ಷ" ಬೆಳೆಯುತ್ತ ಬೆಳೆಯುತ್ತ ತಳೆದಿದ್ದ ಚಿಗುರು ಹೂ ಹಣ್ಣುಗಳನ್ನು ಉದುರಿಸಿಬಿಟ್ಟು ನೀರಸವಾದ ಕೊಂಬೆರೆಂಬೆಗಳನ್ನು ತಳೆದಂತೆ ಭಾಸವಾಯಿತು, ನಮಗೆ. ಪಾಠವೊಂದಕ್ಕೆ ಪುಸ್ತಕದ ಐದಾರು ಪುಟ ಓದುವುದು, ಅಲ್ಲಲ್ಲಿ ಕೆಲವು ಪದಗಳಿಗೆ ಅರ್ಥ ಹೇಳುವುದು, ಪಾತ್ರವಿಮರ್ಶೆಮಾಡುವುದು, ಕತೆಯ ಓಟ ಬೆಳವಣಿಗೆಗಳನ್ನು ಕುರಿತು ವ್ಯಾಖ್ಯಾನ ಹೇಳುವುದು, ಸಾಮಾಜಿಕ ಪ್ರಸಂಗಗಳನ್ನೆತ್ತಿ ಗುಣಾವಗುಣಗಳ ತಾರತಮ್ಯವಿಶೇಷಗಳನ್ನು ವಿವರಿಸುವುದು, ಅಪರೂಪವಾಗಿ ಒಂದೊಂದು ಸಲ ಹಾಸ್ಯಸಂದರ್ಭಗಳಲ್ಲಿ ತಮ್ಮದೇ ಆದ ರೀತಿಯಲ್ಲಿ ಉಪಮಾನಕೊಡುವುದು, ಹೀಗೆ ಸಾಗುತ್ತಿತ್ತು, ವಿಷವೃಕ್ಷದ ಪ್ರಗತಿ. ವರ್ಷ ಪೂರ್ತಿ ಈ ಒಂದು ಪುಸ್ತಕವನ್ನು ಪಾಠಹೇಳಬೇಕಾಗಿದ್ದುದರಿಂದ ಒಂದೊಂದು ಸಲ ಎರಡು ಪುಟ ಮಾತ್ರ ಓದಿ, "ಮುಂದಿನ ದಿನಗಳಿಗೆ ಸ್ವಲ್ಪ ಮಿಗಿಸಿಟ್ಟುಕೊಂಡಿರೋಣ" ಎಂದು ಹೇಳಿ, ಪೀರಿಯಡ್ ಮುಗಿಯುವವರೆಗೂ ನಡೆದಿದ್ದ ಕತೆಯನ್ನು ಮೊದಲಿನಿಂದ ಹೇಳುತ್ತಿದ್ದರು. ಅರ್ಥಾತ್, 'ಡೀಟೆಯ್‌ಲ್ಡ್' ಪಾಠನಡೆಯುವ ರೀತಿಯಲ್ಲಿಯೇ 'ನಾನ್‌ಡೀಟೆಯ್‌ಲ್ಡ್' ಪಾಠವೂ ನಡೆಯುತ್ತಿತ್ತು. ಇದರ ಫಲವಾಗಿ—ಪಾಠಗಳಿಗೆ ಕ್ರಮವಾಗಿ ಹಾಜರಿರುತ್ತಿದ್ದವರೆಲ್ಲರೂ 'ವಿಷವೃಕ್ಷ'ದ ಒಂದು ಪುಟವನ್ನಾದರೂ ಓದದೆಯೇ ಪರೀಕ್ಷೆಯಲ್ಲಿ ತೇರ್ಗಡೆಯಾದರು!

ಕೆಲವು ಪಾಠವೇಳೆಗಳಲ್ಲಿ ಕತೆಯೋ ವ್ಯಾಖ್ಯಾನವೋ ವಿಪರೀತ ವಿಸ್ತಾರಗೊಳ್ಳುತ್ತಿತ್ತು. ಇದಕ್ಕೆ ಎ. ಆರ್. ಕೃ. ಅವರು ಕಾರಣರೆಂದು ನಾನು ಹೇಳುತ್ತಿಲ್ಲ. ಸನ್ನಿವೇಶ ಹಾಗಿತ್ತು. ಈ ಒಂದು ಪುಸ್ತಕವನ್ನು ಎಂಟು ತಿಂಗಳು ಪಾಠ ಹೇಳಬೇಕಲ್ಲವೆ? ಎರಡು ತಿಂಗಳಲ್ಲಿಯೇ ಮುಗಿಸಿಬಿಟ್ಟರೆ ಆಮೇಲಿನ ಪಾಠವೇಳೆಗಳಲ್ಲೇನುಮಾಡುವುದು? ತರಗತಿಗಳನ್ನು 'ಬಿಟ್ಟುಬಿಡುವ'ಹಾಗಿಲ್ಲ, ನಡಸುವಹಾಗಿಲ್ಲ. ಆದ್ದರಿಂದ ಕೃಷ್ಣಶಾಸ್ತ್ರಿಗಳವರು ಉದ್ದೇಶಪೂರ್ವಕವಾಗಿಯೇ "ವಿಷವೃಕ್ಷಧ್ಯಾನಾ ಸಾವಧಾನಾ" ಮಂತ್ರವನ್ನವಲಂಬಿಸಬೇಕಾಗಿಬಂದಿತು. ಇಂಥ ಪಾಠವೇಳೆಗಳಲ್ಲಿ ಹುಡುಗರು ತಮ್ಮದೆ ಆದ ಕೆಲವು ರೀತಿಗಳಲ್ಲಿ ತಮ್ಮ ಅಂತರಂಗವನ್ನು ಬಹಿರಂಗಪಡಿಸುತ್ತಿದ್ದರು. ಕೃಷ್ಣಶಾಸ್ತ್ರಿಗಳವರಿಗೆ ಇವೆಲ್ಲವೂ

ಶ್ವಪಚತನದ ಲಕ್ಷಣಗಳಾಗಿ ಕಂಡುಬಂದವು. ತೂಕಡಿಸುತ್ತಿದ್ದವರನ್ನು ಹೆಸರು ಹಿಡಿದು ಕೂಗಿ ಎಬ್ಬಿಸಿ, "ಅಪ್ಪ, ಪಕ್ಕದ ರೂಮಿನಲ್ಲಿ ವಾಷ್‌ಬೇಸಿನ್ ಇದೆ; ಅಲ್ಲಿ ಹೋಗಿ ಮುಖ ತೊಳೆದುಕೊಂಡು ಬಾಯಿ ಮುಕ್ಕುಳಿಸಿಕೊಂಡು ಕಣ್ಣು ಗಳಿಗೆ ಚೆನ್ನಾಗಿ ತಣ್ಣೀರು ಚಿಮುಕಿಸಿಕೊಂಡು ಬಂದು ಕುಳಿತುಕೊಳ್ಳಿ" ಎನ್ನು ತ್ತಿದ್ದರು. ಹಿಂದಿನ ಬೆಂಚಿನಲ್ಲಿ ಪಿಸುಮಾತನಾಡಿಕೊಳ್ಳುತ್ತಿದ್ದವರಿಗೆ "ಅಪ್ಪ, ಹೊರಗೆ ಹೋಗಿ ನಿಮ್ಮ ಸಂಸಾರತಾಪತ್ರಯಗಳನ್ನು ಮಾತನಾಡಿಕೊಂಡಾದ ಬಳಿಕ ಒಳಗೆ ಬನ್ನಿ" ಎಂದು ಸಲಹೆ ಕೊಡುತ್ತಿದ್ದರು. ಕಾರದ ಕಡಲೆಯನ್ನೋ ಬಟಾಣಿಯನ್ನೋ ಕುರುಕುತ್ತಿದ್ದ ಶ್ರೀನಿವಾಸನಿಗೆ "ಅಯ್ಯ, ಸೀನಪ್ಪ, ಕ್ಲಾಸು ಮುಗಿಯುವವರೆಗೂ ಹಸಿವನ್ನು ತಡೆದುಕೊಂಡಿರುವುದಕ್ಕಾಗದಿದ್ದರೆ ಹೊರಗೆ ಹೋಗಿ ತಿಂದುಬಿಟ್ಟು ಬಾಯಿ ತೊಳೆದುಕೊಂಡು ಬಾ" ಎಂದು ಆಜ್ಞಾಪಿಸಿ, ಅವನು ಕ್ಲಾಸಿನಿಂದ ಎದ್ದು ಹೋಗುವವರೆಗೂ ಪಾಠವನ್ನು ಮುಂದುವರಿಸುತ್ತಿರ ಲಿಲ್ಲ. ಉಗುರು ಕಚ್ಚುತ್ತಿದ್ದ ಪದ್ಮನಾಭನಿಗೆ "ಏನಪ್ಪ, ಇಪ್ಪತ್ತು ವರ್ಷ ವಯಸ್ಸಾಗಿದೆ! ಇನ್ನೂ ಬೆಟ್ಟು ಚೀಪುವ ಅಭ್ಯಾಸ ಬಿಡುವುದಕ್ಕಾಗುವುದಿಲ್ಲವೆ? ರಾಮರಾಮ! ಪಕ್ಕದ ರೂಮಿಗೆ ಹೋಗಿ ಕೈಬಾಯಿಗಳನ್ನು ಚೆನ್ನಾಗಿ ತೊಳೆದು ಕೊಂಡು ಬಂದು ಕೂತುಕೊ" ಎಂದು ಹಾಗೆಯೇ ಮಾಡಿಸುತ್ತಿದ್ದರು. ಒಂದು ಸಲ ನನಗೂ ಆಯಿತು—ಬೆರಳನ್ನು ಜೊಲ್ಲಿನಿಂದ ಒದ್ದೆಮಾಡಿಕೊಂಡು ವಿಷ ವೃಕ್ಷದ ಹಾಳೆಗಳನ್ನು ತಿರುವಿಹಾಕುತ್ತಿದ್ದು ಸಿಕ್ಕಿಕೊಂಡೆ. "ಸರಸ್ವತಿಯನ್ನು ಎಂಜಲು ಕೈಲಿ ಮುಟ್ಟುವುದೆಂದರೇನು? ನಾಳೆ ಅವಳ ಮುಖದಲ್ಲಿ ಉಗಿದೂ ಬಿಡು! ಕೈತೊಳೆದು ಬರುವಹಾಗಿದ್ದರೆ ತಿರುಗಿ ಒಳಕ್ಕೆ ಬಾ. ಇಲ್ಲದಿದ್ದರೆ ಅಕೊ, ಆ ನಾರಾಯಣನ ಛತ್ರವಿದೆಯಲ್ಲ, ಅಲ್ಲಿಗೆ ಹೋಗಿಬಿಡು! ಅವನ ಕೊಳಕಿನ ಕೂಪಕ್ಕೂ ನಿನ್ನ ಶ್ವಪಚತನಕ್ಕೂ ಸರಿಹೋಗುತ್ತೆ!" ಎಂದು ಸಿಡುಕಿದರು. ನಮ್ಮಂಥ ಶಿಷ್ಯವರ್ಗದ ಪರಿಚಯ ಕೃಷ್ಣಶಾಸ್ತ್ರಿಗಳವರಿಗೆ ೧೯೧೦ರಿಂದಲೂ ಇದ್ದಿರಬೇಕೆಂದು ನನಗೆ ತೋರುತ್ತದೆ. ಇಲ್ಲದಿದ್ದರೆ ಅವರು "ಉಪಾಧ್ಯಾಯರು ಅವರೆಲ್ಲರನ್ನೂ (ಹುಡುಗರನ್ನು) ಮೊದಲು ಚೊಕ್ಕಟವಾಗಿ ಕೈಕಾಲುಮುಖ ಗಳನ್ನು ತೊಳೆದುಕೊಂಡು ಬರುವಂತೆ ಹೇಳಿದರು" (ಪ್ರಬುದ್ಧ ಕರ್ಣಾಟಕ, ಸಂಚಿಕೆ ೧) ಎಂದು ಬರೆದಿರಲಾರರು.

* * * *

ಸಂಘಕ್ಕೆ 'ವನಸುಮ' ಅಧಿಕೃತವಾದ ಪ್ರಾರ್ಥನಾಗೀತವಾಗಿತ್ತೆಂದು ಆಗಲೇ ಹೇಳಿದ್ದೇನೆ. ಸಂಘದ ಪುಣ್ಯ, ರಾಗಸಹಿತವಾಗಿ ಶ್ರಾವ್ಯವಾಗಿ ಹಾಡುವ ವಿದ್ಯಾರ್ಥಿ ಯಾರಾದರೂ ಪ್ರತಿವರ್ಷವೂ ಕಾಲೇಜಿನಲ್ಲಿ ದೊರಕುತ್ತಿದ್ದರು; ಸಂಘದ ಕಾರ್ಯಕ್ರಮಗಳನ್ನು ಈ ಪ್ರಾರ್ಥನೆಯಿಂದ ಆರಂಭಿಸುತ್ತಿದ್ದರು.



ನಾನು ಕಾರ್ಯದರ್ಶಿಯಾದ ವರ್ಷ ಸಂಘಕ್ಕೆ ಅಂಟಿಕೊಂಡಿದ್ದ ಪುಣ್ಯಫಲ ಉದುರಿಹೋಯಿತು. "ಪದ್ಧತಿ ತಪ್ಪಿ ಹೋಗುವುದಲ್ಲಾ" ಎಂದು ಕೃಷ್ಣಶಾಸ್ತ್ರಿಗಳವರಿಗೂ ನಮಗೂ ವ್ಯಾಕುಲವಾಯಿತು. "ಶ್ರದ್ಧೆ ವಹಿಸಿ ವಿಚಾರಿಸಪ್ಪ, ಇಷ್ಟು ದೊಡ್ಡ ಕಾಲೇಜಿನಲ್ಲಿ ಹಾಡುವವರೊಬ್ಬರಾದರೂ ಇಲ್ಲದಿರುತ್ತಾರೆಯೆ?" ಎಂದರು. ನಾನೂ ಎಷ್ಟೆಷ್ಟೋ ಪ್ರಯತ್ನಪಟ್ಟೆ. ಪ್ರಯೋಜನ ಕಾಣಲಿಲ್ಲ. ಒಂದಿಬ್ಬರೇನೋ ಸಿಕ್ಕಿದರು. ಅವರಲ್ಲೊಬ್ಬ ಸುಮಾರಾಗಿ ಹಾಡುತ್ತಿದ್ದ. ಆದರೆ ಅಸಾಧ್ಯ ನತ್ತಿ. ಇನ್ನೊಬ್ಬ ತಮಿಳ, ಚೆನ್ನಾಗಿ ಸಂಗೀತ ಪಾಠವಾಗಿತ್ತು; ಆದರೆ ಕನ್ನಡಭಾಷೆ ಅವನ ನಾಲಗೆಯಲ್ಲಿ ನುಡಿಯುತ್ತಿರಲಿಲ್ಲ. ಅವರಿಬ್ಬರೂ ಸಂಘದಲ್ಲಿ ಪ್ರಾರ್ಥನೆಯನ್ನು ಹಾಡುವುದಕ್ಕೆ ಸಮ್ಮತಿಸಿದರಾದರೂ ನಾವು ಅಷ್ಟೇನೂ ಉತ್ಸಾಹಿಗಳಾಗಿರಲಿಲ್ಲ. "ಹುಡುಗಿಯರಲ್ಲಿ ಯಾರಾದರೂ ಇದ್ದಾರೆಯೇ, ವಿಚಾರಿಸು" ಎಂದರು ಉಪಾಧ್ಯಕ್ಷರು. ಹುಡುಗಿಯರನ್ನು ಕೇಳುವುದಕ್ಕೆ ನನಗೇಕೋ ಗಂಟಲು ಹಿಡಿಯಿತು. ಒಂದಷ್ಟು ದಿನ ಸುಮ್ಮನಿದ್ದು ಬಿಟ್ಟೆ. ಉಪಾಧ್ಯಕ್ಷರು "ಏನಯ್ಯ, ಸ್ವಾಮಿ, ಯಾರನ್ನಾದರೂ ಕೇಳಿದೆಯೊ?" ಎಂದು ಜ್ಞಾಪಿಸಿದರು. "ಇನ್ನೂ ವಿಚಾರಿಸುತ್ತಿದ್ದೇನೆ, ಸರ್" ಎಂದು ಬುರುಡೆ ಬಿಟ್ಟು ಕಾರ್ಯೋನ್ಮುಖನಾದೆ. ಸಂಗೀತಪಾಠ ಹೇಳಿಸಿಕೊಂಡಿದ್ದ ಒಬ್ಬಾಕೆಯನ್ನು ಕಂಡು, ವಿಷಯ ಹೇಳಿದೆ. ತಗ್ಗಿಸಿದ ತಲೆಯನ್ನು ಮೇಲೆತ್ತದೆ ಸೆರಗಿನ ಕೊನೆಯನ್ನು ಬಾಯಿಗೊತ್ತಿಕೊಂಡು "ನನಗೆ ಕನ್ನಡ ಸಂಗೀತ ಪಾಠವಾಗಿಲ್ಲ" ಎಂದಳು ಆಕೆ. ಒಂದೊಂದು ದ್ರಾವಿಡಭಾಷೆಗೂ ಬೇರೆ ಬೇರೆ ಸಂಗೀತಪದ್ಧತಿ

ಯಿದೆಯೆಂಬ ಆಕೆಯ ಜ್ಞಾನವನ್ನು ಕಂಡು ಸಿಗಿದುಬಿಡಲೇ ಎನ್ನುವಷ್ಟು ರೇಗಿತು. ಬದಲುಕೊಡದೆ ಹಲ್ಲುಕಚ್ಚಿಕೊಂಡು ಬಂದುಬಿಟ್ಟೆ.

ಆನರ್ಸ್ ವಿದ್ಯಾರ್ಥಿಗಳಿಗೆ ನಡೆಯುತ್ತಿದ್ದ ಕನ್ನಡ ತರಗತಿಯಲ್ಲಿಯೇ ಸುಮಾರಾಗಿ ಹಾಡುವವನೊಬ್ಬನಿದ್ದ. ಸಂಗೀತ ಪಾಠವಾಗಿತ್ತು, ಸ್ವಭಾವತಃ ವಿಪರೀತ ನಾಚಿಕೆ, ಗೆಳೆಯರೊಂದಿಗೆ ಕೂಡ ನೇರವಾಗಿ ಮಾತನಾಡುವುದಕ್ಕೆ ಹಿಂಜರಿಯುತ್ತಿದ್ದವನು. ಕೃಷ್ಣಶಾಸ್ತ್ರಿಗಳವರು ಅವನನ್ನು ಪ್ರತ್ಯೇಕವಾಗಿ ಕಂಡು, ಹುರಿದುಂಬಿಸಿದರೆ, ಆತ ಒಪ್ಪಿಕೊಳ್ಳುವ ಸಂಭವವಿತ್ತೆಂದು ಊಹಿಸಿದೆ. ನನ್ನ ಪ್ರಯತ್ನಗಳೆಲ್ಲ ವಿಫಲವಾದದ್ದನ್ನೂ ಆತನ ವಿಷಯವನ್ನೂ ಕೃಷ್ಣಶಾಸ್ತ್ರಿಗಳವರಲ್ಲಿ ಬಿನ್ನಯಿಸಿಕೊಂಡೆ. "ಸರಿ, ನಾನೇ ಕ್ಲಾಸಿನಲ್ಲಿ ಮಾತನಾಡುತ್ತೇನೆ" ಎಂದರು. "ಅಲ್ಲ ಸರ್, ತಾವು ಅವನನ್ನು ಪ್ರತ್ಯೇಕವಾಗಿ . . . " ಎಂದೆ. "ಏನಪ್ಪ, ಎಲ್ಲದಕ್ಕೂ ಪ್ರತ್ಯೇಕ ಪ್ರತ್ಯೇಕ ಎಂದರೆ!" ಎಂದು ಹುಬ್ಬಿನ ಮೇಲೆ ಗಂಟು ಕಾಣಿಸಿದರು. ತೆಪ್ಪಗೆ ಹೊರಗೆ ಬಂದುಬಿಟ್ಟೆ.

ಮುಂದಿನ ಕ್ಲಾಸಿನಲ್ಲಿ ವಿಷವೃಕ್ಷ ಕಾದಂಬರಿಯಲ್ಲಿನ ಒಂದು ಹಾಡನ್ನು ಓದಿ ವ್ಯಾಖ್ಯಾನಮಾಡುತ್ತ, ಅದನ್ನೇ ಸಂದರ್ಭವನ್ನಾಗಿ ಉಪಯೋಗಿಸಿಕೊಂಡು ಕೃಷ್ಣಶಾಸ್ತ್ರಿಗಳವರು ಹೇಳಿದರು: "ಸಿನೆಮಾಗಳಿಗೆ ಹೋಗಿಹೋಗಿ ಆ ನಾರ್ಮನ್ ಷೀರರ್ರೋ ಆ ರೋಮನ್ ನವರೋವೋ ಹಾಡಿದ ಹಾಡುಗಳನ್ನು ಬೇಡವೆಂದರೂ ನಿರ್ಭಯವಾಗಿ ಹಾಡುತ್ತೀರಿ. ಲಕ್ಷಣವಾಗಿ ಒಂದು ಕನ್ನಡ ಹಾಡು ಹೇಳಿ ಎಂದರೆ ನಾಚಿಕೆಪಟ್ಟುಕೊಳ್ಳುತ್ತೀರಿ. ಕರ್ಣಕಠೋರವಾದ ಹಿಂದೀ ಹಾಡುಗಳನ್ನೂ ಇಂಗ್ಲಿಷ್ ಹಾಡುಗಳನ್ನೂ ಅವಲಕ್ಷಣವಾಗಿ ಕಿರಿಚುತ್ತೀರಿ . . . ." ಇದನ್ನು ಕೇಳಿ ಆ ಹುಡುಗ ಭಯಗೊಂಡು ಸಂಘದಿಂದ ಇನ್ನೂ ದೂರದೂರ ಸರಿದುಬಿಟ್ಟ. 'ವನಸುಮ' ಅವ್ಯಕ್ತಪ್ರಾರ್ಥನೆಯಾಗಿ ಉಳಿಯಿತು.

*　　*　　*　　*


ಕರ್ಣಾಟಕ ಸಂಘ ವಿದ್ಯಾರ್ಥಿಗಳಿಂದಲೇ ನಡಸಲ್ಪಟ್ಟು, ವಿದ್ಯಾರ್ಥಿಗಳಿಗಾಗಿ ಕೆಲಸಮಾಡಬೇಕೆಂಬುದು ಚಾಲಕರ ಅಭಿಲಾಷೆಯಾಗಿತ್ತು. ಅದರ ಕಾರ್ಯಕ್ರಮಗಳಲ್ಲಿ ಹೆಚ್ಚುಹೆಚ್ಚಾಗಿ ವಿದ್ಯಾರ್ಥಿಗಳೇ ಪಾಲುಗೊಳ್ಳುವಂತೆ ಪ್ರೇರಿಸುವುದಕ್ಕೆ ಏನೇನು ಮಾಡಲು ಸಾಧ್ಯವೋ ಅವೆಲ್ಲವನ್ನೂ ಮಾಡು

ತ್ತಿದ್ದರು, ಮಾಡಿಸುತ್ತಿದ್ದರು. ಹಾಗೆಯೇ ಕನ್ನಡದಲ್ಲಿ ಬರೆಯುವ ಅಭ್ಯಾಸ ವನ್ನು ಇಟ್ಟುಕೊಳ್ಳುವಂತೆ ವಿದ್ಯಾರ್ಥಿಗಳಿಗೆ ಎಲ್ಲ ಬಗೆಯ ಉತ್ತೇಜನವನ್ನೂ ಕೊಡುತ್ತಿದ್ದರು. ಕೃಷ್ಣಶಾಸ್ತ್ರಿಗಳವರು ವಿಜ್ಞಾನವಿಷಯವಾದ ಬರವಣಿಗೆಗಳಿಗೆ ತೋರಿಸುತ್ತಿದ್ದ ಆದರ ಉತ್ತೇಜನಗಳನ್ನು ಜ್ಞಾಪಿಸಿಕೊಂಡರೆ ಈಗಲೂ ನನಗೆ ಹುಮ್ಮಸ್ಸುಂಟಾಗುತ್ತದೆ. ನಾನು ಕಾಲೇಜಿನಲ್ಲಿದ್ದಾಗಲೇ ನನಗೆ ಪ್ರತ್ಯೇಕವಾಗಿ ಹೇಳುತ್ತಿದ್ದರು,--ಸಸ್ಯಶಾಸ್ತ್ರದ ವಿಷಯ ಏನಾದರೂ ಬರೆದುಕೊಡು, ಎಂದು. ಆಗಿನ ಸ್ಥಿತಿಯಲ್ಲಿ ಸಾಧ್ಯವಾಗಲಿಲ್ಲ; ಏನಾದರೂ ನೆಪ ಹೇಳಿಬಿಡುತ್ತಿದ್ದೆ. ಕಾಲೇಜನ್ನು ಬಿಟ್ಟಮೇಲೆಯೂ ಕೆಲವು ಸಲ ಕೇಳಿದರು. ಸಸ್ಯಶಾಸ್ತ್ರವಿಷಯ ವಾಗಿ ಕನ್ನಡದಲ್ಲಿ ಬರೆಯುವುದಕ್ಕೆ ಸಾಮಗ್ರಿಯಿಲ್ಲದೆ ಇಲ್ಲ. ಬರೆಯದಿದ್ದುದಕ್ಕೆ ಕಾರಣ: ನನ್ನ ಸೋಮಾರಿತನ, ಬರೆದರೆ ಅದೆಲ್ಲಿ ಒಪ್ಪಿಗೆಯಾಗದೆಹೋದೀತೋ ಎಂಬ ಕಳವಳ. ಹೀಗಾಗಿ ಹಿಂದೇಟು ಹಾಕುತ್ತಿದ್ದೆ. ಒಂದು ಸಲ ಮದರಾಸಿನ 'ಹಿಂದೂ' ಪತ್ರಿಕೆಯ ವಾರಸಂಚಿಕೆಯೊಂದರಲ್ಲಿ 'ಕದಂಬ'ಮರದ ವಿಷಯವಾಗಿ ಒಂದು ಸಣ್ಣ ಪ್ಯಾರಾ ಪ್ರಚುರವಾಗಿತ್ತು. ಕೃಷ್ಣಶಾಸ್ತ್ರಿಗಳವರು ಅದನ್ನು ಕತ್ತರಿಸಿ, ಜತೆಯಲ್ಲಿ "ಇದರ ವಿಷಯ ಕನ್ನಡದಲ್ಲಿ ಬರೆದುಕೊಡುತ್ತೀಯಾ?" ಎಂದು ಒಂದು ಕಾಗದ ಬರೆದರು. ಬೇಕಾದಷ್ಟು ಚಿತ್ರಗಳನ್ನು ಕೊಡಬಹುದೆಂದೂ ಕದಂಬ ಮರದ ಎಲೆ ಹೂ ಕಾಯಿಗಳ ತ್ರಿವರ್ಣಚಿತ್ರ ದೊರಕಿದಲ್ಲಿ ಅದನ್ನೂ ಪ್ರಕಟಿಸುವುದಕ್ಕೆ ಏರ್ಪಾಟುಮಾಡಲಾಗುವುದೆಂದೂ ಬರೆದಿದ್ದರು. ಈ ಉತ್ತೇಜ ನದ ಫಲವೇ ನನ್ನ ಮೊದಲನೆಯ ಕನ್ನಡ ಬರವಣಿಗೆ; ಪ್ರಬುದ್ಧ ಕರ್ಣಾಟಕದಲ್ಲಿ ಬೆಳಕು ಕಂಡಿತು.



ವಿ. ಸೀ.

ವಿ. ಸೀ.



"ಅಳೆದು ಕಟ್ಟಿದಂತೆ ಒಂದೇ ಸಮನಾಗಿ ರುಮಾಲು ಕಟ್ಟಬಲ್ಲ . . . ಕೌಶಲವನ್ನು . . . ನನಗೂ ಕೊಡಬಾರದೆ, ದೇವರೆ, ಏನು ಪಕ್ಷಪಾತ" ಎಂದು ಮೊರೆಯಿಟ್ಟರಂತೆ, ವಿ. ಸೀತಾರಾಮಯ್ಯನವರು. ಅವರ ಮೊರೆ ಅರಣ್ಯ ರೋದನವಾಯಿತೆಂಬುದು ಅವರ ಅಭಿಪ್ರಾಯವಾಗಿರುವಂತಿದೆ. ಆದರೆ ಅವರು ಸ್ವತಃ ಕಟ್ಟಿ ಕಿರೀಟದಂತೆ ತಲೆಗಿಟ್ಟುಕೊಂಡ ಮೈಸೂರು ರುಮಾಲನ್ನು ನೋಡಿದ ವರಿಗೆ ಅವರ ತಪಸ್ಸು ಫಲಿಸಿತೆಂಬುದು ಮನದಟ್ಟಾಗುತ್ತಿತ್ತು. ಜರಿಗೆ ರುಮಾ ಲಾಗಲಿ, ರೇಶ್ಮೆಯ ರುಮಾಲಾಗಲಿ, ಮಲ್‌ರುಮಾಲಾಗಲಿ ಒಂದೇ ಅಚ್ಚಿನಲ್ಲಿ ಎರಕಹೊಯ್ದಂತೆ ಕಟ್ಟುವ ಸಿದ್ಧಿಯನ್ನು ಪಡೆದಿದ್ದರು. ವಿ.ಸೀ. ಯವರ ರುಚಿ ರಸಿಕತೆಗಳನ್ನು ಕುರಿತು ಅವರ ಮನಸ್ಸಿನಲ್ಲಿ ಭಿನ್ನಾಭಿಪ್ರಾಯಗಳಿರಲಿಲ್ಲವಾದರೂ ಅವರ ನಡೆನುಡಿಗಳನ್ನು ಕಂಡ ನಮ್ಮನಮ್ಮಲ್ಲಿ ನಡೆಯುತ್ತಿದ್ದ ವಾಗ್ಯುದ್ಧಗಳಿಗೆ ಕೊರತೆಯೇನೂ ಇರಲಿಲ್ಲ. ಇಂಗ್ಲೆಂಡಿನಿಂದ ಆಮದಾಗುತ್ತಿದ್ದ ೧೨೦೩ ಎಂಬ ಚಿನ್ಹೆಯ ಮಲ್ಲುಬಟ್ಟೆಗೆ ವಿಪರೀತ ಬೆಲೆ; ಒಂದೆರಡು ಸಲ ಒಗೆದ ಮೇಲೆ ಈ ಬಟ್ಟೆಗೆ ಒದಗುತ್ತಿದ್ದ ಮುರುಗು ನವುರುಗಳು ಇನ್ನಾವ ಧೋತ್ರಕ್ಕೂ ಬಾರವು. ವಿ.ಸೀ.ಯವರ ಪಂಚೆಕಚ್ಚೆ ಈ ಬಟ್ಟೆಯಿಂದ ರೂಪುಗೊಳ್ಳಬೇಕು. ಹೀಗೆ ತೀಡಿತೀಡಿ ಹಾಕಿದ ಕಚ್ಚೆಪಂಚೆಯ ನಿರಿಗೆ, ಪದರಪದರಗಳ ನುಣುಪಾದ ನೈಜ ವಾದ ಹರಿವು ಮಗ್ಗದ ದುಪ್ಪಟಿಗೂ ಖಾದಿ ತುಂಡಿಗೂ ಬಂದಾವೆ? ಕೊನೆಯ ಎರಡು ಬಗೆಗಳೂ ಅಗ್ಗದ ಮಾಲು, ನಿಜ; ಈ ತೆರನಾದ ಬಟ್ಟೆಯಿಂದಲೂ ಕಚ್ಚೆಪಂಚೆ ಕಟ್ಟಿಕೊಳ್ಳಲು ಸಾಧ್ಯವಿಲ್ಲದೆ ಇಲ್ಲ. "ಮೈಮುಚ್ಚುವಂತೆ ಒಂದು

ಬಟ್ಟೆಯಿದ್ದರೆ ಸಾಕು. ಇದು ಶುಚಿಯಾಗಿರಬೇಕಾದದ್ದು ಮುಖ್ಯ. ನಮ್ಮ ಋಷಿಗಳು ಪಂಚೆಕಚ್ಚೆಯನ್ನು ೧೭೦೩ ಮಲ್ಲಿನಿಂದಲೇ ಹಾಕಿಕೊಳ್ಳುತ್ತಿದ್ದರೆ? ಒಂದಕ್ಕೆ ಹತ್ತರಷ್ಟು ಬೆಲೆಕೊಟ್ಟು ೧೭೦೩ ಮಲ್ಲೇ ಬೇಕೆನ್ನುವುದು ಬರಿಯ ಭಾನಸ" ಎಂಬುದು ನಮ್ಮಲ್ಲಿ ಕೆಲವರ ಅಭಿಪ್ರಾಯ. "ಬಟ್ಟೆಹಾಕಿಕೊಳ್ಳು ವುದರಲ್ಲೂ ಒಂದು ರುಚಿ ಬೇಡವೆ? ಅಗ್ಗದ ಸೂತ್ರವನ್ನೇ ಅನುಸರಿಸುವುದಾದರೆ ಹತ್ತಿಬಟ್ಟೆತಾನೆ ಏಕೆಬೇಕು, ಋಷಿಗಳಂತೆ ನಾರುಮಡಿಯನ್ನೇ ಉಡಬಹುದಲ್ಲ! ಅದೂ ಬೇಡ. ಎಲೆಗಳನ್ನುಹೊಲಿದು ನಡುವಿಗೂ ಮೈಗೂ ಸುತ್ತಿಕೊಳ್ಳಬಹುದಲ್ಲ! ಒಂದು ಕಾಸೂ ವೆಚ್ಚವಾಗದು! ಪಂಚೆ ಕಚ್ಚೆಹಾಕಿದರೆ ಅದು ಪಂಚೆಕಚ್ಚೆ ಯಂತೆಯೇ ಇರಬೇಕಲ್ಲದೆ ಒಂದು ಚಾಪೆಯನ್ನುಸುತ್ತಿಕೊಂಡಂತೆಯೋ ರಟ್ಟಿನ ಕವಚದಂತೆಯೋ ಕಾಣಬಾರದು. ಪಂಚೆಯಲ್ಲಿ ಪಂಚೆತನವೂ ಕಚ್ಚೆಯಲ್ಲಿ ಕಚ್ಚೆತನವೂ ಕಾಣಬೇಕಾದರೆ ಅನುಗುಣವಾದ ಬಟ್ಟೆಯ ರಖಂ ಅನಿವಾರ್ಯ!" ಎನ್ನುವುದು ಪ್ರತಿಕಕ್ಷಿ. ವಿ.ಸೀ.ಯವರ ಸಿಲ್ಕ್ ಕೋಟಿಗೂ ಇದೇ ತೆರನಾದ ತರ್ಕ. ಅವರ ರುಮಾಲು ಮಾತ್ರ ತರ್ಕಾತೀತವಾದದ್ದು.

ನಾನು ಇಂಟರ್‌ಮೀಡಿಯಟ್ ಕಾಲೇಜನ್ನು ಸೇರುವ ಮೊದಲೇ ನನಗೆ ವಿ.ಸೀ.ಯವರಲ್ಲಿಗೆ ಹೋಗಿಬರುವ ಬಳಕೆಯಿತ್ತು. ನಾನು ಹುಡುಗುತನದ 'ಹಾಬಿ'ಯಾಗಿ ಬರೆಯುತ್ತಿದ್ದ ವರ್ಣಚಿತ್ರಗಳನ್ನು ಅವರಿಗೆ ಆಗಾಗ ತೋರಿಸು ತ್ತಿದ್ದೆ. ನನಗೆ ತಿಳಿಯುವ ಭಾಷೆಯಲ್ಲಿ ಅವುಗಳಲ್ಲಿನ ನ್ಯೂನಾತಿರೇಕಗಳನ್ನು ತಿಳಿಸಿ ನನ್ನ ಹವ್ಯಾಸಕ್ಕೆ ನೀರೆರೆಯುತ್ತಿದ್ದರು. ಇದರಿಂದ ನನ್ನ ಅಭಿರುಚಿಯೂ ಹಸ್ತಗುಣವೂ ಯಾವ ರೀತಿಯಲ್ಲಿ ಬೆಳೆಯಬೇಕೋ ಆ ರೀತಿಯಲ್ಲಿ ಹೆಜ್ಜೆ ಯಿಡುತ್ತ ಮುನ್ನಡೆಯಿತೆಂಬುದರಲ್ಲಿ ಸಂದೇಹವಿಲ್ಲ.

ವಿ.ಸೀ.ಯವರ ಪಾಠಕ್ರಮವನ್ನು ಕುರಿತು ನಮ್ಮಲ್ಲಿ ಸ್ವಲ್ಪ ಅಭಿಪ್ರಾಯ ಭೇದಗಳಿದ್ದುವು. ಕನ್ನಡ ಗದ್ಯವಾಗಲಿ ನಾಟಕವಾಗಲಿ ಪದ್ಯವಾಗಲಿ, ವಿ.ಸೀ. ಯವರು ಪಾಠಹೇಳುತ್ತಿದ್ದ ಮಾಧ್ಯಮ–ಇಂಗ್ಲಿಷ್. ಒಂದು ಗಂಟೆಯ ಪಾಠ ದಲ್ಲಿ ಅರ್ಧಗಂಟೆಯಷ್ಟಾದರೂ ಇಂಗ್ಲಿಷ್ ಮಾತುಗಾರಿಕೆಯಿಲ್ಲದೆ ಇರುತ್ತಿರಲಿಲ್ಲ. ಈ ಬಗೆಯ ಉಣಿಸು ರುಚಿಯಾಗಿಯೇ ಇರುತ್ತಿತ್ತು. ಎರಡು ಭಾಷೆಗಳಲ್ಲಿ,


ಸಾಹಿತ್ಯಗಳಲ್ಲಿ ಅವರಿಗಿದ್ದ ಪರಿಚಯಸಂಪತ್ತೂ ವಾಗ್ಧೋರಣೆಯೂ ನಮ್ಮನ್ನು ಮುಗ್ಧಗೊಳಿಸಿದ್ದವು. ಆದರೂ ಕನ್ನಡವನ್ನು ಶುದ್ಧ ಕನ್ನಡದಲ್ಲಿಯೇ ಹೇಳುವುದು ಸಾಧ್ಯವಿಲ್ಲವೆ ಎಂಬ ಪ್ರಶ್ನೆಯೂ ಸಾಮಾನ್ಯವಾಗಿ ಎದ್ದು ನಿಲ್ಲುತ್ತಿತ್ತು, —ನಮ್ಮಲ್ಲಿ ಇಂಗ್ಲಿಷ್ ಭಾಷಾಜ್ಞಾನ ಸಾಕಷ್ಟು ಇಲ್ಲದಿದ್ದವರಿಗೆ.

ಅಂದಿನ ಕನ್ನಡ ತರಗತಿಗಳನ್ನು ಈಗ ನೆನೆಸಿಕೊಂಡರೆ ನಗುವೂ ಅಳುವೂ ಒಟ್ಟಿಗೆ ಬರುತ್ತವೆ. ಕನ್ನಡದ ದುರದೃಷ್ಟವೋ ನಮ್ಮ ದುರದೃಷ್ಟವೋ ಅಧ್ಯಾಪಕರ ದುರದೃಷ್ಟವೋ, ಕನ್ನಡ ಪಾಠಗಳೆಲ್ಲ ದಿನದ ಕೊನೆಯ ಪೀರಿಯಡ್‌ಗಳಿಗೆ ಹೊಂದಿಕೊಂಡು ಬಂದಿದ್ದವು. ಹಾಜರಿಪಟ್ಟಿಯಲ್ಲಿದ್ದ ಐವತ್ತು ಜನರಲ್ಲಿ ಪಾಠಕ್ಕೆ ಬರುತ್ತಿದ್ದವರು ಅರ್ಧಕ್ಕರ್ಧ. ಹಾಜರಿಯಿದ್ದವರೂ ಐದು ಗಂಟೆಯಾಗುವ ಸಮಯವನ್ನೇ ಕಾದು ಕುಳಿತಿರುವುದು ಸಾಮಾನ್ಯವಾಗಿತ್ತು. ವಿ.ಸೀ.ಯವರ ಪಾಠಕ್ಕೆ ಹೀಗಲ್ಲ, ಹಾಜರಿಪಟ್ಟಿಯಲ್ಲಿದ್ದವರೆಲ್ಲರೂ ಕಲೆಯುತ್ತಿದ್ದರು. ಇದಕ್ಕೆ ಕಾರಣಗಳು ಎರಡು: ಮೊದಲನೆಯದು, ಆಗಲೇ ಹೇಳಿದಂತೆ, ಅವರ ಪಾಠವಿಧಾನದ ಸೊಗಸು. ಎರಡನೆಯದು, ಅವರಲ್ಲಿ ನಮಗಿದ್ದ ಭಯಭಕ್ತಿಗಳು. ಇವು ತಾವಾಗಿಯೇ ನಮ್ಮಲ್ಲಿ ಉತ್ಪನ್ನವಾಗಿದ್ದುವಾದರೂ, ವಿ.ಸೀ.ಯವರು ಮೊತ್ತಮೊದಲನೆಯ ಸಲ ಪಾಠ ಹೇಳಲು ಬಂದಾಗ ನಡೆದ ಸಣ್ಣ ಸಂಗತಿಯೊಂದನ್ನು ಈ ಸಂದರ್ಭದಲ್ಲಿ ನೆನೆಸಿಕೊಳ್ಳಬೇಕು. ಗಳಗನಾಥರ 'ಈಶ್ವರೀಸೂತ್ರ'ವನ್ನು ಪಾಠ ಹೇಳಲು ಬಂದರು. ಕೊನೆ ಬೆಂಚಿನ ಹುಡುಗರು ಚುಕ್ಕೆಯಾಟದಲ್ಲಿ ಮಗ್ನರಾಗಿದ್ದರು. ವಿ.ಸೀ.ಯವರ ಕಣ್ಣಿಗಿದು ಬಿತ್ತು. ಕಾದಂಬರಿಯ ಪಾತ್ರಪರಿಚಯಗಳನ್ನು ಕನ್ನಡದಲ್ಲಿ ಹೇಳುತ್ತಿದ್ದವರು ಇಂಗ್ಲಿಷಿನಲ್ಲಿ ಗುಡುಗಿದರು —"I shall not tolerate this in my classes. Are you not ashamed of yourselves? If you cannot behave yourselves, I know how to deal with you!" ಈ ಕೊನೆಯ ವಾಕ್ಯವನ್ನು ದಡಿಯರು ಒಂದು ಬಗೆಯಲ್ಲಿಯೂ ಸೀಕಲರು ಇನ್ನೊಂದು ಬಗೆಯಲ್ಲಿಯೂ, ಉಳಿದವರು ಮೂರನೆಯೊಂದು ಬಗೆಯಲ್ಲಿಯೂ ಅರ್ಥಮಾಡಿಕೊಂಡು ಹೆದರಿದರು; ತರಗತಿಗಳಿಗೆ ತಪ್ಪದೆ ಹಾಜರಾಗುತ್ತಿದ್ದದ್ದು ಮಾತ್ರವಲ್ಲ, ನಯಭಕ್ತಿಗಳೊಡನೆಯೂ ನಡೆದುಕೊಳ್ಳುತ್ತಿದ್ದರು.

ಕಾವ್ಯವೇ ಆಗಲಿ, ನಾಟಕವೇ ಆಗಲಿ, ವಿ.ಸೀ.ಯವರು ಓದಬೇಕು, ಇತರರು ಕೇಳಬೇಕು, ಅದರ ರಮ್ಯತೆಯನ್ನು ಅನುಭವಿಸಬೇಕು. ವಿ.ಸೀ. ಅವರ ಓದುಗಾರಿಕೆಯಲ್ಲಿ ಜೀವಸ್ವರವಾಗಿ ಮಿಡಿಯುತ್ತಿದ್ದದ್ದು ಧ್ವನಿ. ಕವಿಚಕ್ರವರ್ತಿಯೇನೊ ಕಾವ್ಯರಸಾಯನವನ್ನು ಕೊಟ್ಟ; ಶ್ರೀಯವರು ಅದನ್ನು ಭಟ್ಟಿಯಿಳಿಸಿ 'ರಸಘಟ್ಟ'ಯನ್ನು ಬಡಿಸಿದರು; ವಿ.ಸೀ.ಯವರು ಅದನ್ನು ಓದಿ ಧ್ವನಿರಸಾಯನವನ್ನು ಉಣಿಸುತ್ತಿದ್ದರು. "ಸತ್ಯಾಶ್ರಯ, ಊರುಭಂಗಪ್ರತಿಜ್ಞೆ ಏನಾಯ್ತು?" ಎಂಬ ಪ್ರಶ್ನೆಯೂ "ಭಂಗವಾಯ್ತು" ಎಂಬ ಉತ್ತರವೂ ವಿ.ಸೀ.ಯವರ ಬಾಯಲ್ಲಿ ನುಡಿಯಬೇಕು, ಸವಿಯಬೇಕು! ಕಂದಪದ್ಯದ ಲಯಲಾಸ್ಯಗಳನ್ನು ಅವರ ಬಾಯಲ್ಲಿ ಕೇಳಬೇಕು! ಹಳಗನ್ನಡವಾಗಲಿ ಹೊಸಗನ್ನಡವಾಗಲಿ, ಪದ್ಯವಾಗಲಿ ಗದ್ಯವಾಗಲಿ ನಾಟಕವಾಗಲಿ ವಿ.ಸೀ. ಅವರ ಕೊರಲಲ್ಲಿ ಒಂದು ಅಪೂರ್ವವಾದ ವರ್ಚಸ್ಸು, ಶಕ್ತಿ, ಮಾಧುರ್ಯಗಳಿಂದ ರೂಪುಗೊಂಡು ಹೊರಬರುತ್ತಿದ್ದವು. ಇವರ ಓದುಗಾರಿಕೆಯ ಬಾಣಿಯನ್ನು ಅನುಸರಿಸಹೋದವರು ಅಪರೂಪ, ಅನುಸರಿಸಿ ಗೆದ್ದವರಂತೂ ಇಲ್ಲವೆಂದೇ ಹೇಳಬೇಕು.

ಪದ್ಯಕ್ಕೂ ನನಗೂ ಸಹೃದಯತೆಯ ನಂಟು ಅಷ್ಟಾಗಿ ಬೆಳೆದುಬಂದಿಲ್ಲ. ಮೊದಮೊದಲಂತೂ ಪದ್ಯ ವಧ್ಯವಾಗಿಯೇ ಇತ್ತು. ನನ್ನ ಈ 'ಅಸಂಸ್ಕೃತ' ಅಭಿಪ್ರಾಯವನ್ನು ಕೆಲವು ಕಡೆ ಬಾಯಿಬಿಟ್ಟು ಹೇಳಿ ಕವಿಗಳ ಕೈಲಿ ಛೀಮಾರಿ ಹಾಕಿಸಿಕೊಂಡಿದ್ದೇನೆ. ವಿ.ಸೀ. ಅವರ ಬಾಯಲ್ಲಿ "ಛೀ" ಎಂದು ಬರಲಿಲ್ಲ. "ಏನಪ್ಪ, ಸಾಮಿ, ನಮ್ಮ ಬುಡಕ್ಕೇ ತಂದುಬಿಟ್ಟೆಯಲ್ಲಾ! Poetry is the highest form of art. ಚಿತ್ರ ಬರೀತೀಯ, ನಾಟಕ ಆಡುತೀಯ, ಪಿಟೀಲು ನುಡಿಸುತೀಯ, ಪದ್ಯ ಬೇಡ ಅಂತೀಯ!" "ಇಲ್ಲ, ಸರ್—ಅದೇನೋ ನನಗೆ ಹಿಡಿಸಲಿಲ್ಲ. ಬಹುಶಃ ಪದ್ಯದಲ್ಲಿ ಏನನ್ನು ದೃಷ್ಟಿಸಬೇಕೆಂಬುದು ನನಗೆ ಗೊತ್ತಾಗಿಲ್ಲ" ಎಂದೆ. ಅಂದಿನಿಂದ ಆಗಾಗ ಅವರ ಪದ್ಯವಾಚನ, ವ್ಯಾಖ್ಯಾನ ಕೇಳುವ ಸಂದರ್ಭ ದೊರಕಿತು.

* * * *



ಚೀನಾ ಜಪಾನ್ ದೇಶಗಳಲ್ಲಿ ಚಹ ಸೇವನೆಗೆ ಇನ್ನೆಲ್ಲಿಯೂ ಆಚರಣೆಯಲ್ಲಿಲ್ಲದ ಕೆಲವು ನಾಂದೀಕ್ರಮಗಳಿವೆಯೆಂದು ಕೇಳಿದ್ದೇವೆ. ವಿ. ಸೀ. ಯವರ ಮನೆಯಲ್ಲಿ ನಡೆಯುತ್ತಿದ್ದ ಟೀಪಾರ್ಟಿಗಳಲ್ಲಿ ಅಂಥ ಪ್ರಸ್ತಾವನೆ ಯಾವುದೂ ಇರಲಿಲ್ಲವಾದರೂ, ಸೇವನೆ ನಡೆಯುತ್ತಿದ್ದ ಶೈಲಿಯಲ್ಲಿ ಅದಾವುದೋ ಒಂದು ಬಗೆಯ ಅಪರಿಚಿತವಾದ, ಪ್ರತ್ಯೇಕವಾದ, ಅವರ್ಣನೀಯವಾದ ಅಂಶವೊಂದು ಮಿಳಿತವಾಗಿ ಹೊಸತನವೊಂದನ್ನು ಅನುಭವಿಸಗೊಡುತ್ತಿತ್ತು. ಟೀ ತಯಾರಾಗುತ್ತಿದ್ದ ಮತ್ತು ಪಾನಪೂರಿತವಾಗಿದ್ದ ಪಾತ್ರೆಗಳು ಪಿಂಗಾಣಿಯವು. [ಇಲ್ಲಿ ಒಂದು ಸಂಗತಿಯನ್ನು ವಿಶದಪಡಿಸಬೇಕಾಗಿದೆ: ಕುಲಿಮೆಯ ಕಾವಿನಿಂದ ಹೊಳಪುಗೊಂಡು ನಿರ್ಮಿತವಾದ ಮಣ್ಣಿನ ಪಾತ್ರೆಗಳೆಲ್ಲವನ್ನೂ 'ಪಿಂಗಾಣಿ' ಎಂದು ಕರೆಯುವುದು ನಮ್ಮಲ್ಲಿ ವಾಡಿಕೆಯಾಗಿದೆ. ಆದರೆ ಪಿಂಗಾಣಿಯಲ್ಲಿ ಕೆಲವು ಒಳವಿಂಗಡಗಳಿವೆ. ವರಿಸೆಯಾಗಿ—ಕ್ಲೇ, ಪಾಟರಿ, ಪೋರ್ಸೆಲಿನ್, ಚೈನಾ; ಕೊನೆಯದು ಉತ್ಕೃಷ್ಟವಾದದ್ದು. ವಿ. ಸೀ. ಯವರ ಮನೆಯ ಟೀಪಾತ್ರೆಗಳು ಈ ವರ್ಗದವು]. ಕೆಟಲಿನ ತುಂಬ ಟೀ ಕಷಾಯ; ಬೇರೆ ಬೇರೆಯಾಗಿ ಸಕ್ಕರೆ, ಹಾಲು; ಕುಡಿಯುವ ಬಟ್ಟಲು ತಟ್ಟೆಗಳು; ಚಮಚಗಳು; ಮತ್ತು ಇತರ ಪರಿಕರಗಳು ಬಂದಾದ ಬಳಿಕ ವಿ. ಸೀ. ಅವರು ಪಾತ್ರೆಗಳನ್ನೂ ಪರಿಕರಗಳನ್ನೂ ಕ್ರಮವಾಗಿ ಅಚ್ಚುಕಟ್ಟಾಗಿ ಜೋಡಿಸಿ, ಬಟ್ಟಲುಗಳಲ್ಲಿ ಕಷಾಯ ಸುರಿದು "ಹಾಲು ಸಕ್ಕರೆ ಹಾಕಿಕೊಳ್ಳಿ" ಎನ್ನುತ್ತಿದ್ದರು. ತಾವು ಒಂದು ಬಟ್ಟಲು ಕಷಾಯಕ್ಕೆ ಒಂದು ಚಮಚ ಹಾಲನ್ನು ಮಿಶ್ರಮಾಡಿಕೊಂಡು ತೂಕಮಾಡಿ ಸ್ವಲ್ಪ ಸಕ್ಕರೆ ಬೆರಸಿಕೊಂಡು, ನಿದಾನವಾಗಿ ಕುಡಿಯುತ್ತಿದ್ದರು. ನನಗೆ ಈ ಬಗೆಯ ಟೀಯೂ ಒಂದೇ ಬಿಸಿನೀರೂ ಒಂದೇ; ಸತ್ವವಿಲ್ಲದ ಸಪ್ಪೆನೀರು. ಒಂದು ಕೆಟಲು ನೀರಿಗೆ ಅದೆಷ್ಟು ಸೊಪ್ಪು ಹಾಕುತ್ತಿದ್ದರೋ, ಕಷಾಯಕ್ಕೆ ಅಂಟುತ್ತಿದ್ದದ್ದು ತಿಳಿಹೊಂಬಣ್ಣ ಮಾತ್ರ. ನನ್ನದು ಒರಟು

ದೇಹ, ಅದಕ್ಕಿಂತಲೂ ಒರಟುರುಚಿ. ತಿಳಿಯಾದ ನವುರಾದ ಮೃದುವಾದ ಸೂಕ್ಷ್ಮವಾದ ಹಗುರವಾದ ರುಚಿಗಳಿಗೆ ನನ್ನ ದೇಹ ಮನಸ್ಸುಗಳು ಜಗ್ಗವು. ಚೆನ್ನಾಗಿ ಊರಿದ ಕಪ್ಪುಬಣ್ಣದ ಕಷಾಯ ಒಂದು ಬಟ್ಟಲು, ಮೂರು ನಾಲ್ಕು ಚಮಚ ಸಕ್ಕರೆ, ಹಾಲು ಬೆರಸದ ಟೀಯನ್ನು ಸಲಕ್ಕೆ ಆರು ಬಟ್ಟಲು ಗಟಗಟನೆ ಕುಡಿದು ಕುಡಿದು ಜಡ್ಡುಬಿದ್ದಿರುವ ನನಗೆ ವಿ. ಸೀ. ಯವರ ತಿಳಿ ಟೀ ಹೇಗೆ ತಾನೆ ಒಗ್ಗೀತು! ಆದರೂ ವಿ.ಸೀ. ಅವರು ಟೀ ಬೆರಸಿಕೊಳ್ಳುತ್ತಿದ್ದ ವಿಧಾನ, ಕುಡಿಯುತ್ತಿದ್ದ ಸಾವಧಾನ, ಪಡೆಯುತ್ತಿದ್ದ ಸಮಾಧಾನ, ಇವುಗಳನ್ನು ಕಂಡ ನನಗೆ, "ಅಯ್ಯೊ, ದೇವರೆ! ಮೃದು ರುಚಿಗಳನ್ನು ಅನುಭವಿಸಿ ಸವಿಯುವಂಥ ಯೋಗವನ್ನು ನನಗೇಕೆ ಕೊಟ್ಟಿಲ್ಲ? ಏನು ಪಕ್ಷಪಾತ!" ಎಂದು ಮೊರೆಯಿಡೋಣ ವೆನ್ನಿಸುತ್ತದೆ.



ವಿ.ಸೀ.ಯವರ ರಸಜ್ಞತೆಯನ್ನು ನೆನೆದಾಗಲೆಲ್ಲ ನನಗೆ ನನ್ನ ಗೆಳೆಯ ನೊಬ್ಬನ ನೆನಹೂ ತಪ್ಪದೆ ಬರುತ್ತದೆ. ನಾನು ಸಂಘದ ಕಾರ್ಯದರ್ಶಿಯಾಗಿ ದ್ದಾಗ ನನಗೆ ನೆರವಾಗಿ ನಿಂತು ನನಗಿಂತಲೂ ಹೆಚ್ಚಾಗಿ ದುಡಿದವನು ಈತ. ಅಲ್ಲಿಂದಿಲ್ಲಿಗೆ ಇಲ್ಲಿಂದಲ್ಲಿಗೆ ಓಡಾಡುವುದು, ಬೆಂಚುಕುರ್ಚಿಗಳನ್ನು ಹೊರುವ ಸಂದರ್ಭ ಒದಗಿದಾಗ ಹೆಗಲನ್ನು ಕೊಡುವುದು, ದೇಹಶ್ರಮದ ಸಮಯಗಳಲ್ಲಿ ಹಿಂಜರಿಯದೆ ಮುನ್ನುಗ್ಗುವುದು, ಮೊದಲಾದವುಗಳಲ್ಲಿ ಈತನಿಗೊಂದು ಆತ್ಮ ಸಂತೋಷ. ಮೃದು ಹೃದಯವೂ ಒರಟು ಕಾರ್ಯವಿಧಾನವೂ ಈತನಲ್ಲಿ ಸಮಸಮವಾಗಿ ನೆಯ್ದುಕೊಂಡು ಬಂದಿದ್ದವು. ವಿ.ಸೀ.ಯವರ ವಿಷಯದಲ್ಲಿ ಈತನಿಗೆ ಮಿಗಿಲಾದ ಭಕ್ತಿ, ಪ್ರೀತಿ, ಹೆಮ್ಮೆ. ಅವರ ಪರಿಚಯವಾಗಬೇಕೆಂದು ಹತ್ತಾರು ಸಲ ನನ್ನನ್ನು ಕೇಳಿದ್ದ. ನಾನು ಒಡಂಬಡದಿದ್ದುದಕ್ಕೆ ಅನೇಕ

ಕಾರಣಗಳಿದ್ದುವು. ವಿ.ಸೀ.ಯವರ ಎದುರಿನಲ್ಲಿ ಈತ ತನ್ನ 'ಸಂಸ್ಕೃತಿ'ಯನ್ನು ಎಲ್ಲಿ ಪ್ರದರ್ಶಿಸಿಬಿಡುವನೋ ಎಂಬ ಹೆದರಿಕೆ ಮೊದಲನೆಯದು; ಅವರ ಭಾವ ಗೀತೆಗಳನ್ನು ಅವರೆದುರು ಎಲ್ಲಿ ಹಾಡಿಬಿಡುವನೋ ಎಂಬ ದಿಗಿಲು ಎರಡನೆ ಯದು; ಏಕಪಾತ್ರಾಭಿನಯಮಾಡಿ ಸೊಹ್ರಾಬನ ಮಾತುಗಳನ್ನು ರುಸ್ತುಮನ ಬಾಯಲ್ಲೂ, ರುಸ್ತುಮನದನ್ನು ತಹಮಿನೆಯ ಬಾಯಲ್ಲೂ ನುಡಿಯುವಂತೆ ಎಲ್ಲಿ ಪಠಿಸಿಬಿಡುವನೋ ಎಂಬ ತವಕ ಮೂರನೆಯದು; "ತಾವು ಬರೆದಿರುವ ನಾಗರಿಕ ನಾಟಕದಲ್ಲಿ" ಎಂದು ಆರಂಭಿಸಿ ಸಾವಿನ ಸಮಸ್ಯೆಯಿಂದ ವಾಕ್ಯಗಳೆರಡನ್ನು ಎಲ್ಲಿ ಉದ್ಧರಿಸಿಬಿಡುವನೋ ಎಂಬ ಶಂಕೆ ನಾಲ್ಕನೆಯದು. ಈ ತೆರನಾದ ಆಭಾಸ ಗಳು ವಿ.ಸೀ.ಯವರ ಸಮ್ಮುಖದಲ್ಲಿಯೇ ಸಂಭವಿಸುವುದು ಬೇಡ ಎಂದು ತೀರ್ಮಾನಮಾಡಿಕೊಂಡು, ಈತನ ಹಂಬಲವನ್ನು ನಿರ್ಲಕ್ಷ್ಯಮಾಡಿದ್ದೆ.

"ಸಂಘದ ಆಶ್ರಯದಲ್ಲಿ ತಮ್ಮಿಂದ ಪದ್ಯವಾಚನವಾಗಬೇಕು" ಎಂದು ಒಂದು ಸಲ ವಿ. ಸೀ. ಯವರನ್ನು ಕೇಳಿಕೊಂಡೆ. "ಅಲ್ಲಪ್ಪಾ! ಪದ್ಯ ಎಂದರೆ ಉರಿದು ಬೀಳುತ್ತೀಯ! ಈಗ ಪದ್ಯ ಬೇಕು ಅಂತೀಯಲ್ಲ!" ಎಂದರೂ ಒಡನೆಯೆ ಒಪ್ಪಿಕೊಂಡರು. ಈ ಕಾರ್ಯಕ್ರಮ ನಡೆದಂದು ನನ್ನ ಗೆಳೆಯನ ಉತ್ಸಾಹಕ್ಕೆ ಎಣೆಯೆ ಇರಲಿಲ್ಲ. ತನ್ನ ಬಹುಕಾಲದ ಬಯಕೆ ಇಂದು ಫಲಿಸಿ ಬಿಡುವುದೆಂದು ನಿರೀಕ್ಷಿಸಿಕೊಂಡಿದ್ದ. ಅದಕ್ಕೊಂದು ಉಪಾಯವನ್ನೂ ಯೋಚಿಸಿ ಕೊಂಡಿದ್ದ. "ಲೋ, ಸ್ವಾಮಿ, ಪ್ರತಿಸಲವೂ ಸಂಘದ ಅತಿಥಿಗಳಿಗೆ ನೀನೇ ಹಾರ ಹಾಕಬೇಕೆಂಬ ನಿಯಮವೇನಾದರೂ ಇದೆಯೆ?" ಎಂದ.

"ಅಂಥದೇನೂ ಇರುವಂತೆ ಕಾಣೆ . . . ಏಕೆ?"

"ನೋಡೋ, ವಿ. ಸೀ. ಯವರ ಪರಿಚಯವಂತೂ ನನಗೆ ಆಗಲಿಲ್ಲ. ಈ ದಿನ ಹಾರವನ್ನಾದರೂ ನಾನು ಅವರಿಗೆ ಅರ್ಪಿಸಬಹುದೆ?"

"ಸದ್ಯ! ಇಲ್ಲಿಗೇ ಮುಗಿಯಿತಲ್ಲ!" ಎಂಬ ಭರವಸೆಯಿಂದ, "ಆಗ ಬಹುದು. ಹಾರವನ್ನಿನ್ನೂ ತಂದಿಲ್ಲ" ಎಂದೆ. "ನಿನಗೇಕೋ ಆ ಕಷ್ಟ, ನಾನಿರುವಾಗ!" ಎಂದು ಸೈಕಲ್ ಹತ್ತಿ ಹೋದ.

ಆತ ಹಾರ ತರುವ ವೇಳೆಗೆ ಪದ್ಯವಾಚನ ಅರ್ಧ ಮುಗಿದಿತ್ತು. ನನ್ನನ್ನು ಬೇರೆಯಾಗಿ ಕರೆದು ಕಿವಿಯಲ್ಲಿ, "ತಂದಿದ್ದೇನೆ, ದೊಡ್ಡದು, ಮಜಬೂತಾದದ್ದು,

ನೋಡು ಬಾ" ಎಂದ. ನನಗೆ ನಗುವೂ ಕೋಪವೂ ಒಟ್ಟಿಗೆ ಬಂದುವು. ಆತ ತಂದಿದ್ದದ್ದು ಕೆಂಪುಗಣಗಿಲೆ ಹಾರ, ಕ್ರೋಟನ್ ಎಲೆಗಳ ತುರಾಯಿ. "ಇಂಥ ದನ್ನು ತಂದಿದ್ದೀಯಲ್ಲೋ! . . . ಇದು ಮನುಷ್ಯರಿಗೆ ಹಾಕುವಂಥದಲ್ಲ. ಒಳ್ಳೆಯ ಸುವಾಸನೆಯ ಹೂಗಳಿಂದ ಕಟ್ಟಿದ ಹಾರ ತೆಗೆದುಕೊಂಡು ಬರಬಾರದೆ?" ಎಂದೆ. ಮರುಮಾತನಾಡದೆ ತಿರುಗಿ ಸೈಕಲ್ ಹತ್ತಿದ. ಬರುವ ವೇಳೆಗೆ ವಿ.ಸೀ.ಯವರು ಅಂದಿನ ಕಾರ್ಯಕ್ರಮದ ಕೊನೆಯ ಪದ್ಯವನ್ನು ಹಾಡುತ್ತಿದ್ದರು. ಈತ ಏದುತ್ತ ನನ್ನ ಪಕ್ಕಕ್ಕೆ ಬಂದು ಕರೆದ. ಈ ಸಲ ತಂದಿದ್ದದ್ದು ಚೆಂಡುಮಲ್ಲಿಗೆ ಹಾರ, ಕೆಂಪುಗಣಗಿಲೆ ತುರಾಯಿ. ನಿಜವಾಗಿಯೂ ಅಳುವಂತಾಯಿತು ನನಗೆ. ಕೃಷ್ಣಶಾಸ್ತ್ರಿಗಳವರಿಗೆ ಹೇಳಿಕೊಂಡೆ, ಹೀಗಾಗಿ ಬಿಟ್ಟಿದೆ ಎಂದು. ಅವರು ನಕ್ಕು, "ಏನಪ್ಪ, ಈ ದಿನದ ಕಾರ್ಯಕ್ರಮುವನ್ನು ನರಮೇಧವೆಂದುಕೊಂಡಿರಾ? ಪೇಟೆಯಲ್ಲೆಲ್ಲೂ ಮಲ್ಲಿಗೆ ಹೂ ಸಿಗಲಿಲ್ಲವೆ? ಹೋಗಲಿ ಬಿಡಿ . . . ಸೀತಾರಾಮಯ್ಯನವರು ನಮ್ಮವರೇ. ಹಾರ ತುರಾಯಿ ಗಳಿಲ್ಲದಿದ್ದರೆ ಅವರೇನೂ ಅನ್ಯಥಾ ತಿಳಿಯುವವರಲ್ಲ. ನಿಮಗೆ ಸಂಕೋಚ ವಾದರೆ ನಾನೇ ಧನ್ಯವಾದ ಹೇಳಿಬಿಡುತ್ತೇನೆ. ನೀವು ಯೋಚನೆ ಮಾಡ ಬೇಡಿ" ಎಂದು ಒಂದು ಬಗೆಯ ಸಮಾಧಾನ ನೀಡಿದರು.

ಹಿನ್ನುಡಿ

ಕರ್ಣಾಟಕ ಸಂಘ, ಅದರ ಮೊದಮೊದಲಿನ ಅಧ್ಯಕ್ಷ–ಉಪಾಧ್ಯಕ್ಷರು, ಮತ್ತು ನಾನು—ತ್ರಿಕೋನಾಕೃತಿಯ ನಾಟಕರಂಗದ ಮುಮ್ಮೂಲೆಗಳು ; ನಮ್ಮ ಕೆಲವು ಗೆಳೆಯರೂ (ನನ್ನ ಮನೆಯವರೂ ಸೇರಿ) ರಂಗದ ಮೇಲೆ ಆಗಾಗ ಕಾಣಿಸಿಕೊಳ್ಳುತ್ತಾರೆ. ಇಂಥ ಸನ್ನಿವೇಶದಲ್ಲಿ ಸಂಭವಿಸಿದ ಕೆಲವು ಆಶುಪ್ರಹಸನ ಗಳನ್ನು ಇದುವರೆಗೆ ಹೇಳಿದ್ದೇನೆ.

ಇದು ಸಂಘದ ಚರಿತ್ರೆ ಅಲ್ಲ. ವ್ಯಕ್ತಿಗಳ ಜೀವನಚರಿತ್ರೆಗಳೂ ಅಲ್ಲ. ಅವರು ನಾಡಿಗೂ ನುಡಿಗೂ ಸಲ್ಲಿಸಿರುವ ಸೇವೆಯ ದಾಖಲೆಯಾಗಲಿ, ಅವರ ಪಾಂಡಿತ್ಯದ ವಿವರಣೆಯಾಗಲಿ ಇದಲ್ಲ. ಈ ಐವರು ಮಹನೀಯರನ್ನು ನನ್ನ ಬಾಲ್ಯದಿಂದಲೇ ಕಾಣುವಂಥ ಅವಕಾಶ ದೊರೆತದ್ದು ನನ್ನ ಭಾಗ್ಯ. ಇವರನ್ನು ಸಂಘದ ಅಧ್ಯಕ್ಷ–ಉಪಾಧ್ಯಕ್ಷರಾಗಿಯೂ ಕಾಲೇಜಿನಲ್ಲಿ ಅಧ್ಯಾಪಕರಾಗಿಯೂ ಕಂಡದ್ದು ನಾನು 'ಡಿಗ್ರಿ'ಗಾಗಿ ಓದುತ್ತಿದ್ದಾಗ; ಇದೂ ನನ್ನ ಪುಣ್ಯ. ಈ ಸಂದರ್ಭಗಳಲ್ಲಿ ನಡೆದ ಕೆಲವು ಪ್ರಸಂಗಗಳು ನನಗೆ ಆಯಾ ಮಹನೀಯರ ವ್ಯಕ್ತಿತ್ವದ ಒಂದೊಂದು ಅಪೂರ್ವವೂ ರಸಭರಿತವೂ ಆದ ಪರಿಚಯವನ್ನು ಮಾಡಿಸಿಕೊಟ್ಟವೆ.

ಐವರು ಪೂಜ್ಯರೂ ತಮ್ಮ ತಮ್ಮ ಜೀವನದಲ್ಲಿ ಗುರಿಯನ್ನು ಕಂಡು ಕೊಂಡು ಅದರ ಸಾಧನೆಗಾಗಿ ಬಾಳಿದವರು, ಬಾಳುತ್ತಿರುವವರು. ಅಷ್ಟೇ ಅಲ್ಲ, ಜೀವನದಲ್ಲಿ ಕಷ್ಟಗಳೇನೆ ಇರಲಿ, ಅದರೊಡನೆ ಶಾಂತಿಯೂ ಆನಂದವೂ ಮಿಳಿತ ವಾಗಿರುವುದೆಂಬ ಸತ್ಯವನ್ನು ಕಂಡುಕೊಂಡು ಅನುಭವಿಸಿ ಇತರರಿಗೆ ಕಾಣಿಸಿ ದವರು. ಇಷ್ಟು ಹೇಳಿದ್ದರಿಂದಲೇ ನಾನು ಅಧಿಕಪ್ರಸಂಗಿಯಾದೆನೋ ಏನೋ. ಇನ್ನೂ ಸರ್ವವಿಧದಲ್ಲಿಯೂ ವಿದ್ಯಾರ್ಥಿಯೇ ಆಗಿರುವ ನಾನು ಈ ಮೂಲಕ ಅವರ ಚರಣಗಳಿಗೆ ಮಣಿಯುತ್ತೇನೆ.

ಪ್ರಕಾಶಕರ ಟಿಪ್ಪಣಿ

ಪುಟ ೨೦: ‘ಪ್ರಬುದ್ಧ ಕರ್ಣಾಟಕದ ಹುಟ್ಟು ಮತ್ತು ಬೆಳವಣಿಗೆ.’

ಶ್ರೀ ಎ. ಆರ್. ಕೃಷ್ಣಶಾಸ್ತ್ರೀ ಅವರ ‘ಭಾಷಣಗಳು ಮತ್ತು ಲೇಖನಗಳು’ (೧೯೬೦) ಪುಟ ೨೦೭ರಿಂದ ೨೨೯ ನೋಡಿ.

ಪುಟ ೨೨: ಸಂಘದ ಸುತ್ತು ಮುತ್ತು.

ನಮ್ಮ ಸಂಘದ ವರದಿಯಲ್ಲಿ (೧೯೫೪) ಈ ಮಾತುಗಳಿವೆ: “ಅದೂ ಎಂಥ ಸ್ಥಳ! ಸಂಘದ ಸುತ್ತ—ಒಂದು ಕಡೆ ಹೋಟಲು; ಇನ್ನೊಂದು ಕಡೆ ಗೋಲಿ ಆಡುತ್ತ, ಹುಣಿಸೆಮರಕ್ಕೆ ಕಲ್ಲು ಬೀರುತ್ತ ಜಗಳಕಾಯುವ ಬೀದಿ ಹುಡುಗರು; ಕಿಟಕಿಯ ಎದುರಿಗೆ ಸಾರ್ವಜನಿಕರ ಜಲಶಂಕೆಗಳಿಗೆ ಆಶ್ರಯವಾದ ಮೈದಾನ; ಬಾಗಿಲಿಗೆ ಹತ್ತಿರದಲ್ಲೆ ಕಕ್ಕಸು; ಅದಕ್ಕೆ ಅನತಿದೂರದಲ್ಲಿ ಹಳೆಯ ಕಾಗದಗಳನ್ನು ಸುಟ್ಟು ಹೊಗೆಯೆಬ್ಬಿಸುವ ಗುಂಡಿ. ಸಂಘದ ಒಳಗೋ—ಕೆಲವು ಋತುವಿನಲ್ಲಿ ಮಳೆಯ ನೀರು, ಇನ್ನು ಕೆಲವು ಕಾಲ ಗೆದ್ದಲ ಹುಳು, ಮತ್ತೆ ಕೆಲವು ಕಾಲ ಕಂಬಳಿ ಹುಳು, ಉಳಿದ ವೇಳೆಯಲ್ಲಿ ಬೀದಿಯ ಒಣದೂಳು. (‘ಸುಪ್ರಭಾತಮ್’, ೧೯೫೪, ಪುಟ ೭೦–೭೧ರ ಅಡಿಟಿಪ್ಪಣಿ.)

ಪುಟ ೨೨: ‘ಸಣ್ಣ ಕಟ್ಟಡವೊಂದಿದೆ.’

ಮೊನ್ನೆಮೊನ್ನೆಯ ವರೆಗೂ ಇತ್ತು. ಈ ಪುಸ್ತಕ ಅಚ್ಚಾಗುತ್ತಿರುವಾಗ ಅದನ್ನು ನೆಲಸಮಮಾಡಿ, ಅದೇ ಸ್ಥಳದಲ್ಲಿ ಲಕ್ಷಗಟ್ಟಲೆ ಬೆಲೆ ಬಾಳುವ ಸೆಂಟ್ರಲ್ ಕಾಲೇಜ್ ಶತಮಾನೋತ್ಸವ ಪ್ರಾಸಾದವನ್ನು ಕಟ್ಟುತ್ತಿದ್ದಾರೆ. ಕಾಲೇಜಿನ ಸರಸ್ವತೀ ಭಂಡಾರಕ್ಕೆ ಅದು ಆವಾಸವಾಗುತ್ತದೆ.

ಪುಟ ೨೯: ‘ಅನಾವರಣಗೊಂಡ ಭಾವಚಿತ್ರಗಳು.’

ಇವು ಹುಳುಗಳಿಗೆ ಆಹಾರವಾಗುತ್ತಿದ್ದುದರಿಂದ, ಮೇಲಿನ ಗಾಜುಗಳನ್ನು ಮಾರಿಬಿಟ್ಟು, ಒಳಗಿನ ಫೋಟೋಗಳನ್ನು ಒಂದು album ಮಾಡಿ ರಕ್ಷಿಸಲಾಗಿದೆ.

ಪುಟ ೩೦: ಪೇಲಿಕೆ—ಹಳೇ ಬಟ್ಟೆಯ ತುಂಡು, ಚಿಂದಿ.

ಪುಟ ೩೬: ‘ಐವತ್ತು ರೂಪಾಯಿ ಸಹಾಯವೇತನ.’

ಸಂಘವು ತನ್ನ ಪ್ರಕಟನೆಗಳಿಂದ ೫೭ನೇ ಇಸವಿಯಲ್ಲಿ ೩೫೦ ರೂಪಾಯಿಗಳನ್ನು, ೫೮ನೇ ಇಸವಿಯಲ್ಲಿ ೪೬೧ ರೂಪಾಯಿಗಳನ್ನು, ೫೯ನೇ ಇಸವಿಯಲ್ಲಿ ೪೩೦ ರೂಪಾಯಿ

ಗಳನ್ನು, ೬೦ನೇ ಇಸವಿಯಲ್ಲಿ ೫೦೦ ರೂಪಾಯಿಗಳನ್ನು ವಿದ್ಯಾರ್ಥಿಗಳಿಗೆ ಸಹಾಯ ವೇತನವಾಗಿ ಕೊಟ್ಟಿತು. ಅನಂತರ, ವಿದ್ಯಾರ್ಥಿಗಳಲ್ಲಿ ಪಾತ್ರತ್ವ ಕಡಮೆಯಾದದ್ದರಿಂದ, ವೇತನಕ್ಕೆ ಅರ್ಹರಾದವರು ದೊರಕದೆ, ಆ ದ್ರವ್ಯವನ್ನು ಪ್ರಕಟನಕಾರ್ಯಕ್ಕೆ ವಿನಿಯೋಗಿಸಲಾಯಿತು.

ಪುಟ ೩೬: 'ವನಸುಮ.'

ಶ್ರೀ ಡಿ. ವಿ. ಜಿ. ಅವರ 'ನಿವೇದನ'ದಲ್ಲಿ (೧೯೫೬) ಪುಟ ೪೯ ನೋಡಿ.

ಪುಟ ೩೭: ಸಂಘದ ಪರಕಾಯಪ್ರವೇಶ.

ಇಲ್ಲಿ ವರ್ಣಿಸಿರುವ ದೇಹವನ್ನು ತೊರೆದು, ಸಂಘ ಹೊಸದೊಂದು ದೇಹದಲ್ಲಿ ವೃದ್ಧಿಹೊಂದಿದೆ. ಸೆಂಟ್ರಲ್ ಕಾಲೇಜಿನ ಗಡಿಯಾರದ ಗೋಪುರವನ್ನೊಳಕೊಂಡ ಕೇಂದ್ರಭವನದ ಬಲ ಪಾರ್ಶ್ವದಲ್ಲಿ ಕನ್ನಡ ಇಲಾಖೆಯೂ ಕರ್ಣಾಟಕ ಸಂಘವೂ ಈಗ ನೆಲಸಿವೆ. ಈಗಲೂ ಅದೇ ತೋಟದ ಪಕ್ಕದಲ್ಲೆ ಇದ್ದೇವೆ.

ಪುಟ ೩೭: 'ಕಾಲಗುಣಕ್ಕೆ ತಕ್ಕಂತೆ ಕಾರ್ಯಾವಳಿ.'

ಪರಿಶಿಷ್ಟ ನೋಡಿ.

ಪುಟ ೪೩: 'ಥ್ರುವ್ವಿ.'

ನಾಯಿಗಳನ್ನು ಕುರೋ ಕುರೋ ಎಂದು ಕರೆಯುವ ಹಾಗೆ, ಬೆಕ್ಕುಗಳನ್ನು 'ಸೀಬ್ ಸೀಬ್' ಎಂದು ಕರೆಯುವ ಹಾಗೆ, ಹಸುಕರುಗಳನ್ನು ಕರೆಯಬೇಕಾದರೆ 'ಥ್ರುವ್ವಿ, ಥ್ರುವ್ವಿ' ಎನ್ನುತ್ತಾರೆ. ಆದ್ದರಿಂದ, 'ಥ್ರುವ್ವಿ' ಎಂದರೆ 'ಹಸುಕರುವಿನಂತೆ ಸಾಧುಪ್ರಾಣಿ, ಅಲಕ್ಷ್ಯಮಾಡಬಹುದು' ಎಂದು ಅರ್ಥವಿರಬಹುದು.

ಪುಟ ೪೬: ಪಂಡ—ಹಿಟ್ಟಿನಿಂದ ಮಾಡಿದ ಭಕ್ಷ್ಯ.

ಪುಟ ೫೨: ವಿಭಾಂಡಕಾವತಾರ.

ಉಗ್ರಾವತಾರ. ವಿಭಾಂಡಕನು ಋಷ್ಯಶೃಂಗನ ತಂದೆ, ತೀಕ್ಷ್ಣ ತಪಸ್ವಿ. ಆಚಾರ ನಿಷ್ಠೆಯಿಲ್ಲದವರನ್ನು ಕಂಡರೆ ಈತನಿಗೆ ಆಗ್ರಹ.

ಪುಟ ೫೪: 'ಅವಳ ಲಂಗ ... ಇವನ ಚಡ್ಡಿ ...'

ಸಮಾನಧರ್ಮ ಸಾಲದೆ ಹೋದಾಗ ಇಂತಹ ನಿಸ್ಪೃಹವಾದ ಅಣಕ ಹುಟ್ಟಿಕೊಳ್ಳುತ್ತದೆ. 'ಕಾಣಿಕೆ'ಯಲ್ಲಿ ಮೂಲ ಹೀಗಿದೆ:

ಇವಳ ಸೊಬಗನವಳು ತೊಟ್ಟು
ನೋಡಬಯಸಿದೆ ;
ಅವಳ ತೊಡಿಗೆ ಇವಳಿಗಿಟ್ಟು
ಹಾಡಬಯಸಿದೆ.

ಇಲ್ಲಿ 'ಅವಳು, ಇವನು' ಇಲ್ಲ; ಇರುವುದು 'ಇವಳು, ಅವಳು.' 'ಸೊಬಗು, ತೊಡಿಗೆ' ಎರಡೂ ಲಂಗ ಚೆಡ್ಡಿಗಳ ವಿಪರ್ಯಯದಂತೆ ಆಭಾಸವಲ್ಲ. ಸೊಬಗು ದೈವದತ್ತವಾದದ್ದು; ತೊಡಿಗೆ, ತೊಟ್ಟುಕೊಂಡ ಆಭರಣ, ಅದಕ್ಕೆ ಮೆರುಗು ಕೊಡುತ್ತದೆ.

ಪುಟ ೫೫: 'ಎಳೆಯ ಹುಡುಗರಿಗೆ ಬೇಕಾದ್ದು.'

ಬಿ.ವೆಂ. ಅವರು ಹುಡುಗರಿಗಾಗಿ ಕನ್ನಡ ಐದನೆಯ ಪುಸ್ತಕ (೧೯೨೭) ರಚಿಸಿದ್ದಲ್ಲದೆ ೧೯೩೧ರಲ್ಲಿ ಬಾಲಕ ಬಾಲಕಿಯರಿಗಾಗಿ 'ಗುಣಸಾಗರ' ಎಂಬ 'ಕಿರು ಕಾದಂಬರಿ' ಯನ್ನೂ ಬರೆದರು. ಇಂಗ್ಲಿಷಿನಲ್ಲಿ ಪ್ರಸಿದ್ಧವಾಗಿರುವ ರಿಚರ್ಡ್ ವ್ಹಿಟಿಂಗ್‌ಟನ್ ಎಂಬಾತನ ಕಥೆ ಇದರಲ್ಲಿ ಈ ದೇಶಕ್ಕೆ ಹೊಂದುವ ಹೆಸರುಗಳೊಡನೆ ನಿರೂಪಿತವಾಗಿದೆ.

ಪುಟ ೫೬: 'ಹುಡುಗರೆ ಬೆಣೆಯನು . . .'

Strike the nail aright, boys,
Strike it on the head

ಎಂದು ಮೊದಲಾಗುವ ಇಂಗ್ಲಿಷ್ ಕವಿತೆಯ ಭಾಷಾಂತರ.

ಪುಟ ೫೮: ರಾಳ್ಲಪಲ್ಲಿ ಅನಂತಕೃಷ್ಣ ಶರ್ಮ.

ಮೈಸೂರು ಮಹಾರಾಜಾ ಕಾಲೇಜಿನಲ್ಲಿ ತೆಲುಗು ಅಧ್ಯಾಪಕರಾಗಿದ್ದರು. ಸಂಸ್ಕೃತ ದಲ್ಲಿಯೂ ಪ್ರಾಕೃತದಲ್ಲಿಯೂ ಪಂಡಿತರು. ತೆಲುಗಿನಲ್ಲೂ ಕನ್ನಡದಲ್ಲೂ ಬರೆದು ಹೆಸರಾದವರು. ಇವರ 'ಗಾನಕಲೆ', 'ಸಾಹಿತ್ಯ ಮತ್ತು ಜೀವನಕಲೆ' ಎಂಬ ಎರಡು ಪುಸ್ತಕಗಳನ್ನು ಮೈಸೂರಿನ ಕಾವ್ಯಾಲಯ ಪ್ರಕಾಶಕರು ಪ್ರಕಟಿಸಿದ್ದಾರೆ.

ಪುಟ ೫೯: ಬಿ. ವೆಂಕೋಬರಾಯರು.

ಕರ್ಣಾಟಕ ಸಂಘದ ಸುವರ್ಣಕಾಲದಲ್ಲಿ ಎ.ಆರ್.ಕೃ. ಅವರೊಡನೆ ಸಹಕರಿಸಿದ ಗಣ್ಯರು. ಇವರು ಬರೆದ 'ಮೈಸೂರು ದೇಶದ ವಾಸ್ತುಶಿಲ್ಪ'ವನ್ನು ಸಂಘ ಹಿಂದೆ ಪ್ರಕಟಿಸಿತು.

ಪುಟ ೬೧: 'ಪಟ್ಟೆ'ವ್ರತ.

ಶ್ರಾವಣಶನಿವಾರ ಮೊದಲಾದ ದಿವಸಗಳಲ್ಲಿ ಸಂಜೆಯವರೆಗೂ ಉಪವಾಸವಿದ್ದು, ಆಗ ದೇವರಪೂಜೆ ಮಾಡಿ, ಫಲಾಹಾರ ಮಾಡುವುದು.

ಪುಟ ೬೨: 'ಅಂದಿನಾ ದೇವರುಗಳೆಲ್ಲ . . .'

ವಿ. ಸೀ. ಅವರ 'ಕಸ್ಮೈ ದೇವಾಯ' ಕವನ. 'ಗೀತಗಳು' (೧೯೩೧) ಪುಟ ೭೩ ನೋಡಿ.

ಪುಟ ೬೮: 'ಕನ್ನಡದ ನಾಡುಗಳ . . . ಪವಿತ್ರಯಾತ್ರೆ.'

ಶ್ರೀಯವರ 'ಕನ್ನಡ ತಾಯ ನೋಟ.' 'ಹೊಂಗನಸುಗಳು' (ಪುಟ ೧೫ರಿಂದ ೨೧) ನೋಡಿ. 'ಒಸಗೆನುಡಿ' ಅದೇ ಪದ್ಯದಲ್ಲಿರುವ ಪ್ರಯೋಗ.

ಪುಟ ೭೮: 'ಭರತಮಾತೆಯ ವಾಕ್ಯ.'

ಶ್ರೀಯವರು ೧೯೧೪ರಲ್ಲಿ ಬರೆದ ಕವಿತೆ. 'ಹೊಂಗನಸುಗಳು' ಪುಸ್ತಕದಲ್ಲಿ ಇದು 'ಭರತಮಾತೆಯ ನುಡಿ'ಯಾಗಿದೆ.

ಪುಟ ೭೯: ಸ್ಪೂನರಿನ ಸೂತ್ರರೀತಿ.

Spooner (ism) : Accidental transposition of initial letters etc. of two or more words (e. g. *has just received a blushing crow, for real enjoyment give me a well-boiled icycle)*.

[f. Rev. W. A. Spooner (d-1930), esteemed for Spoonerism]— Concise Oxford Dictionary.

ಪುಟ ೮೦: 'ವಿಷವೃಕ್ಷ' ವಿಮರ್ಶೆ.

ಪ್ರಬುದ್ಧ ಕರ್ಣಾಟಕದಲ್ಲಿ ಮೊದಲು ಪ್ರಕಟವಾದ ಎ.ಆರ್.ಕೃ. ಅವರ ವಿಮರ್ಶೆಯನ್ನು 'ಭಾಷಣಗಳು ಮತ್ತು ಲೇಖನಗಳು' (೧೯೬೦) ಪುಟ ೩೧೪—೩೨೮ ನೋಡಿ. ಅಲ್ಲಿಂದ ಆರಂಭವಾದ ಅವರ ಬಂಕಿಂಕೃತಿವಿಮರ್ಶೆ 'ಬಂಗಾಳಿ ಕಾದಂಬರೀಕಾರ ಬಂಕಿಮಚಂದ್ರ' ಎಂಬ ೫೦೦ ಪುಟಗಳ ಮಹಾಕೃತಿಯಾಗಿ ೧೯೬೦ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದಿಂದ ಪ್ರಕಟಿಸಲ್ಪಟ್ಟಿದೆ.

ಪುಟ ೮೫: ನಾರಾಯಣನ ಛತ್ರ—ನಾರಾಯಣನ ಹೋಟಲು.

ಪುಟ ೮೫: ಪ್ರಬುದ್ಧ ಕರ್ಣಾಟಕ, ಸಂಚಿಕೆ ೧.

ಎ.ಆರ್.ಕೃ ಅವರ 'ಭಾಷಣಗಳು ಮತ್ತು ಲೇಖನಗಳು' ಪುಟ ೨೦೭–೨೦೮ ನೋಡಿ.

ಪುಟ ೮೬: ನತ್ತಿ—ಉಗ್ಗು, Stammering.

ಪುಟ ೮೮: 'ಕದಂಬ.'

ಪ್ರಬುದ್ಧ ಕರ್ಣಾಟಕ, ೧೯೪೧; ಸಂಪುಟ ೨೩, ಸಂಚಿಕೆ ೨, ಪುಟ ೧೩೧–೧೩೮.

ಪುಟ ೮೯ : 'ರುಮಾಲು ಕಟ್ಟಬಲ್ಲ ಕೌಶಲ.'

ವಿ.ಸೀ. ಅವರ 'ಬೆಳುದಿಂಗಳು' ಎಂಬ ಹರಟೆಗಳ ಪುಸ್ತಕದಲ್ಲಿ (೧೯೫೯) 'ಮೈಸೂರು ರುಮಾಲು' ಎಂಬ ಹರಟೆಯನ್ನು ನೋಡಿ.

ಪುಟ ೯೨ : 'ರಸಘಟ್ಟ.'

ರನ್ನನ ಗದಾಯುದ್ಧವನ್ನು 'ರಸಘಟ್ಟ'ಯೆಂದವರು ಎ.ಆರ್.ಕೃ. 'ರನ್ನಕವಿ ಪ್ರಶಸ್ತಿ' (೧೯೨೮) ಪುಟ ೨೩೦.

ಪುಟ ೯೫ : 'ಸೊಹ್ರಾಬ್-ರುಸ್ತುಂ-ತಹಮಿನೆ.'

ವಿ.ಸೀ. ಅವರ 'ಸೊಹ್ರಾಬ್-ರುಸ್ತುಂ' ಎಂಬ ರುದ್ರನಾಟಕದ ಪ್ರಧಾನ ಪಾತ್ರಗಳು.

ಪುಟ ೯೫ : 'ನಾಗರಿಕ.'

ಎಂ.ಆರ್.ಶ್ರೀ. ಅವರ ಪ್ರಸಿದ್ಧವಾದ ವಿಚಾರರೂಪಕ.

ಪುಟ ೯೫ : 'ಸಾವಿನ ಸಮಸ್ಯೆ.'

ವೆಂಬಾರ್ ವೆಂಕಟಾಚಾರ್ಯರ ಜನಪ್ರಿಯ ಪ್ರಹಸನ.

ಪುಟ ೯೬ : ಕೆಂಪು ಕಣಿಗಿಲೆ ಹಾರ.

ವಧ್ಯಸ್ಥಾನಕ್ಕೆ ಯಾರನ್ನು ಕರೆದೊಯ್ಯುತ್ತಾರೋ ಅವರಿಗೆ ಕೆಂಪು ಕಣಿಗಿಲೆ ಹಾರವನ್ನೋ ಕೆಂಪು ದಾಸವಾಳದ ಹಾರವನ್ನೋ ಹಾಕುವುದು ಪದ್ಧತಿ. ('ಮೃಚ್ಛ ಕಟಿಕ'ದ ಕೊನೆಯ ಅಂಕ ನೋಡಿ.)

ಪರಿಶಿಷ್ಟ: ಸಂಘದ ಪ್ರಕಟನೆಗಳು

(೧೯೧೮ರಿಂದ ೧೯೩೮)

ಪ್ರಬುದ್ಧ ಕರ್ಣಾಟಕ: ಸಂಪುಟಗಳು ೧ರಿಂದ ೧೪.

ಮೈಸೂರು ಸೀತಾರಾಮ ಶಾಸ್ತ್ರೀ: ಪ್ರತಿಮಾನಾಟಕ; ಬಿ. ವೆಂಕೋಬ ರಾವ್: ಮೈಸೂರು ದೇಶದ ವಾಸ್ತುಶಿಲ್ಪ; ಡಿ. ವಿ. ಗುಂಡಪ್ಪ: ವಸಂತ ಕುಸುಮಾಂಜಲಿ, ನಿವೇದನ, ಉಮರನ ಒಸಗೆ; ಎಂ. ಡಿ. ಅಳಸಿಂಗರಾಚಾರ್: ಕರ್ಣಾಟಕ ಸ್ವಪ್ನವಾಸವದತ್ತ ನಾಟಕಂ; ಎ. ವೆಂಕಟಸುಬ್ಬಯ್ಯ: ಕೆಲವು ಕನ್ನಡ ಕವಿಗಳ ಜೀವನಕಾಲವಿಚಾರ; ಹಲವು ಲೇಖಕರು: ಮುದ್ದಣ; ಸಂಸ: ವಿಗಡ ವಿಕ್ರಮರಾಯ; ಬಿ. ಎಂ. ಶ್ರೀಕಂಠಯ್ಯ: ಗದಾಯುದ್ಧ ನಾಟಕಂ, ಇಂಗ್ಲಿಷ್ ಗೀತಗಳು, ಅಶ್ವತ್ಥಾಮನ್; ಎಂ. ಆರ್. ಶ್ರೀನಿವಾಸಮೂರ್ತಿ: ಭಕ್ತಿಭಂಡಾರಿ ಬಸವೇಶ್ವರರು; ಎ. ಆರ್. ಕೃಷ್ಣಶಾಸ್ತ್ರೀ: ಭಾಸಕವಿ; ಶ್ರೀನಿವಾಸ: ತಾವರೆ; ಎಸ್. ಜಿ. ಶಾಸ್ತ್ರೀ: ಸೋಕ್ರಟೀಸನ ಮರಣ; ಕೆ. ವಿ. ಪುಟ್ಟಪ್ಪ: ಮಲೆನಾಡಿನ ಚಿತ್ರಗಳು; ಲಕ್ಷ್ಮೀನೃಸಿಂಹ ಶಾಸ್ತ್ರಿಗಳು: ಷೇಕ್ಸ್ ಪಿಯರ್ ನಾಟಕಕಥೆಗಳು; ಜಿ. ಪಿ. ರಾಜರತ್ನಂ: ಚೀನಾದೇಶದ ಬೌದ್ಧ ಯಾತ್ರಿಕರು; ಎಲ್. ಗುಂಡಪ್ಪ: ಭಾಸನ ಏಕಾಂಕ ನಾಟಕಗಳು, ಪ್ರತಿಜ್ಞಾ ಯೌಗಂಧರಾಯಣ, ಚಾರುದತ್ತ.

(೧೯೩೭–೧೯೬೩)

ಕೆ. ವಿ. ಅಯ್ಯರ್: ಶ್ರೀ ಕೈಲಾಸಂ ಅವರ ಸ್ಮರಣೆ; ಮೋ. ಶಂ. ಸುಬ್ರಹ್ಮಣ್ಯಶಾಸ್ತ್ರೀ: ಕರ್ಣಾಟಕ ಮಾಲವಿಕಾಗ್ನಿಮಿತ್ರ ನಾಟಕಂ; ಎಸ್. ಜಿ. ಶಾಸ್ತ್ರೀ: ಮೊನ್ನೆ ವನ್ನ, ಸೋಕ್ರಟೀಸನ ಮರಣ, ಲಿಯೊನಾರ್ಡೊ, ಒಂದು ಶಾಂತಿಮಂತ್ರ; ಜಿ. ಪಿ. ರಾಜರತ್ನಂ: ನಾಗನ ಪದಗಳು, ಬಾಹುಬಲಿವಿಜಯಂ, ಕಾರ್ಕಳದ ಗೊಮ್ಮಟಸ್ವಾಮಿ, ಧರ್ಮಪದ ಪ್ರವೇಶಿಕಾ; ಆರ್. ಎಲ್. ನರಸಿಂಹಯ್ಯ: ಶಕ್ತಿ; ವಿವಿಧ ಲೇಖಕರು: ಸುಪ್ರಭಾತಮ್, ಸಂಸಕವಿ;

ಬಿ. ವಿ. ಪಾಟಣಕರ್: ನಾಲ್ಕಂಕದ ನಾನ್‌ಸೆನ್ಸ್; ವಿ. ಸೀ: ಹೆಜ್ಜೆಪಾಡು, ದೀಪಗಳು, ಅಭಿಜ್ಞಾನ ಶಾಕುಂತಲ ನಾಟಕ (ಪರಿಚಯ); ಸಂಕಲನ: ಶ್ರೀ ವಿಶ್ವೇಶ್ವರ ವಂದನ; ಮಂ. ಗೋವಿಂದ ಪೈ: ಗಿಳಿವಿಂಡು; ಬಿ. ಜಿ. ಎಲ್. ಸ್ವಾಮಿ: ಪಂಚಕಲಶಗೋಪುರ.

ಸಂಘದ ಸದಸ್ಯರು ಬರೆದ '**ಕಾಲೆಜ್ ಬರೆವಣಿಗೆ**': ಬಾಲಸರಸ್ವತಿ, ನಮ್ಮನಮ್ಮವರು, ಚಿನ್ನದ ದೋಸೆ, ಮಕ್ಕಳ ಮಾತು, ಪಚ್ಚೆಯ ತೆನೆ, ಗಂಧದ ಹುಡಿ, ದುರಾಸೆಯ ದಂಡ, ಜನಪ್ರಿಯ ವಿಜ್ಞಾನ, ಪದ್ಯಾಂಜಲಿ, ಅರೆಮೂಕ, ನಮ್ಮ ಬೇಂದ್ರೆಯವರು, ಹೂವಿನ ಪೂಜೆ, ಚಿತ್ರದುರ್ಗದ ಬೆಟ್ಟ, ಬರೆದರೆ ಹೀಗಿರಬೇಕು.

ಪಠ್ಯಪುಸ್ತಕಗಳಿಗೆ ಸಂಬಂಧಿಸಿದ '**ಜ್ಞಾಪಕರೂಪ**'ಗಳು: ಶ್ರೀರಾಮ ಚಂದ್ರಪ್ರಭು, ಕ್ಷಮಾಮೂರ್ತಿ ಧರ್ಮರಾಜ, ಇಬ್ಬರು ದಳವಾಯಿಗಳು, ಬಿದನೂರಿನ ರಾಣಿ ವೀರಮ್ಮಾಜಿ, ಭಾರವಿಯ ಜೊತೆಯಲ್ಲಿ ಬಾ ಇಂದ್ರಕೀಲಕ್ಕೆ, ಹುಲಿಗಳ ಹಜ್ಜೆ.

ಸೆಂಟ್ರಲ್ ಕಾಲೆಜ್ ಶತಮಾನೋತ್ಸವದ ಪ್ರಕಟನೆ: ನಮ್ಮ ತಾಯಿಗೆ ನೂರು ವರ್ಷ.

ಬಾಲಸಾಹಿತ್ಯ: ಮಕ್ಕಳಿಗೆ ಮಣಿದೀಪ, ಹತ್ತು ದಿಕ್ಕಿನ ಬೆಳಕು, ಮಧ್ಯಮವ್ಯಾಯೋಗದ ಕಥೆ, ದೂತವಾಕ್ಯ ದೂತ ಘಟೋತ್ಕಚಗಳ ಕಥೆ, ಕರ್ಣಭಾರ ಊರುಭಂಗಗಳ ಕಥೆ.

* * * *

೧೯೬೪ರ ಪ್ರಕಟನೆಗಳು

ಡಾಕ್ಟರ್ ಎಂ. ಶಿವರಾಂ: ಮನೋನಂದನ.

ವಿ. ಸೀ: . . . ಸೊಹ್ರಾಬ್–ರುಸ್ತುಂ.

ಸಂಘದ ಹೊಸ ಪ್ರಕಟಣೆಗಳು

ಕರ್ಣಾಟಕ ಸಂಘ

ಸೆಂಟ್ರಲ್ ಕಾಲೆಜ್, ಬೆಂಗಳೂರು

ಅಮೆರಿಕದಲ್ಲಿ ನಾನು

ಬಿ. ಜಿ. ಎಲ್. ಸ್ವಾಮಿ

ನಮ್ಮಂತೆಯೇ ಅಮೆರಿಕನ್ನರು, ಅಮೆರಿಕನ್ನರಂತೆಯೇ ನಾವು—ಕೊಂಟೆ ಚೇಷ್ಟೆಗಳಲ್ಲಿ; ಇದಿಷ್ಟೇ ಈ ಅನುಭವ ಚಿತ್ರಗಳ ತಾತ್ಪರ್ಯ; ಅಮೆರಿಕಕ್ಕೆ ಬೆಲೆ ಕಟ್ಟುವುದಲ್ಲ.

. . . ತನಗಿಂತ ಪುರಾತನವಾದ ದೇಶಗಳು ಸಾಧಿಸಿಕೊಳ್ಳಲಾಗದ ಮೇಲ್ಮೆಯನ್ನು ತಾನು ಸಂಪಾದಿಸಿಕೊಳ್ಳಬೇಕೆಂದೂ, ಆ ಸಂಪಾದನೆಯನ್ನು ತಾನು ಪ್ರಪಂಚದೊಡನೆ ಹಂಚಿಕೊಳ್ಳಬೇಕೆಂದೂ ಅಮೆರಿಕ ಆಶಿಸುವುದು ಸ್ವಾಭಾವಿಕವೇ ಎಂದು ನನಗನ್ನಿಸಿದೆ.

ನನ್ನ ದೃಷ್ಟಿಯಲ್ಲಿ ಅಮೆರಿಕನ್ನರು ಔದಾರ್ಯವುಳ್ಳ ಜನ; ಗುಣಗ್ರಹಣ ಶೀಲರು; ಸಹಾನುಭೂತಿಯ ಸ್ವಭಾವದವರು; ಸಹಾಯುಪರರು. ಅನ್ಯರ ಸ್ನೇಹವನ್ನು ಸಂಪಾದಿಸಿಕೊಂಡು ಆ ಸ್ನೇಹದಿಂದ ತಮ್ಮ ಬಲವನ್ನು ವೃದ್ಧಿಪಡಿಸಿಕೊಳ್ಳಬೇಕೆಂಬ ಯೋಚನೆ ಅವರಿಗೆ ಉಂಟೆಂದು ತೋರುತ್ತದೆ . . . ಇಂಥ ಗುಣ ಆ ಜನದಲ್ಲಿಲ್ಲದೆ ಹೋಗಿದ್ದಿದ್ದರೆ ನಾನು ಆರು ವರ್ಷ ಆ ದೇಶದಲ್ಲಿರುವುದು ಸಾಧ್ಯವಾಗುತ್ತಿರಲಿಲ್ಲ. ಶಾಸ್ತ್ರ ಸಂಶೋಧನ ಕಾರ್ಯದಲ್ಲಿ ನನಗೆ ಮಾರ್ಗದರ್ಶಕರಾಗಿದ್ದ ಹಿರಿಯ ವಿದ್ವಾಂಸರುಗಳೂ ನನ್ನೊಡನೆ ಶಾಸ್ತ್ರವ್ಯಾಸಂಗದಲ್ಲಿ ಸಹಭಾಗಿಗಳಾದ ಯುವಜನರು ಅವರ ಮಿತ್ರವರ್ಗಗಳೂ ತೋರಿದ ವಾತ್ಸಲ್ಯ ಪ್ರೋತ್ಸಾಹಗಳು ನನಗೆ ಒಂದು ನೀತಿಪಾಠವಾಗಿದೆ. ಇದು ಅವರ ಗಂಭೀರ ಪಾರ್ಶ್ವ. ಇನ್ನೊಂದು ಪಾರ್ಶ್ವದಲ್ಲಿ ಹಾಸ್ಯಾವಕಾಶಗಳು ಇರಕೂಡದೆ? ಅದೂ ಮನುಷ್ಯ ಸ್ವಭಾವತಾನೆ? . . . ಹಾಸ್ಯಾಸ್ಪದವಾದಾಗ ನಾವೂ ಅವರಂತೆಯೇ, ಅವರೂ ನಮ್ಮಂತೆಯೆ. ಸಂದರ್ಭಗಳ ಸ್ವರೂಪ ಬೇರೆ ಬೇರೆ ಇರಬಹುದು . . . ಅದು ಹಾಗಿರುವುದೇ ಸ್ವಾರಸ್ಯವಲ್ಲವೆ.

ಇದನ್ನು ವಾಚಕ ಮಹಾಶಯರು ಸಹನೆಯಿಂದ ನೋಡಿಯಾರೆಂದು ನಂಬಿದ್ದೇನೆ.

ಲೇಖಕರ 'ಅರಿಕೆ'ಯಿಂದ

ಕ್ರೌನ್ ೮. ೧೩೨ ಪುಟಗಳು, ೨೨ ಚಿತ್ರಗಳು

ಬೆಲೆ: ಸಾದಾಪ್ರತಿ ರೂ. ೩.೨೫; ಕ್ಯಾಲಿಕೊ ಪ್ರತಿ ರೂ. ೫.೦೦

ಕಾವ್ಯಾಲಯ * ಪ್ರಕಾಶಕರು * ಮೈಸೂರು